ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಡಿಸೆಂಬರ್ 27, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 224 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



**ಈರಣ್ಣನ ಕಾರ್ತೀಕ** ದಾವಣಗೆರೆ ಹಳೆಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ಕಡೇ ಕಾರ್ತೀಕೋತ್ಸವ ನೆರವೇರಿತು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ದೀಪ ಬೆಳಗಿಸಿ ಕಾರ್ತೀಕೋತ್ಸವಕ್ಕೆ ಚಾಲನೆ ನೀಡಿದರು.

# ಕೊರೊನಾ: ಏಳು ದಿನ ಮನೆ ವಾಸ ಕಡ್ಡಾಯ

**ಹೊಸ ವರ್ಷಾಚರಣೆ ಸಂದರ್ಭದಲ್ಲಿ ಯಾವುದೇ ನಿರ್ಬಂಧ ಇರುವುದಿಲ್ಲ**

ಬೆಂಗಳೂರು. ಡಿ. 26 - ಕೋವಿಡ್ ಸೋಂಕಿಗೆ ಒಳಗಾದವರು ಏಳು ದಿನ ಮನೆಯಲ್ಲೇ ಪ್ರತ್ಯೇಕವಾಗಿರಬೇಕು ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಕೊರೊನಾ ರೂಪಾಂತರ ತಳಿ ಜೆಎನ್.1 ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಣಯ ಕೈಗೊಂಡಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಉಪಸಮಿತಿ ಸಭೆ ಈ ಮಹತ್ವದ ತೀರ್ಮಾನ ಕೈಗೊಂಡಿರುವುದಲ್ಲದೆ, ಹೊಸ ವರ್ಷಾಚರಣೆ ಸಂದರ್ಭದಲ್ಲಿ ಯಾವುದೇ ನಿರ್ಬಂಧ ಇರುವುದಿಲ್ಲ ಎಂದಿದೆ.

ಆದರೆ, ಗುಂಪು ಸೇರುವುದಕ್ಕೂ ಮುನ್ನ ಸಾರ್ವಜನಿಕರು ಹೆಚ್ಚು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಕೇಂದ್ರ ಸರ್ಕಾರ ರೂಪಾಂತರಿ ತಳಿ ಬಗ್ಗೆ ನೀಡಿರುವ ಮಾಹಿತಿ ಆಧರಿಸಿ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಆರೋಗ್ಯ, ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಕೆಲವು ಸಲಹೆ-ಸೂಚನೆಗಳನ್ನು ನೀಡಲಾಗಿದೆ.

ರೂಪಾಂತರ ತಳಿ ತೀರಾ ಪ್ರಾಣಾಪಾಯವಲ್ಲ, ಇದನ್ನು ಔಷಧಗಳಿಂದ ಗುಣಪಡಿಸಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಆದಾಗ್ಯೂ, ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ. ಕೆಮ್ಮು, ಜ್ವರ, ಶೀತ, ಗಂಟಲು ನೋವು ಬಂದರೆ ಮನೆಯಲ್ಲೇ ಉಳಿದುಕೊಳ್ಳಿ ಎಂದು ಸರ್ಕಾರ ಸಲಹೆ ಮಾಡಿದೆ.

ಇಂತಹ ಸಮಸ್ಯೆಗಳೂ ಸೇರಿದಂತೆ ಕೋವಿಡ್ ಸೋಂಕು ತಗುಲಿದವರಿಗೆ ಖಾಸಗಿ ಸಂಸ್ಥೆಗಳು ಕಡ್ಡಾಯವಾಗಿ ರಜೆ ನೀಡಬೇಕು.

ಮಕ್ಕಳಲ್ಲಿ ಇಂತಹ ಯಾವುದೇ ಲಕ್ಷಣ ಕಂಡುಬಂದರೆ ಶಾಲೆಗಳಿಗೆ ಕಳುಹಿಸಬೇಡಿ ಎಂದು ಪೋಷಕರಿಗೆ ಸಲಹೆ ಮಾಡಿರುವ ಸರ್ಕಾರ ತಕ್ಷಣ ವೈದ್ಯರ ಸಲಹೆ ಪಡೆದು ಚಿಕಿತ್ಸೆ ನೀಡಿ ಎಂದಿದೆ.

ಹೊರಗೆ ಓಡಾಡುವುದು ಅನಿವಾರ್ಯ ಎಂದಾದರೆ ಮಾಸ್ಕ್ ಕಡ್ಡಾಯವಾಗಿ ಧರಿಸಿ ಎಂದು ತಿಳಿಸಿದೆ. ಸಭೆಯಲ್ಲಿ ಭಾಗವಹಿಸಿದ್ದ ತಜ್ಞರು, ಕೋವಿಡ್ ವೈರಸ್ ರೂಪಾಂತರಗೊಳ್ಳುತ್ತಲೇ ಇರುತ್ತದೆ, ಜನರು ಆತಂಕಗೊಳ್ಳುವುದು ಬೇಡ, ಕೆಲವು ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವಂತೆ ಸರ್ಕಾರ ಸಲಹೆ ಮಾಡಿದೆ. ಸಾಂಕ್ರಾಮಿಕ ಹಂತವನ್ನು ದಾಟಿದ್ದೇವೆ, ಸ್ಥಳೀಯ ಹಂತಕ್ಕೆ ತಲುಪಿದ್ದೇವೆ. ಈ ಸಮಯದಲ್ಲಿ ಮುಂಜಾಗ್ರತೆ ವಹಿಸುವ ಹಾಗೂ ಲಸಿಕೆ ಪಡೆಯುವ ಮೂಲಕ ಈ ಮಹಾಮಾರಿಯನ್ನು ಎದುರಿಸಬಹುದಾಗಿದೆ.

ಜೆಎನ್.1 ನಂತರ ಮತ್ತಷ್ಟು (5ನೇ ಪುಟಕ್ಕೆ)

# ಯುವನಿಧಿ ಭಿತ್ತಿಪತ್ರ ಬಿಡುಗಡೆ

## ಸೇವಾ ಸಿಂಧು, ಕರ್ನಾಟಕ ಒನ್, ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರಗಳಲ್ಲಿ ನಿರುದ್ಯೋಗ ಭತ್ಯೆಗಾಗಿ ನೋಂದಣಿಗೆ ಚಾಲನೆ

ದಾವಣಗೆರೆ, ಡಿ. 26 - ರಾಜ್ಯ ಸರ್ಕಾರದ ಐದನೇ ಗ್ಯಾರಂಟಿ ಯೋಜನೆಯಡಿ ಯುವನಿಧಿಯ ಭಿತ್ತಿಪತ್ರವನ್ನು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಮ್ಮ ಕಚೇರಿಯಲ್ಲಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಯುವಜನತೆಯ ಉಜ್ವಲ ಭವಿಷ್ಯಕ್ಕಾಗಿ ರಾಜ್ಯ ಸರ್ಕಾರ ನಿರುದ್ಯೋಗ ಭತ್ಯೆ ಯೋಜನೆ ಜಾರಿಗೆ ತರುತ್ತಿದೆ. ಇದರ ಅಂಗವಾಗಿ ನಿರುದ್ಯೋಗಿ ಡಿಪ್ಲೋಮಾ ಪದವೀಧರರಿಗೆ 1,500 ರೂ. ಹಾಗೂ ಪದವೀಧರರಿಗೆ 3,000 ರೂ.ಗಳ ನಿರುದ್ಯೋಗ ಭತ್ಯೆಯನ್ನು ನೀಡಲಾಗುವುದು ಎಂದರು.

2023ರಲ್ಲಿ ಪದವಿ ಇಲ್ಲವೇ ಡಿಪ್ಲೋಮಾ ಪಡೆದು ಆರು ತಿಂಗಳವರೆಗೆ ನಿರುದ್ಯೋಗಿಗಳಾಗಿರುವವರಿಗೆ ಈ ಭತ್ಯೆ ಲಭ್ಯವಿದೆ. ವಿದ್ಯಾಭ್ಯಾಸ ಮುಂದುವರೆಸುತ್ತಿರುವವರು ಇಲ್ಲವೇ ಉದ್ಯೋಗಕ್ಕೆ ಸೇರ್ಪಡೆಯಾದವರಿಗೆ ಭತ್ಯೆ ನೀಡುವುದಿಲ್ಲ. ಈ ಬಗ್ಗೆ ತಪ್ಪು ಮಾಹಿತಿ ನೀಡಿದಲ್ಲಿ ದಂಡ ವಿಧಿಸಲಾಗುವುದು ಎಂದು ತಿಳಿಸಿದರು.

ಮುಂದಿನ ಎರಡು ವರ್ಷಗಳವರೆಗೆ ಇಲ್ಲವೇ ಉದ್ಯೋಗ ಸಿಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಭತ್ಯೆ ಸಿಗಲಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

2023ರಲ್ಲಿ ಪದವಿ ಇಲ್ಲವೇ ಡಿಪ್ಲೋಮಾ ಪಡೆದು ಆರು ತಿಂಗಳವರೆಗೂ ನಿರುದ್ಯೋಗಿಗಳಾಗಿರುವವರು ಇಂದಿನಿಂದಲೇ ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಾಯಿಸಿಕೊಳ್ಳಬಹುದು ಎಂದು ಹೇಳಿದರು.

ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲೂ ಉಚಿತವಾಗಿ ಅರ್ಜಿ ಸಲ್ಲಿಸಬಹುದು. ಜನವರಿಯಿಂದ ಇವರಿಗೆ ನಿರುದ್ಯೋಗ ಭತ್ಯೆ ಸಿಗಲಿದೆ ಎಂದು ವಿವರಿಸಿದರು.

ಅರ್ಜಿ ದಾಖಲಿಸುವ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪದವಿ/ಡಿಪ್ಲೋಮಾ ದಾಖಲಾತಿ, ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಖಾತೆಗಳ ವಿವರ ಸಲ್ಲಿಸಬೇಕು ಎಂದು ಹೇಳಿದರು.

ಕರ್ನಾಟಕದ ವಾಸಿಗಳು ಹಾಗೂ ಕರ್ನಾಟಕದಲ್ಲಿ ಪದವಿ (4ನೇ ಪುಟಕ್ಕೆ)



### ಪ್ರತಿ ತಿಂಗಳು ಹಾಕಬೇಕು ನಿರುದ್ಯೋಗ ಹಾಜರಿ!

**ಫಲಾನುಭವಿಗಳ ಸಂಖ್ಯೆ ಬಗ್ಗೆ ಸದ್ಯಕ್ಕಿಲ್ಲ ಸ್ಪಷ್ಟನೆ**

ದಾವಣಗೆರೆ, ಡಿ. 26 - ನಿರುದ್ಯೋಗಿಗಳಿಗೆ ಭತ್ಯೆ ನೀಡುವ ಯುವನಿಧಿಯ ಫಲಾನುಭವಿಗಳು ಪ್ರತಿ ತಿಂಗಳು ತಾವು ಇನ್ನೂ ನಿರುದ್ಯೋಗಿಗಳು ಎಂಬ ಬಗ್ಗೆ ಸ್ವಯಂ ಮಾಹಿತಿ ದಾಖಲಿಸಬೇಕಿದೆ.

ಪ್ರತಿ ತಿಂಗಳು 25ನೇ ತಾರೀಖಿನಂತೆ ಮೊಬೈಲ್ ಮೆಸೇಜ್ ಮೂಲಕ ನಿರುದ್ಯೋಗಿಯಾಗಿರುವ ಇಲ್ಲವೇ ಉದ್ಯೋಗ ಸಿಕ್ಕಿರುವ ಬಗ್ಗೆ ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

ಪ್ರತಿ ತಿಂಗಳು ಕ್ರಮ ರಹಿತವಾಗಿ ಶೇ.10ರಷ್ಟು ಫಲಾನು ಭವಿಗಳ ವಿವರಗಳನ್ನು ಅಧಿಕಾರಿ ಗಳು ಪರಿಶೀಲಿಸಲಿದ್ದಾರೆ. ತಪ್ಪು ಮಾಹಿತಿ ನೀಡಿದ್ದಲ್ಲಿ ದಂಡ ವಿಧಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ವಿದ್ಯಾರ್ಥಿಗಳು ಸಲ್ಲಿಸುವ ದಾಖಲೆಗಳನ್ನು ಎನ್.ಎ.ಡಿ. (ನ್ಯಾಷನಲ್ ಅಕಾಡೆಮಿಕ್ ಡೆಪಾಸಿಟರಿ) ಇಲ್ಲವೇ ಡಿಜಿ ಲಾಕರ್‌ನಲ್ಲಿ ಲಭ್ಯವಿರುವ ಮಾಹಿತಿಯ ಮೂಲಕ ಪರಿಶೀಲಿಸಲಾಗುವುದು. ನಂತರ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನಿರುದ್ಯೋಗ ಭತ್ಯೆ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯಗಳ ಮೂಲಕ ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಯುವನಿಧಿ ಯೋಜನೆಗೆ (4ನೇ ಪುಟಕ್ಕೆ)

### ಬಿಹಾರದ 3.5 ಲಕ್ಷ ಗುತ್ತಿಗೆ ಶಿಕ್ಷಕರ ಖಾಯಮಾತಿ

ಪಾಟ್ನಾ, ಡಿ. 26 – ಬಿಹಾರದ ವಿವಿಧ ಸರ್ಕಾರಿ ಶಾಲೆಗಳಲ್ಲಿನ 3.5 ಲಕ್ಷ ಗುತ್ತಿಗೆ ಶಿಕ್ಷಕರನ್ನು ಖಾಯಂಗೊಳಿಸಲು ಬಿಹಾರ ಸಂಪುಟ ನಿರ್ಧಾರ ತೆಗೆದುಕೊಂಡಿದೆ.

ಕಳೆದ ಹಲವಾರು ವರ್ಷಗಳಿಂದ ಗುತ್ತಿಗೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದವರನ್ನು ಇನ್ನು ಮುಂದೆ 'ವಿಶೇಷ ಶಿಕ್ಷಕರು' ಎಂದು ಪರಿಗಣಿಸಲಾಗುವುದು. ಇವರು ಸರ್ಕಾರಿ ಉದ್ಯೋಗಿಗಳ ಸ್ಥಾನಮಾನ ಪಡೆಯಲಿದ್ದಾರೆ ಎಂದು ರಾಜ್ಯ ಹೆಚ್ಚುವರಿ ಸಂಪುಟ ಕಾರ್ಯದರ್ಶಿ ಎಸ್. ಸಿದ್ಧಾರ್ಥ ಹೇಳಿದ್ದಾರೆ.

ಹಾಲಿ ಇರುವ ಗುತ್ತಿಗೆ ಶಿಕ್ಷಕರು (2ನೇ ಪುಟಕ್ಕೆ)

### ರಾಜ್ಯದಲ್ಲಿ 74 ಕೊರೊನಾ ಸೋಂಕಿತರು ಪತ್ತೆ

ಬೆಂಗಳೂರು, ಡಿ. 26 – ರಾಜ್ಯದಲ್ಲಿ ಮಂಗಳವಾರ 74 ಕೊರೊನಾ ಪ್ರಕರಣಗಳು ಪತ್ತೆಯಾಗಿವೆ ಹಾಗೂ ಕೊರೊನಾ ಸೋಂಕು ಹೊಂದಿದ್ದ ಇಬ್ಬರು ಸಾವನ್ನಪ್ಪಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 464ಕ್ಕೆ ಏರಿಕೆಯಾಗಿದೆ ಎಂದು ರಾಜ್ಯ ಆರೋಗ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಳೆದ 24 ಗಂಟೆಗಳಲ್ಲಿ 44 (2ನೇ ಪುಟಕ್ಕೆ)

### ರಿಸರ್ವ್ ಬ್ಯಾಂಕ್‌ಗೆ ಸ್ಫೋಟ ಬೆದರಿಕೆಯ ಇ-ಮೇಲ್

ನವದೆಹಲಿ, ಡಿ. 26 – ಮುಂಬೈನಲ್ಲಿ 11 ಬಾಂಬ್ ಸ್ಫೋಟ ನಡೆಸುವುದಾಗಿ ರಿಸರ್ವ್ ಬ್ಯಾಂಕ್‌ಗೆ ಬೆದರಿಕೆಯ ಇ-ಮೇಲ್ ಕಳಿಸಲಾಗಿದೆ. ಪೊಲೀಸರು ಈ ಬಗ್ಗೆ ಪರಿಶೀಲನೆ ನಡೆಸಿದ್ದಾರೆ.

ಬೆಳಿಗ್ಗೆ 10.50ರ ಸಮಯದಲ್ಲಿ ಬೆದರಿಕೆಯ ಇ-ಮೇಲ್ ಕಳಿಸಲಾಗಿತ್ತು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಆರ್.ಬಿ.ಐ. ಗವರ್ನರ್ ಶಕ್ತಿಕಾಂತ ದಾಸ್ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಬೇಕು ಎಂದು ಬೆದರಿಕೆ ಹಾಕಲಾಗಿತ್ತು.

## ಸೋನಿಯಾ ಅಳಿಯನಿಗೆ ಅಕ್ರಮ ಆಸ್ತಿ ಸಂಪರ್ಕ : ಇ.ಡಿ. ಆರೋಪ



ನವದೆಹಲಿ, ಡಿ. 26 – ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಅಳಿಯ ರಾಬರ್ಟ್ ವಾದ್ರಾ ಅವರು ಮಧ್ಯವರ್ತಿ ಸಂಜಯ್ ಭಂಡಾರಿಗೆ ಸಂಬಂಧಿಸಿದ ಅಕ್ರಮ ಹಣವನ್ನು ಬಳಸಿಕೊಂಡು ಲಂಡನ್‌ನಲ್ಲಿ ಆಸ್ತಿಯೊಂದನ್ನು ನವೀಕರಿಸಿಕೊಂಡು, ಅಲ್ಲಿ ನೆಲೆಸಿದ್ದರು ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.

2016ರಲ್ಲಿ ಭಂಡಾರಿ ಬ್ರಿಟನ್‌ಗೆ ಪಲಾಯನ ಮಾಡಿದ್ದ. ಆತನನ್ನು ಭಾರತಕ್ಕೆ ಹಸ್ತಾಂತರಿಸಲು ಬ್ರಿಟನ್ ಸರ್ಕಾರ ಈ ವರ್ಷ ಜನವರಿಯಲ್ಲಿ ಸಮ್ಮತಿಸಿತ್ತು. ಜಾರಿ ನಿರ್ದೇಶನಾಲಯ ಹಾಗೂ ಸಿ.ಬಿ.ಐ.ಗಳು ಈ ಪ್ರಕರಣದ ವಿಚಾರಣೆ ನಡೆಸುತ್ತಿವೆ.

ಇದೇ ಮೊದಲ ಬಾರಿಗೆ ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ವಾದ್ರಾ ಹೆಸರನ್ನು ಹೇಳಿದೆ. ಯು.ಎ.ಇ.ಯಲ್ಲಿರುವ ಭಾರತೀಯ ಮೂಲದ ಉದ್ಯಮಿ ಚೆರುವತೂರು ಚಕುಟ್ಟಿ ಥಂಪಿ ಹಾಗೂ ಬ್ರಿಟನ್ ನಾಗರಿಕ ಸುಮಿತ್ ಚಡ್ಡ ವಿರುದ್ಧ ಜಾರಿ ನಿರ್ದೇಶನಾಲಯ ಹೊಸ ಆರೋಪ ಪಟ್ಟಿ ದಾಖಲಿಸಿದೆ. ಅದರಲ್ಲಿ ವಾದ್ರಾ ಹೆಸರು ನಮೂದಿಸಲಾಗಿದೆ.

2020ರಲ್ಲಿ ಥಂಪಿ ಬಂಧಿಸಲಾಗಿತ್ತು. ಈತ ವಾದ್ರಾ ನಿಕಟವರ್ತಿ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಸಂಜಯ್ ಭಂಡಾರಿ ಹಲವು ಅಘೋಷಿತ ವಿದೇಶಿ ಆದಾಯ ಹಾಗೂ ಆಸ್ತಿ ಹೊಂದಿದ್ದಾನೆ. ಇದರಲ್ಲಿ ಲಂಡನ್‌ನಲ್ಲಿರುವ ನಂ. 12 ಬ್ರೈಯಾನ್‌ಸ್ಟನ್ ಸ್ಕ್ವೇರ್ ಆಸ್ತಿ ಹಾಗೂ 6 ಗ್ರಾಸ್ವೆನರ್ ಹಿಲ್ ಕೋರ್ಟ್ ಆಸ್ತಿಗಳು ಸೇರಿವೆ.

ಈ ಆಸ್ತಿಗಳು ಅಕ್ರಮ ಹಣ ತಡೆ ಕಾಯ್ದೆಯಡಿ ಬರುತ್ತವೆ. ಈ ಆಸ್ತಿಗಳನ್ನು ಥಂಬಿ ಹಾಗೂ ಸುಮಿತ್ ಚಡ್ಡ ಅವರು ಅಕ್ರಮ ಹಣಕ್ಕಾಗಿ ಬಳಸಿಕೊಂಡಿದ್ದರು. ಥಂಪಿ ಹಾಗೂ ರಾಬರ್ಟ್ ವಾದ್ರಾ ನಿಕಟವರ್ತಿಗಳು.

12 ಬ್ರೈಯಾನ್‌ಸ್ಟನ್ ಸ್ಕ್ವೇರ್ ಆಸ್ತಿಯನ್ನು ಸುಮಿತ್ ಚಡ್ಡ ಮೂಲಕ ವಾದ್ರಾ ನವೀಕರಿಸಿದ್ದಷ್ಟೇ ಅಲ್ಲದೇ, ಅಲ್ಲಿ ನೆಲೆಸಿದ್ದರು. ವಾದ್ರಾ ಹಾಗೂ ಸಿ.ಸಿ. ಥಂಪಿ ದೆಹಲಿಯ ಫರೀದಾಬಾದ್‌ನಲ್ಲಿ ದೊಡ್ಡ ಜಾಗ ಖರೀದಿಸಿದ್ದರು. ಪರಸ್ಪರ ಹಣಕಾಸು ವಹಿವಾಟು ಹೊಂದಿದ್ದರು (4ನೇ ಪುಟಕ್ಕೆ)

## ಮಹಿಳೆಯರಿಂದ 120 ಕೋಟಿ ಉಚಿತ ಪ್ರಯಾಣ



ಬೆಂಗಳೂರು, ಡಿ. 26 - ಶಕ್ತಿ ಯೋಜನೆಯಡಿ ಇದುವರೆಗೆ ರಾಜ್ಯ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಮಹಿಳೆಯರು 120 ಕೋಟಿ ಉಚಿತ ಪ್ರಯಾಣ ಮಾಡಿದ್ದಾರೆ. ಬಿಎಂಟಿಸಿ ಬಸ್‌ಗಳಲ್ಲಿ ನಿತ್ಯ 40 ಲಕ್ಷ ಜನ ಪ್ರಯಾಣಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಬಿಎಂಟಿಸಿಗೆ ಅತ್ಯಾಧುನಿಕ ಸೌಲಭ್ಯ ಒಳಗೊಂಡ 100 ವಿದ್ಯುತ್ ಚಾಲಿತ ಬಸ್‌ಗಳನ್ನು ಸೇರ್ಪಡೆಗೊಳಿಸಿ ಮಾತನಾಡಿದ ಅವರು, ಯೋಜನೆಯಡಿ ಎಲ್ಲ ಜಾತಿ, ಧರ್ಮ, ಅಂತಸ್ತಿನ ಮಹಿಳೆಯರು ಉಚಿತ ಪ್ರಯಾಣ ಮಾಡುತ್ತಿದ್ದಾರೆ ಎಂದರು.

ಕಾರ್ಮಿಕರು, ರೈತ ಹಾಗೂ ದುಡಿಯುವ ವರ್ಗದ ಮಹಿಳೆಯರಿಗೆ ಶಕ್ತಿ ಯೋಜನೆಯಿಂದ ಸಾಕಷ್ಟು ಹಣ ಉಳಿತಾಯವಾಗಿದೆ. ಆ ಹಣವನ್ನು ತಮ್ಮ ಕುಟುಂಬದ ಇತರೆ ಅಗತ್ಯಗಳಿಗೆ ಬಳಸುತ್ತಿದ್ದಾರೆ. (2ನೇ ಪುಟಕ್ಕೆ)

## ಮೋದಿ ಆರ್ಥಿಕ ತಜ್ಞರೇ? : ಸಿದ್ದರಾಮಯ್ಯ

### ಗ್ಯಾರಂಟಿ ಅನುಷ್ಠಾನಗೊಳಿಸಿದರೂ ಖಜಾನೆ ದಿವಾಳಿ ಆಗಿಲ್ಲ ಎಂದ ಸಿಎಂ



ಬೆಂಗಳೂರು, ಡಿ. 26 - ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದ್ದರೂ ನಮ್ಮ ಖಜಾನೆ ದಿವಾಳಿ ಆಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಪರೋಕ್ಷವಾಗಿ ಟೀಕಿಸಿದ್ದಾರೆ.

ಮೋದಿ ಅವರೇನು ಆರ್ಥಿಕ ತಜ್ಞರೇ? ಭರವಸೆಗಳನ್ನು ಈಡೇರಿಸಿದರೆ ರಾಜ್ಯ ದಿವಾಳಿ ಆಗುತ್ತದೆ ಎಂದು ಭಾಷಣ ಮಾಡಿದ್ದರು. ಈಗ ಎಲ್ಲಿ ದಿವಾಳಿ ಆಗಿದೆ? ರಾಜ್ಯ ಆರ್ಥಿಕವಾಗಿ ಸದೃಢವಾಗಿದೆ ಎಂದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಐದನೇ ಹಾಗೂ ಕೊನೆಯ ಗ್ಯಾರಂಟಿ ಯುವನಿಧಿ ಯೋಜನೆಗೆ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆ ಎಂದು ಮೋದಿ ಹೇಳಿದ್ದರು. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಅಂದರೆ ಇಷ್ಟೊತ್ತಿಗೆ 20 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಎಲ್ಲಿ ಇಷ್ಟು ಉದ್ಯೋಗ ನೀಡಿದ್ದೀರಿ, ನೀವು ಕೊಟ್ಟ ಭರವಸೆ ಈಡೇರಿಸಿಲ್ಲ ಎಂದರು.

ವಿಧಾನಸಭಾ ಚುನಾವಣೆಗೂ ಮುನ್ನ ಕರ್ನಾಟಕ ಕಾಂಗ್ರೆಸ್ ಜನತೆಗೆ ನೀಡಿದ್ದ ಐದು ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರ ಅನುಷ್ಠಾನಗೊಳಿಸಿದೆ ಎಂದು ಸಿದ್ದರಾಮಯ್ಯ ಹೇಳಿದರು. ಭಾರತದ ಇತಿಹಾಸದಲ್ಲಿ ಮೋದಿಯವರಷ್ಟು ಸುಳ್ಳು ಹೇಳುವ ಪ್ರಧಾನಿ ಇವತ್ತಿನವರೆಗೂ ಬಂದಿಲ್ಲ ಎಂದು ಟೀಕಿಸಿದರು.

ವಿವೇಕಾನಂದ ಜಯಂತಿಯಂದು ಲಕ್ಷಾಂತರ ಯುವಕ-ಯುವತಿಯರ ಸಮ್ಮುಖದಲ್ಲಿ ಯುವನಿಧಿಯನ್ನು ನೇರವಾಗಿ ಅರ್ಹರ ಖಾತೆಗೆ ಜಮೆ ಮಾಡುವ ಕಾರ್ಯಕ್ರಮ ನಡೆಸುತ್ತೇವೆ ಎಂದರು.

ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳನ್ನೂ ಭರ್ತಿ ಮಾಡಲಾಗುವುದು ಎಂದು ಇದೇ (2ನೇ ಪುಟಕ್ಕೆ)

### ರೌಡಿ ಶೀಟರ್ ಕುಟುಂಬದಿಂದ ಪೊಲೀಸ್ ಪೇದೆಯ ಹತ್ಯೆ

ಕನ್ನೌಜ್, ಡಿ. 26 – ಅಪರಾಧಿಕ ಹಿನ್ನೆಲೆಯ ವ್ಯಕ್ತಿಯನ್ನು ಬಂಧಿಸಲು ಹೋದಾಗ ಆತನ ಕುಟುಂಬದವರು ಗುಂಡಿನ ದಾಳಿ ನಡೆಸಿ ಪೊಲೀಸ್ ಪೇದೆಯೊಬ್ಬರನ್ನು ಹತ್ಯೆ ಮಾಡಿದ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ಕನ್ನೌಜ್‌ನ ವಿಷ್ಣುಘರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ದಾಳಿಯಲ್ಲಿ ಪೊಲೀಸ್ ಪೇದೆ ಸಚಿನ್ ರಾಠಿ (28) ಅವರು ಸಾವನ್ನಪ್ಪಿದ್ದಾರೆ. 2019ರಲ್ಲಿ ಅವರು ಪೊಲೀಸ್ ಪಡೆಗೆ ಸೇರಿದ್ದರು. ಮುಂದಿನ ಫೆಬ್ರವರಿಯಲ್ಲಿ ಅವರ ಮದುವೆ ನಿಶ್ಚಯವಾಗಿತ್ತು.

20 ಪ್ರಕರಣಗಳನ್ನು ಎದುರಿಸುತ್ತಿದ್ದ ರೌಡಿ ಶೀಟರ್ ಅಶೋಕ್ ಕುಮಾರ್ ಅಲಿಯಾಸ್ ಮುನ್ನಾ ಯಾದವ್ ಎಂಬಾತನ ವಿರುದ್ಧ ಜಾಮೀನು ರಹಿತ ವಾರಂಟ್ ಇತ್ತು. ಆತ ಮನೆಯಲ್ಲಿರುವ ಮಾಹಿತಿ ಪಡೆದು (5ನೇ ಪುಟಕ್ಕೆ)

### ಹಡಗು ಮೇಲೆ ದಾಳಿ ನಡೆಸಿದವರು ಎಲ್ಲೇ ಇದ್ದರೂ ಬಿಡೆವು : ಸಿಂಗ್

ಮುಂಬೈ, ಡಿ. 26 – ವ್ಯಾಪಾರಿ ಹಡಗುಗಳಾದ ಎಂವಿ ಚೆಮ್ ಪ್ಲುಟೋ ಹಾಗೂ ಎಂವಿ ಸಾಯಿ ಬಾಬಾ ಮೇಲೆ ಇತ್ತೀಚೆಗೆ ನಡೆಸಲಾದ ದಾಳಿಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಈ ದಾಳಿಯ ಹಿಂದಿರುವವರು ಸಮುದ್ರದ ತಳದಲ್ಲೇ ಇದ್ದರೂ ಬಿಡುವುದಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಐ.ಎನ್.ಎಸ್. ಇಂಫಾಲ್ ಕ್ಷಿಪಣಿ ವಿನಾಶಕವನ್ನು ನೌಕಾದಳಕ್ಕೆ ಸೇರ್ಪಡೆ ಮಾಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎವಿ ಚೆಮ್ ಪ್ಲುಟೋ ಮೇಲೆ ನಡೆದ ಡ್ರೋನ್ ದಾಳಿ ಹಾಗೂ ಎಂವಿ ಸಾಯಿಬಾಬಾ ಮೇಲೆ ಕೆಂಪು ಸಮುದ್ರದಲ್ಲಿ ನಡೆದ ದಾಳಿಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದವರು ಹೇಳಿದ್ದಾರೆ. ಎಂವಿ ಚೆಮ್ ಪ್ಲುಟೊ (2ನೇ ಪುಟಕ್ಕೆ)

# ನನ್ನನ್ನು ಉಚ್ಛಾಟಿಸಿದರೆ 40 ಸಾವಿರ ಕೋಟಿ ರೂ. ಅವ್ಯವಹಾರ ಬಯಲು



**ಬಿಜೆಪಿ ನಾಯಕರಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ**

**ಬ್ಲಾಕ್‌ಮೇಲ್‌ನಲ್ಲಿ ಬಿಜೆಪಿ ಎಂದು ಕಾಂಗ್ರೆಸ್ ಲೇವಡಿ, ಪ್ರಧಾನಿ ಏಕೆ ಮೌನ ? ಎಂದು ಸಿದ್ದರಾಮಯ್ಯ ಪ್ರಶ್ನೆ**

ಬೆಂಗಳೂರು, ಡಿ. 26 - ಬಿಜೆಪಿಯಿಂದ ನನ್ನನ್ನು ಉಚ್ಛಾಟಿಸಿದರೆ ಕೊರೊನಾ ಸಾಂಕ್ರಾಮಿಕದ ವೇಳೆ ನಡೆದಿರುವ 40 ಸಾವಿರ ಕೋಟಿ ರೂ. ಅವ್ಯವಹಾರದ ದಾಖಲೆಯನ್ನು ಬಿಡುಗಡೆ ಮಾಡುತ್ತೇನೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಮಂಗಳವಾರ ಸ್ಫೋಟಕ ಹೇಳಿಕೆ ನೀಡಿರುವ ಯತ್ನಾಳ್, ಸ್ವಪಕ್ಷೀಯರ ವಿರುದ್ಧ ಮತ್ತೆ ತಮ್ಮ ವಾಗ್ದಾಳಿಯನ್ನು ಮುಂದುವರೆಸಿದ್ದಾರೆ.

ನಾನು ಸತ್ಯ ಹೇಳಿದರೆ ಎಲ್ಲರಿಗೂ ಭಯವಾಗುತ್ತದೆ. ಕೋವಿಡ್ ಸಾಂಕ್ರಾಮಿಕದ ವೇಳೆ ಬಿಜೆಪಿ ಸರ್ಕಾರದ ಅವಧಿಯಲ್ಲಿ 40 ಸಾವಿರ ಕೋಟಿ ರೂ. ಅವ್ಯವಹಾರ ನಡೆದಿದೆ. ನನ್ನನ್ನು ಪಕ್ಷದಿಂದ ಹೊರ ಹಾಕಿದರೆ, ಇವರ ಬಣ್ಣ ಬಯಲು ಮಾಡುತ್ತೇನೆ ಎಂದು ಹೇಳಿದ್ದಾರೆ.

ಯಡಿಯೂರಪ್ಪನವರ ಅವಧಿಯಲ್ಲಿ 45 ರೂ.ಗಳ ಮಾಸ್ಕ್‌ಗೆ 485 ರೂ. ಖರ್ಚು ಹಾಕಲಾಗಿತ್ತು. ಬೆಡ್‌ಗಳಿಗೆ ಒಂದು ದಿನಕ್ಕೆ 10 ಸಾವಿರ ರೂಪಾಯಿ ಬಾಡಿಗೆ ನೀಡಿದ್ದಾರೆ. ಖರೀದಿ ಮಾಡಿದ್ರೆ ಒಂದು ದಿನದ ಬಿಲ್‌ನಲ್ಲಿ 2 ಬೆಡ್ ಬರುತ್ತಿದ್ದವು ಎಂದು ಅವರು ಹೇಳಿದರು.

ನನಗೂ ಕೊರೊನಾ ಬಂದಾಗ ಆಸ್ಪತ್ರೆಯಲ್ಲಿ 5 ಲಕ್ಷ ರೂಪಾಯಿ ಬಿಲ್ ಹಾಕಿದರು. ಇನ್ನು ಬಡವರು ಏನು ಮಾಡಬೇಕು ? ಕೊರೊನಾ ವೇಳೆ ಕೋಟಿ ಕೋಟಿ ಲೂಟಿ ಆಗಿದೆ ಎಂದೂ ಆರೋಪಿಸಿದರು.

ಈ ಬಗ್ಗೆ ಹೇಳಿಕೆ ನೀಡಿರುವ ರಾಜ್ಯ ಕಾಂಗ್ರೆಸ್, ಬಿಜೆಪಿಯಲ್ಲಿ ಬ್ಲಾಕ್‌ಮೇಲ್ ಮಾಡಿ ಹುದ್ದೆ ಪಡೆಯುತ್ತಾರೆ ಎಂದು ಯತ್ನಾಳ್ ಅವರು ಹೇಳಿದ್ದರು. ಬಿಜೆಪಿಯ ಭ್ರಷ್ಟಾಚಾರದ ಜಾತಕ ಯತ್ನಾಳ್ ಕೈಯ್ಯಲ್ಲಿದೆ ಎಂದು ಹೇಳಿದೆ.

ಕಳ್ಳನ ಹುಳುಕು ಮತ್ತೊಬ್ಬ ಕಳ್ಳನಿಗೆ ಮಾತ್ರ ಗೊತ್ತಿರುತ್ತದೆ ಎಂಬಂತೆ ಬಿಜೆಪಿಯ ಭ್ರಷ್ಟಾಚಾರದ ಜಾತಕ ಯತ್ನಾಳ್ ಕೈಯ್ಯಲ್ಲಿದೆ. ಹೀಗಾಗಿ ಯತ್ನಾಳ್ ಅದೆಷ್ಟೇ ಪಕ್ಷ ವಿರೋಧಿ ಹೇಳಿಕೆ ಕೊಟ್ಟರೂ ಕ್ರಮ ಕೈಗೊಳ್ಳುವ ಧೈರ್ಯ ತೋರುತ್ತಿಲ್ಲ ಎಂದು ಲೇವಡಿ ಮಾಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ಸರ್ಕಾರ 40% ಕಮೀಷನ್ ಸರ್ಕಾರವಾಗಿತ್ತು ಎನ್ನುವ ನಮ್ಮ ಆರೋಪಕ್ಕೆ ಯತ್ನಾಳ್ ಅವರು ಸಾಕ್ಷಿ ಒದಗಿಸಿದ್ದಾರೆ ಎಂದಿದ್ದಾರೆ.

ಕೊರೊನಾ ಚಿಕಿತ್ಸೆ ಮತ್ತು ನಿಯಂತ್ರಣದ ಹೆಸರಲ್ಲಿ ಆಗಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸರ್ಕಾರ ಸುಮಾರು ರೂ.4,000 ಕೋಟಿ ರೂಪಾಯಿಗಳ ಭ್ರಷ್ಟಾಚಾರ ಮಾಡಿದೆ ಎಂದು ಪತ್ರಿಕಾಗೋಷ್ಠಿ ಕರೆದು ದಾಖಲೆಗಳ ಸಮೇತ ನಾವು ಆರೋಪ ಮಾಡಿದ್ದೆವು ಎಂದು ಸಿದ್ದರಾಮಯ್ಯ ನೆನಪಿಸಿದ್ದಾರೆ.

ಯತ್ನಾಳ್ ಅವರ ಆರೋಪವನ್ನು ಗಮನಿಸಿದರೆ, ನಮ್ಮ ಅಂದಾಜಿಗಿಂತಲೂ ಹತ್ತು ಪಟ್ಟು ಹೆಚ್ಚಿನ ಭ್ರಷ್ಟಾಚಾರ ನಡೆದಿರುವಂತೆ ಕಾಣುತ್ತಿದೆ. ನಮ್ಮ ಆರೋಪ ಕೇಳಿ ಹೌಹಾರಿ ಬಂದು ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದ ಆಗಿನ ಸಚಿವರ ದಂಡು ಈಗ ಎಲ್ಲಿ ಅಡಗಿಕೂತಿದೆ? ಎಂದವರು ಪ್ರಶ್ನಿಸಿದ್ದಾರೆ. ತಮ್ಮನ್ನು (4ನೇ ಪುಟಕ್ಕೆ)





# ಶಾಸ್ತ್ರೀಯ ಸಂಗೀತಕ್ಕೆ ಸಿಕ್ಕ ಪ್ರೋತ್ಸಾಹ ಜಾನಪದ ಹಾಡುಗಾರಿಕೆಗೆ ಸಿಗುತ್ತಿಲ್ಲ

**'ನಮ್ಮ ನಾಡು ನಮ್ಮ ಹಾಡು -2023' ಕಾರ್ಯಕ್ರಮದಲ್ಲಿ ಡಾ.ಎ.ಬಿ ರಾಮಚಂದ್ರಪ್ಪ ಬೇಸರ**

ಮಲೇಬೆನ್ನೂರು, ಡಿ.26- ಹಾಡುಗಾರರು ಈ ನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವ ಸಾಂಸ್ಕೃತಿಕ ರೂವಾರಿಗಳು ಎಂದು ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಹಾಗೂ ನಿವೃತ್ತ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ಹೇಳಿದರು.

ಅವರು ಸೋಮವಾರ ಹನಗವಾಡಿ ಸಮೀಪದ ಪ್ರೊ. ಬಿ. ಕೃಷ್ಣಪ್ಪ ಭವನದಲ್ಲಿ ಕರುನಾಡ ಹಾಡುಗಾರರ ಬಳಗ, ಸತೀಶ್ ಜಾರಕಿಹೊಳಿ ಫೌಂಡೇಷನ್ ಹಾಗೂ ಮಾನವ ಬಂಧುತ್ವ ವೇದಿಕೆಯಿಂದ ಹಮ್ಮಿಕೊಂಡಿದ್ದ 'ನಮ್ಮ ನಾಡು ನಮ್ಮ ಹಾಡು - 2023' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವರ್ಣ ಪಾರಮ್ಯ ಎಂಬುದು ಕೇವಲ ಸಾಮಾಜಿಕವಾಗಿ ಉಳಿದಿಲ್ಲ. ಅದು ಎಲ್ಲಾ ರಂಗಗಳಲ್ಲೂ ತನ್ನ ಪಾರಮ್ಯ ಕಾಪಾಡಿಕೊಂಡಿದೆ. ಕಲೆಯಲ್ಲೂ ಈ ತಾರತಮ್ಯ ಕಾಣಬಹುದು. ರಾಜಪ್ರಭುತ್ವ ತಂತಿವಾದ್ಯಕ್ಕೆ ನೀಡಿದಷ್ಟು ಪ್ರೋತ್ಸಾಹವನ್ನು ಚರ್ಮ ವಾದ್ಯಕ್ಕೆ ನೀಡಲಿಲ್ಲ. ಯಕ್ಷಗಾನಕ್ಕೆ ಸಿಕ್ಕಷ್ಟು ಪ್ರೋತ್ಸಾಹ ಸಣ್ಣಾಟ, ದೊಡ್ಡಾಟಗಳಿಗೆ ಸಿಕ್ಕಿಲ್ಲ. ಶಾಸ್ತ್ರೀಯ ಸಂಗೀತಕ್ಕೆ ಸಿಕ್ಕ ಪ್ರೋತ್ಸಾಹ ಜಾನಪದ ಹಾಡುಗಾರಿಕೆಗೆ ಸಿಗುತ್ತಿಲ್ಲ. ಹಾಗಾಗಿ ಜಾನಪದ ಕಲಾವಿದರ ಬದುಕು ಸಂಕಟದಲ್ಲಿದೆ. ಈ ಕಲೆಗಳು ಸಂಕಟದ ಸ್ಥಿತಿ ಎದುರಿಸುತ್ತಿವೆ. ಈ ತಾರತಮ್ಯಗಳು ಇಲ್ಲವಾದಾಗ ಎಲ್ಲಾ ಕಲೆಗಳು ಬೆಳೆಯಲು ಸಾಧ್ಯ ಎಂದರು.

ಈ ನಾಡನ್ನು ಕಟ್ಟಿದ, ಈ ಕಲೆಗಳು ಸಂಕಟದ ಸ್ಥಿತಿ ಎದುರಿಸುತ್ತಿವೆ. ಈ ತಾರತಮ್ಯಗಳು ಇಲ್ಲವಾದಾಗ ಎಲ್ಲಾ ಕಲೆಗಳು ಬೆಳೆಯಲು ಸಾಧ್ಯ ಎಂದರು.

ಕರುನಾಡ ಬಳಗದ ಗೌರವಾಧ್ಯಕ್ಷ ಗ್ಯಾರಂಟಿ ರಾಮಣ್ಣ ಅಧ್ಯಕ್ಷತೆ ವಹಿಸಿದ್ದರು. ಬಂಧುತ್ವ ಫೌಂಡೇಷನ್‌ನ ರಾಘು ದೊಡ್ಡಮನಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಪಿ.ಬಿ.ಚಂದ್ರಪ್ಪ, ಕಲೀಂ ಭಾಷಾ, ಎಂ.ಗುರುಸಿದ್ದಸ್ವಾಮಿ, ಮಹಾಲಿಂಗಪ್ಪ ಅಲಹಾಳ್, ಹೆಗ್ಗೆರೆ ರಂಗಪ್ಪ, ಪುರಂದರ್ ಲೋಕಿಕೆರೆ, ಐರಣಿ ಚಂದ್ರು, ಜಗಳೂರಿನ ಎ.ಕೆ.ಓಬಪ್ಪ ಮತ್ತಿತರರು ಉಪಸ್ಥಿತರಿದ್ದರು.

ಈ ವೇಳೆ ಕಲಾ ಸಾಧಕರಾದ ಸಂಗೀತ ಕಲಾವಿದ ಚೀಲೂರಿನ ಕೊಂಡಯ್ಯದಾಸ್, ಕೀಲು - ಕುದುರೆ ಕಲಾವಿದ ನರಸನಹಳ್ಳಿ ಬಸವರಾಜ್, ರಂಗಭೂಮಿ ಕಲಾವಿದ ತೋರಣಗಟ್ಟೆ ತಿರುಕಪ್ಪ, ಬೀದಿ ನಾಟಕ ಕಲಾವಿದರಾದ ಕೆ. ಎನ್.ಹಳ್ಳಿಯ ರಂಗಮ್ಮ, ಭಜನೆ ಕಲಾವಿದ ಲೋಕಿಕೆರೆ ಪಸಪ್ಪರ ಚಂದ್ರಪ್ಪ ಮತ್ತು ವಾದ್ಯ ಕಲಾವಿದ ಲೋಕಿಕೆರೆ ತಾಳೆದರ ಹಾಲಪ್ಪ ಅವರಿಗೆ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಜೀವನದಲ್ಲಿ ತತ್ವ - ಸಿದ್ಧಾಂತ ಅಳವಡಿಕೆ ಜ್ಞಾನ ಅಗತ್ಯ

ಹರಪನಹಳ್ಳಿ, ಡಿ.26- ಭಾರತೀಯತೆಯ ಶಿಕ್ಷಣ ಇಂದು ಅತ್ಯಗತ್ಯವಾಗಿದೆ ಎಂದು ಪತ್ರಕರ್ತ ಅಜಿತ್ ಹನುಮಕ್ಕನವರ್ ಹೇಳಿದರು.

ಪಟ್ಟಣದ ವಿದ್ಯಾನಿಧಿ ಶಿಕ್ಷಣ ಅಕಾಡೆಮಿಯ 5ನೇ ವಾರ್ಷಿಕೋತ್ಸವ ಹಾಗೂ ಸಿಬಿಎಸ್‌ಸಿ ಮಾನ್ಯತೆ ದೊರೆತ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಪುನರುತ್ಥಾನ ಶಿಕ್ಷಣವನ್ನು ಶಾಲೆಯಲ್ಲಿ ಕಲಿಸುವ ಅಗತ್ಯ ಇದೆ. ಮಹಾನಗರಗಳಲ್ಲಿ ಪ್ರಯೋಗಾತ್ಮಕ ಶಿಕ್ಷಣವನ್ನು ನೀಡಲಾಗುತ್ತಿದೆ. ಹಳ್ಳಿಗಳಲ್ಲಿ ವ್ಯಾಮೋಹದ ಶಿಕ್ಷಣದ ಕಡೆಗೆ ಹೋಗುತ್ತಿದ್ದಾರೆ ಎಂದರು.

ಪಠ್ಯಕ್ಕಿಂತ ಹೆಚ್ಚು ಪಠೇತರ ವಿಷಯಗಳನ್ನು ಮಕ್ಕಳಿಗೆ ಕಲಿಸಬೇಕಿದೆ ಎಂದ ಅವರು ಇಂಗ್ಲಿಷ್ ಒಂದು ಭಾಷೆಯಾಗಿದ್ದು, ಅದರ ಮೋಹಕ್ಕೆ ಒಳಗಾಗಬಾರದು ಎಂದು ಅವರು ಹೇಳಿದರು.

ಉಜ್ವಲ ಭಾರತ ಕಟ್ಟಲಿರುವ ಇಂತಹ ಪೀಳಿಗೆಗೆ ಶಿಕ್ಷಣ ಕೊಡುವುದು ಪುಣ್ಯದ ಕೆಲಸ, ಭಾರತದ ಅಮೃತ ಕಾಲದ ಪೀಳಿಗೆಗೆ ಇಂತಹ ವಾತಾವರಣದಲ್ಲಿ ಶಿಕ್ಷಣ ನೀಡುವುದು ಹಾಗೂ ಇಂತಹ ಹಳ್ಳಿಯಂತಹ ವಾತಾವರಣದಲ್ಲಿ ಬೆಳೆಯುತ್ತಿರುವುದು ಇಂದಿನ ಮಕ್ಕಳೇ ಭಾಗ್ಯವಂತರು ಎಂದು ತಿಳಿಸಿದರು.

ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಜೀವನದಲ್ಲಿ ಮಕ್ಕಳನ್ನು ದೇಶಪ್ರೇಮಿಯಾಗಿ ಬೆಳೆಸಬೇಕಿದೆ, ಜೀವನದಲ್ಲಿ ತತ್ವ, ಸಿದ್ಧಾಂತಗಳನ್ನು ಹೇಗೆ ಅಳವಡಿಸಿಕೊಳ್ಳ ಬೇಕು ಎನ್ನುವ ಜ್ಞಾನವನ್ನು ಕಲಿಸಬೇಕಿದೆ ಎಂದರು.

ಮಕ್ಕಳಿಗೆ ಕಷ್ಟದ ಅರಿವು ಮಾಡಿಸದಿದ್ದರೆ ಮುಂದೆ ಮಕ್ಕಳ ಜೀವನ ಕಷ್ಟವಾಗಲಿದೆ ಎಂದ ಅವರು, ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಕಲಿಸುವ ಅಗತ್ಯವಿದೆ ಎಂದರು.

ಇಲ್ಲಿರುವಂತಹ ಸಂಸ್ಕೃತಿ, ಸಂಸ್ಕಾರ, ಅಧ್ಯಾತ್ಮ ಪರಂಪರೆ ವಿಶೇಷಗಳಿಂದ ಭಾರತ ವಿಶ್ವಕ್ಕೇ ಗುರುವಾಗಿದೆ ಎಂದ ಅವರು ಯಾರು ಆರೋಗ್ಯ, ಸಂಸ್ಕಾರ, ಜ್ಞಾನವಂತರಾಗಿರುತ್ತಾರೆ ಅವರೇ ದೇಶದ ನಿಜವಾದ ಸಂಪತ್ತು ಆಗಿದ್ದಾರೆ ಎಂದು ಹೇಳಿದರು.

ಬಳ್ಳಾರಿ ವಿದ್ಯಾನಿಧಿ ಅಕಾಡೆಮಿ ಪ್ರಾಚಾರ್ಯ ಈಶ್ವರಿ ಕೃಷ್ಣ ಶರ್ಮ ಮಾತನಾಡಿದರು.

ಈ ಸಂದರ್ಭದಲ್ಲಿ ಅಧ್ಯಕ್ಷ ಚನ್ನನಗೌಡ, ಕಾರ್ಯದರ್ಶಿ ವಾಗೀಶ್, ಆಡಳಿತ ಮಂಡಳಿ ಸದಸ್ಯರಾದ ಕೃಷ್ಣ, ಪ್ರಕಾಶ ಅಂಗಡಿ, ಶಿವಕುಮಾರ್, ಸಂತೋಷ ಜಟ್ಟಿ, ಚನ್ನಬಸವರಾಜ, ಮಂಜುನಾಥ, ವಾಗೀಶ ಇಟ್ಟಗಿ ಸೇರಿದಂತೆ ಇತರರು ಇದ್ದರು.



ಹರಪನಹಳ್ಳಿ ಕಾರ್ಯಕ್ರಮದಲ್ಲಿ ಪತ್ರಕರ್ತ ಅಜಿತ್ ಹನುಮಕ್ಕನವರ್

## ಮಹಿಳೆಯರಿಂದ 120 ಕೋಟಿ ಉಚಿತ ಪ್ರಯಾಣ

**(1ನೇ ಪುಟದಿಂದ)** ಇದರಿಂದ ಲಕ್ಷಾಂತರ ಕುಟುಂಬಗಳ ಆರ್ಥಿಕ ಶಕ್ತಿಯೂ ಹೆಚ್ಚುತ್ತಿದೆ.

ರಾಜ್ಯದ 4 ಕೋಟಿ 30 ಲಕ್ಷ ಮಂದಿ ನೇರವಾಗಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದಾರೆ. ಬಡವರು ಮತ್ತು ದುಡಿಯುವ ವರ್ಗಗಳನ್ನು ಆರ್ಥಿಕ ಪ್ರಗತಿಯ ಮುಖ್ಯವಾಹಿನಿಗೆ ತರಲಾಗುತ್ತಿದೆ ಎಂದವರು ಹೇಳಿದರು.

ಬರುವ ಏಪ್ರಿಲ್ ವೇಳೆಗೆ 1,400 ಹೊಸ ಎಲೆಕ್ಟ್ರಿಕ್ ಬಸ್‌ಗಳು ಬೆಂಗಳೂರು ಮಹಾನಗರ ನಗರ ಸಾರಿಗೆ (ಬಿಎಂಟಿಸಿ)ಗೆ ಸೇರ್ಪಡೆ ಆಗಲಿವೆ ಎಂದರು.

## ರಾಜ್ಯದಲ್ಲಿ 74 ಕೊರೊನಾ ಸೋಂಕಿತರು ಪತ್ತೆ

**(1ನೇ ಪುಟದಿಂದ)** ರೋಗಿಗಳು ಬಿಡು ಗಡೆಯಾಗಿದ್ದಾರೆ. ರಾಜ್ಯದಲ್ಲಿ 6,403 ಟೆಸ್ಟ್‌ಗಳನ್ನು ಮಾಡಲಾಗಿದೆ. ಪಾಸಿಟಿವಿಟಿ ದರ ಶೇ.1.15 ಹಾಗೂ ಸಾವಿನ ದರ ಶೇ.2.70ರಷ್ಟಿದೆ ಎಂದು ತಿಳಿಸಲಾಗಿದೆ. ಬೆಂಗಳೂರಿನಲ್ಲಿ ಅತಿ ಹೆಚ್ಚಿನ 2,104 ಟೆಸ್ಟ್ ಮಾಡಲಾಗಿದ್ದು, 57 ಪಾಸಿಟಿವ್ ಪ್ರಕರಣಗಳು ಕಂಡು ಬಂದಿವೆ.

## ಲಯನ್ಸ್ ಕ್ಲಬ್ ವತಿಯಿಂದ ಕ್ರಿಸ್‌ಮಸ್



ದಾವಣಗೆರೆ, ಡಿ. 26- ನಗರದ ಸೇಂಟ್ ಥಾಮಸ್ ಚರ್ಚ್‌ನಲ್ಲಿ ಫಾದರ್ ಜೊತೆಯಲ್ಲಿ ಲಯನ್ಸ್ ಕ್ಲಬ್ ವತಿಯಿಂದ ಆಚರಿಸಲಾಯಿತು.

ಲಯನ್ಸ್ ಅಧ್ಯಕ್ಷ ಉಮೇಶ್ ನೀಲಿ ಅವರ ಅಧ್ಯಕ್ಷತೆಯಲ್ಲಿ ದಿನೇಶ್ ಕೆ. ಶೆಟ್ಟಿ ಹಾಗೂ ಎ. ನಾಗರಾಜ್ ಅವರು ಮಕ್ಕಳಿಗೆ ಸಿಹಿ ವಿತರಣೆ ಮಾಡಲಾಯಿತು.

ಲಯನ್ಸ್ ಕ್ಲಬ್ ಸದಸ್ಯರುಗಳಾದ ಲಯನ್ಸ್ ಕ್ಲಬ್ ಕಾರ್ಯದರ್ಶಿ ಭೀಮಾನಂದ್, ನಿರ್ದೇಶಕ ಕಣವಿ ನಟರಾಜ್ ಇನ್ನು ಮುಂತಾದವರು ಇದ್ದರು.

## ರಾಮ ಮಂದಿರದ ಉದ್ಘಾಟನೆ : ಹರಿಹರಕ್ಕೆ ನಾಳೆ ಅಕ್ಷತೆ ಕಾಳು ಆಗಮನ



ಹರಿಹರ, ಡಿ.26- ಅಯೋಧ್ಯೆಯಲ್ಲಿ ಜನವರಿ 22 ರಂದು ನಡೆಯುವ ಶ್ರೀ ರಾಮ ಮಂದಿರದ ಉದ್ಘಾಟನೆಯ ನಿಮಿತ್ಯವಾಗಿ ನಗರಕ್ಕೆ ಮಂತ್ರಾಕ್ಷತೆ, ಅಕ್ಷತೆ ಕಾಳು ಗುರುವಾರ ಆಗಮಿಸಲಿದೆ ಎಂದು ಹಿಂದೂ ಜಾಗರಣ ವೇದಿಕೆಯ ತಾಲ್ಲೂಕು ಸಂಚಾಲಕ ದಿನೇಶ್ ತಿಳಿಸಿದ್ದಾರೆ.

ನಗರದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ರಾಮ ಮಂದಿರದ ಉದ್ಘಾಟನೆಯ ನಿಮಿತ್ಯವಾಗಿ ಈಗಾಗಲೇ ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಅಕ್ಷತೆಕಾಳು ಪೂಜಾ ಕಾರ್ಯವನ್ನು ಮಾಡುತ್ತಾ ಸಾಗಿದ್ದು, ಅದರಂತೆ ಹರಿಹರದಲ್ಲಿ ನಾಡಿದ್ದು ಗುರುವಾರ ಅಕ್ಷತೆ ಕಾಳು ಪೂಜೆಯನ್ನು ಪೇಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮಾಡಲಾಗುತ್ತದೆ. ತದನಂತರ ಅದನ್ನು ಮೆರವಣಿಗೆ ಮೂಲಕ ಓಂಕಾರ ಮಠಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿಂದ ಬೂತ್ ಮಟ್ಟದ ಕಾರ್ಯಕರ್ತರೊಂದಿಗೆ ನಗರ ಮತ್ತು ಗ್ರಾಮೀಣ ಪ್ರದೇಶದ ಮನೆಗಳಿಗೆ ತಲುಪಿಸಲಾಗುತ್ತದೆ ಎಂದರು.

ಅಕ್ಷತೆಕಾಳು ಮೆರವಣಿಗೆ ವಿವಿಧ ಕಲಾ ಮೇಳಗಳೊಂದಿಗೆ ಪೇಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭಗೊಂಡು ರಾಣಿ ಚೆನ್ನಮ್ಮ ವೃತ್ತ, ಗಾಂಧಿ ವೃತ್ತ, ದೇವಸ್ಥಾನ ರಸ್ತೆ ಮೂಲಕ ಸಂಚರಿಸಿ ಓಂಕಾರ ಮಠಕ್ಕೆ ತಲುಪಲಿದೆ.

ರಾಮ ಮಂದಿರ ಉದ್ಘಾಟನೆಯನ್ನು ಸ್ಥಳೀಯ ಜನರು ವೀಕ್ಷಿಸಲು ಪೇಟೆ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ಎಲ್‌ಇಡಿ ಸ್ಕ್ರೀನ್ ವ್ಯವಸ್ಥೆ ಜೊತೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗುತ್ತದೆ. ರಾಮ ಮಂದಿರ ಉದ್ಘಾಟನೆಯ ದಿನದಂದು ರಾಮ ಮಂದಿರ ನಿರ್ಮಾಣದ ಸಂದರ್ಭದಲ್ಲಿ ಹುತಾತ್ಮರಾದವರ ಸವಿನೆನಪಿಗಾಗಿ ಪ್ರತಿಯೊಂದು ಮನೆಯಲ್ಲಿ ಐದು ಎಣ್ಣೆ ದೀಪವನ್ನು ಹಚ್ಚುವ ಮೂಲಕ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಹೆಚ್.ಎಸ್. ರಾಘವೇಂದ್ರ, ಭಜರಂಗ ದಳದ ಶ್ರೀನಿವಾಸ್ ಚಂದಾಪೂರ್, ರವೀಂದ್ರ ಹೋವಳೆ, ಶಿವು, ಚಂದನ್ ಮೂರ್ಕಲ್, ಚಂದ್ರಕಾಂತ್ ಮತ್ತಿತರರು ಹಾಜರಿದ್ದರು.

## ರಾಣೇಬೆನ್ನೂರಿನ ಶ್ರೀ ಬಸವೇಶ್ವರ ಅರ್ಬನ್ ಬ್ಯಾಂಕ್‌ಗೆ ಆಯ್ಕೆ

ರಾಣೇಬೆನ್ನೂರು, ಡಿ.26- ಇಲ್ಲಿನ ಶ್ರೀ ಬಸವೇಶ್ವರ ಅರ್ಬನ್ ಬ್ಯಾಂಕ್ ನಿರ್ದೇಶಕ ಮಂಡಳಿಗೆ ಬಿಜೆಪಿ ಬೆಂಬಲಿತ ಎಲ್ಲ 13 ಜನರು ಅವಿರೋಧವಾಗಿ ಆಯ್ಕೆಯಾಗಿದ್ದು, ಕಛೇರಿಯಲ್ಲಿಂದು ಅವರನ್ನು ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಡಾ.ಬಸವರಾಜ ಕೇಲಗಾರ ಅವರನ್ನು ಸಹ ಮಾಜಿ ಶಾಸಕ ಅರುಣಕುಮಾರ ಪೂಜಾರ ಸನ್ಮಾನಿಸಿದರು.



ಈಶ್ವರ್ ಹಾವನೂರ, ಪರಮೇಶ್ ಯಡಿಯಾಪೂರ, ವಿಷ್ಣು ಜಿಂಗಾಡೆ, ಲತಾ ಬೇತೂರ, ಶೋಭಾ ದೇವಗಿರಿಮಠ, ಮಂಜುನಾಥ್ ಓಲೇಕಾರ, ಚನ್ನವೀರಪ್ಪ ಅಸುಂಡಿ, ಪರಮೇಶ್ ಗೌಳಿ, ರಾಜೇಂದ್ರಕುಮಾರ್ ತಿಳವಳ್ಳಿ, ವೀರೇಶ್ ಜಂಬಗಿ, ಶಿವಕುಮಾರ್ ನರಸಗೊಂಡರ, ಶಿವಪ್ಪ ರೊಡ್ಡನವರ ಮತ್ತು ಶಂಭುಲಿಂಗ ಕಟಗಿಹಳ್ಳಿ ಅವಿರೋಧವಾಗಿ ಆಯ್ಕೆಯಾದ ಅರ್ಬನ್ ಬ್ಯಾಂಕ್ ನಿರ್ದೇಶಕರು.

ಎಸ್.ಎಸ್.ರಾಮಲಿಂಗಣ್ಣನವರ, ಭಾರತಿ ಜಂಬಗಿ, ಡಾ. ಗಣೇಶ ದೇವಗಿರಿಮಠ, ದೀಪಕ್ ಹರಪನಳ್ಳಿ, ಸಿದ್ದು ಚಿಕ್ಕಬಿದರಿ, ಎ.ಬಿ. ಪಾಟೀಲ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಗೋಪನಾಳು ಹಾ.ಉ.ಸಂಘಕ್ಕೆ ಅಧ್ಯಕ್ಷ ಸಿದ್ಧಲಿಂಗೇಶ್, ಉಪಾಧ್ಯಕ್ಷೆ ಸರ್ವಮಂಗಳ

ದಾವಣಗೆರೆ, ಡಿ. 26- ತಾಲ್ಲೂಕಿನ ಗೋಪನಾಳು ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ನೂತನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಎಸ್.ಬಿ. ಸಿದ್ಧಲಿಂಗೇಶ್ (ಸಾಮಾನ್ಯ ಕ್ಷೇತ್ರ), ಉಪಾಧ್ಯಕ್ಷರನ್ನಾಗಿ ಸರ್ವಮಂಗಳ ಬಸವರಾಜಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ಹೆಚ್.ಕೆ. ಪಾಲಾಕ್ಷಪ್ಪ, ಬಿ.ಸಿ. ಮಲ್ಲಿಕಾರ್ಜುನ್, ಜಿ.ಎಸ್. ರಾಜು, ಎ.ಎಂ. ವಿಶ್ವೇಶ್ವರಯ್ಯ, ಎನ್. ಕರಿಬಸಪ್ಪ (ಸಾಮಾನ್ಯ), ಡಿ.ಎನ್. ಚಂದ್ರಕಲಾ (ಮಹಿಳಾ ಮೀಸಲು), ಕೆ. ಹನುಮಂತಪ್ಪ (ಹಿಂದುಳಿದ ವರ್ಗ 'ಎ' ಮೀಸಲು),ಮಹಮ್ಮದ್ ಅಲ್ಲಾಭಕ್ಷಿ (ಹಿಂದುಳಿದ ವರ್ಗ 'ಬಿ' ಮೀಸಲು), ಹೆಚ್. ಓಬಳೇಶ್ (ಪರಿಶಿಷ್ಟ ಪಂಗಡ ಮೀಸಲು), ಎ.ಕೆ. ರೇವಣಸಿದ್ಧಪ್ಪ (ಪರಿಶಿಷ್ಟ ಜಾತಿ ಮೀಸಲು) ಇವರು ನಿರ್ದೇಶಕರಾಗಿ ಆಯ್ಕೆಗೊಂಡಿದ್ದಾರೆ.

## ಬಿಹಾರದ 3.5 ಲಕ್ಷ ಗುತ್ತಿಗೆ ಶಿಕ್ಷಕರ ಖಾಯಮಾತಿ

**(1ನೇ ಪುಟದಿಂದ)** ಅರ್ಹತಾ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರ ಸರ್ಕಾರಿ ಉದ್ಯೋಗಿಯ ಸ್ಥಾನಮಾನ ಪಡೆಯಲಿದ್ದಾರೆ. ಯಾವ ಸಂಸ್ಥೆ ಈ ಪರೀಕ್ಷೆ ನಡೆಸಬೇಕು ಎಂಬುದನ್ನು ಶೀಘ್ರದಲ್ಲೇ ನಿರ್ಧರಿಸಲಾಗುವುದು. ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ವಿಫಲರಾದವರ ಬಗ್ಗೆ ನಂತರದಲ್ಲಿ ನಿರ್ಧರಿಸಲಾಗುವುದು. ಅವರು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಮೂರು ಅವಕಾಶ ನೀಡಲಾಗುವುದು ಎಂದು ಸಿದ್ದಾರ್ಥ ತಿಳಿಸಿದ್ದಾರೆ.

ಅವರು ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರೆಗೂ ಈಗಿರುವ ವೇತನ ಶ್ರೇಣಿ ಮುಂದುವರೆಯಲಿದೆ. ಬಿಹಾರ ಲೋಕ ಸೇವಾ ಆಯೋಗದ ಮಾರ್ಗಸೂಚಿಯ ಅನ್ವಯ ಉತ್ತೀರ್ಣರಾದ ಶಿಕ್ಷಕರ ವೇತನ ನಿಗದಿಪಡಿಸಲಾಗುವುದು ಎಂದವರು ಹೇಳಿದ್ದಾರೆ.

## ಎಲ್ಲೇ ಇದ್ದರೂ ಬಿಡೆವು

**(1ನೇ ಪುಟದಿಂದ)** ಹಡಗಿನ ಮೇಲೆ ಗುಜರಾತ್ ಬಳಿಯ ಸಮುದ್ರದಲ್ಲಿ ದಾಳಿ ನಡೆಸಲಾಗಿತ್ತು. ಎಂವಿ ಸಾಯಿಬಾಬಾ ಮೇಲೆ ಕೆಂಪು ಸಮುದ್ರದಲ್ಲಿ ದಾಳಿ ನಡೆಸಲಾಗಿತ್ತು. ಈ ವಾಣಿಜ್ಯ ತೈಲ ಟ್ಯಾಂಕರ್ ಭಾರತದ ಧ್ವಜದ್ದಾಗಿರಲಿಲ್ಲ.

## ಮೋದಿ ಆರ್ಥಿಕ ತಜ್ಞರೇ? : ಸಿದ್ದರಾಮಯ್ಯ

**(1ನೇ ಪುಟದಿಂದ)** ಸಂದರ್ಭದಲ್ಲಿ ತಿಳಿಸಿದರು. 2022-23ರ ಶೈಕ್ಷಣಿಕ ವರ್ಷದಲ್ಲಿ ಡಿಪ್ಲೋಮಾ ಹಾಗೂ ಪದವಿ ಪಡೆದ 5,29,153 ಫಲಾನುಭವಿಗಳಿಗೆ ಇದರ ಸವಲತ್ತು ದೊರೆಯುತ್ತದೆ. ಪದವಿ ಪಡೆದವರಿಗೆ ಮಾಸಿಕ 3,500 ರೂ., ಡಿಪ್ಲೋಮಾ ತೇರ್ಗಡೆಯಾದವರಿಗೆ 1,500 ರೂ.ಗಳನ್ನು ನಿರಂತರ 24 ತಿಂಗಳ ಕಾಲ ನೀಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

## ಅತಿಥಿ ಉಪನ್ಯಾಸಕರ ಮುಷ್ಕರ ಆರಂಭ

**ರಾಣೇಬೆನ್ನೂರು**

ರಾಣೇಬೆನ್ನೂರು, ಡಿ.26- ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಅತಿಥಿ ಉಪನ್ಯಾಸಕರು ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮುಷ್ಕರ ಆರಂಭಿಸಿದ್ದಾರೆ.

ಪಿ.ಬಿ. ರೋಡಿನ ಕೆ.ಇ.ಬಿ. ಗಣೇಶ ದೇವಸ್ಥಾನದಿಂದ ಪ್ರತಿಭಟನಾ ಮೆರವಣಿಗೆ ಹೊರಟು ಬಸ್‌ನಿಲ್ದಾಣದ ಎದುರಿಗೆ ರಸ್ತೆತಡೆ ಮೂಲಕ ಪ್ರತಿಭಟನೆ ಮಾಡಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವೀಂದ್ರಗೌಡ ಪಾಟೀಲ, ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಿತ್ಯಾನಂದ ಜಿ. ಕುಂದಾಪುರ, ಕನ್ನಡ ಜಾಗೃತಿ ವೇದಿಕೆಯ ಮಂಜುನಾಥ ಎನ್. ದುಗ್ಗತ್ತಿ, ಕರ್ನಾಟಕ ರಕ್ಷಣಾ ವೇದಿಕೆಯ ಫಕ್ಕೀರೇಶ ರಂಗರಡ್ಡಿ, ವಕೀಲರ ಸಂಘದ ತಾಲೂಕ ಅಧ್ಯಕ್ಷ ಬುರಡಿಕಟ್ಟಿಯವರು, ಅತಿಥಿ ಉಪನ್ಯಾಸಕ ಸಂಘದ ಜಿಲ್ಲಾಧ್ಯಕ್ಷ ಪ್ರಶಾಂತ ಬೆನ್ನೂರ, ರಾಣೇಬೆನ್ನೂರ ಕಾಲೇಜಿನ ಅಧ್ಯಕ್ಷ ಡಾ. ಗೋವಿಂದಪ್ಪ ಜಿ, ಉಪನ್ಯಾಸಕರುಗಳಾದ ಕೆ.ಎಂ.ಮರಡಿ ಬಣಕಾರ, ಡಾ.ಎಸ್.ಎಲ್. ಕರ್ಲವಾಡ, ಎಂ.ಐ. ಸೊನ್ನದ, ಶಿಲ್ಪಾ ಹಲಗಣ್ಣನವರ, ಶಿಲ್ಪಾ ಹಾವನೂರ, ಶ್ರೀನಿವಾಸ ನಲವಾಗಲ, ಸತೀಶ ಜ್ಯೋತಿ, ಆನಂದ ಕಡ್ಲೆಪ್ಪನವರ, ಶಿರೂರ, ಕೇಶವ ಹಳ್ಳಿಗುಡಿ, ಮಾಧುರಿ, ವಿಮಲಾಕರ, ಕವಿತಾ ಮಾದೇನಹಳ್ಳಿ, ಶ್ವೇತಾ ಜೆ, ಉಮ್ಮೇಶ ಸಾದರ ಇನ್ನೂ ಅನೇಕ ಉಪನ್ಯಾಸಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

## ನಿರ್ವಸತಿಗರಿಗೆ ವಸತಿ ಯೋಜನೆ ಜಾರಿಗೊಳಿಸಲು ಆಗ್ರಹ




ಹರಿಹರ, ಡಿ.26- ತಾಲ್ಲೂಕಿನ ಭಾನುವಳ್ಳಿ ಮತ್ತು ಕಡ್ಲೆಗೊಂದಿ ಗ್ರಾಮದಲ್ಲಿ ಮಾದಿಗ ಹಾಗೂ ಹಿಂದುಳಿದ ಜನಾಂಗದವರಿಗೆ ವಸತಿ ಯೋಜನೆ ಜಾರಿಗೊಳಿಸಲು ಆಗ್ರಹಿಸಿ, ದಲಿತ ಸಂಘರ್ಷ ಸಮಿತಿ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ನೇತೃತ್ವದಲ್ಲಿ ನಿರ್ವಸತಿಕರು ನಗರದ ತಾಲ್ಲೂಕು ಕಚೇರಿ ಎದುರು ಮಂಗಳವಾರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಿದರು.

ಇಲ್ಲಿನ ಪಕ್ಕೀರಸ್ವಾಮಿ ಮಠದಿಂದ ಮೆರವಣಿಗೆ ಮೂಲಕ ತಾಲ್ಲೂಕು ಕಚೇರಿಗೆ ಆಗಮಿಸಿದ ಪ್ರತಿಭಟನಾಕಾರರು ತಹಶೀಲ್ದಾರ್ ಗುರುಬಸವರಾಜ್ ಅವರಿಗೆ ಮನವಿ ನೀಡಿದರು.

ನಂತರ ನಡೆದ ಸಭೆಯಲ್ಲಿ ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಭಾನುವಳ್ಳಿ ಗ್ರಾಮದ ಚೌಡಪ್ಪ ಸಿ., ಹಳದಪ್ಪ ಗುಣಾರಿ, ಲಕ್ಷ್ಮಪ್ಪ ವಿ.ಎನ್., ಸುಶೀಲಮ್ಮ ತೆಲಗಿ, ಹನುಮಕ್ಕ ಮಾಗೋಡು, ಧೂಳೆಹೊಳೆ ಮಲ್ಲಮ್ಮ, ನೇತ್ರಮ್ಮ, ಶ್ಯಾಮಕ್ಕ, ಶೇಖರಮ್ಮ, ಕಡ್ಲೆಗೊಂದಿ ಗ್ರಾಮದ ಗ್ರಾಪಂ ಸದಸ್ಯ ತಿಮ್ಮಣ್ಣ, ಹನುಮಂತಪ್ಪ ಕೆ.ಎಲ್., ತಿಮ್ಮಪ್ಪ, ರಂಗಪ್ಪ, ಪರಮೇಶ್, ಬಸವರಾಜ್, ಕೆ.ಆರ್.ಉಮೇಶ್, ರೇಣುಕಮ್ಮ, ಸೀತಮ್ಮ, ಮಲ್ಲಮ್ಮ, ಮೈಲಮ್ಮ ಹಾಗೂ ಇತರರಿದ್ದರು.

## ಹಳೇಬಿಸಲೇರಿ ಗ್ರಾಮದ ನಿಂಬಳ್ಳೇರ ಯಜಮಾನ್ ದೊಡ್ಡನಿಂಗಪ್ಪ ನಿಧನ



ದಾವಣಗೆರೆ ತಾಲ್ಲೂಕು ಹಳೇಬಿಸಲೇರಿ ಗ್ರಾಮದ ವಾಸಿ,

**ನಿಂಬಳ್ಳೇರ ಶ್ರೀಮಾನ್ ಯಜಮಾನ್ ದೊಡ್ಡನಿಂಗಪ್ಪ**

ಅವರು ದಿನಾಂಕ 26-12-2023ರ ಮಂಗಳವಾರ ರಾತ್ರಿ 9.20 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 98 ವರ್ಷ ವಯಸ್ಸಾಗಿತ್ತು. ಏಳು ಜನ ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27-12-2023ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಹಳೇಬಿಸಲೇರಿ ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ

ನಿಂಬಳ್ಳೇರ ನಾಗರಾಜಪ್ಪ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಹಳೇಬಿಸಲೇರಿ.

ಮೊ. : 99162 10517, 99459 73843

## ಮ್ಯಾಡಂ ತಿಪ್ಪೇಸ್ವಾಮಿ ನಿಧನ



ದಾವಣಗೆರೆ ಹುಬ್ಬಳ್ಳಿ ಚೌಡಪ್ಪಗಲ್ಲಿ ಬಸವರಾಜ್ ಪೇಟೆ ವಾಸಿ ದಿ|| ಮ್ಯಾಡಂ ಗೋವಿಂದಪ್ಪ ಇವರ ಪುತ್ರರಾದ

**ಮ್ಯಾಡಂ ತಿಪ್ಪೇಸ್ವಾಮಿ**

ಇವರು ದಿನಾಂಕ : 26.12.2023ರ ಮಂಗಳವಾರ ಬೆಳಿಗ್ಗೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 27.12.2023ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**

ಮ್ಯಾಡಂ ವಂಶಸ್ಥರು ದಾವಣಗೆರೆ

97411 81911, 99456 46453

## ಶ್ರೀಮತಿ ಸುಶೀಲಮ್ಮ ಶರಣಪ್ಪ ನಿಧನ



ದಾವಣಗೆರೆ ಎಂಸಿಸಿ ಬಿ ಬ್ಲಾಕ್, 4ನೇ ಮೇನ್, 4ನೇ ಕ್ರಾಸ್, # 2885 ವಾಸಿಯಾದ

**ದಿವಂಗತ ಶರಣಪ್ಪ ಇವರ ಧರ್ಮಪತ್ನಿ**

**ಶರಣೆ ಶ್ರೀಮತಿ ಸುಶೀಲಮ್ಮ ಶರಣಪ್ಪ**

ಇವರು ದಿನಾಂಕ : 24.12.2023ರ ಭಾನುವಾರ ದಂದು ಬೆಂಗಳೂರಿನಲ್ಲಿ ನಿಧನ ಹೊಂದಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 27.12.2023ರ ಬುಧವಾರ ಬೆಳಿಗ್ಗೆ 11.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುತ್ತದೆ. ಮೃತರು ಒಬ್ಬ ಪುತ್ರಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ

ಇಂತಿ ದುಃಖತಪ್ತರು :

ಶ್ರೀಮತಿ ಶಿಲ್ಪ ಮುರುಗೇಶ್ ಬಾಬು, ಅಮರ್ ಶರಣಪ್ಪ ಅಶ್ವಿನ್ ಶರಣಪ್ಪ ಹಾಗೂ ಬಂಧು-ಮಿತ್ರರು. ಫೋ. : 98441 16813

## ಕಡಬಗೇರಿ ಭಂಗಿ ಸಣ್ಣಬಸವನಗೌಡ್ರು ನಿಧನ



ಹರಪನಹಳ್ಳಿ ತಾಲ್ಲೂಕು ಕಡಬಗೇರಿ ಗ್ರಾಮದ ವಾಸಿ

**ಸಣ್ಣಬಸವನಗೌಡ್ರು**

ಇವರು ದಿನಾಂಕ 26.12.2023ರ ಮಂಗಳವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು **27.12.2023ರ ಬುಧವಾರ ಬೆಳಿಗ್ಗೆ 11ರವರೆಗೆ ದಾವಣಗೆರೆಯ ಶಕ್ತಿನಗರ (ಡಿಸಿಎಂ ಲೇಔಟ್ ಹಿಂಭಾಗ) 3ನೇ ಹಂತ, 3ನೇ ಕ್ರಾಸ್ ಡೋರ್ ನಂ.382/1A-45ರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.** ನಂತರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮ ಹರಪನಹಳ್ಳಿ ತಾಲ್ಲೂಕು ಕಡಬಗೇರಿ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 98459 38307**

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ತಿಮ್ಮಪ್ಪನ ದೇವಾಲಯದ ಉದ್ಯೋಗಿಗಳಿಗೆ ಮನೆಗಳ ವಿತರಣೆ**
ತಿರುಪತಿ : ತಿರುಪತಿ ತಿಮ್ಮಪ್ಪನ ದೇವಸ್ಥಾನದ 3,518 ಉದ್ಯೋಗಿಗಳಿಗೆ ಡಿಸೆಂಬರ್ 28ರಂದು ಮನೆಗಳನ್ನು ವಿತರಿಸಲು ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್ ನಿರ್ಧರಿಸಿದೆ. ಈ ಯೋಜನೆಯ ವೆಚ್ಚ 259 ಕೋಟಿ ರೂ. ಆಗಲಿದೆ. ಎರಡನೇ ಹಂತದಲ್ಲಿ 1,500 ಉದ್ಯೋಗಿಗಳಿಗೆ ಜನವರಿ 2024ರ ಮೊದಲ ವಾರದಲ್ಲಿ ಮನೆಗಳನ್ನು ನೀಡಲಾಗುವುದು. ಮೂರನೇ ಹಂತದಲ್ಲಿ 5,000 ಉದ್ಯೋಗಿಗಳು ಹಾಗೂ ಪಿಂಚಣಿದಾರರಿಗೆ ಮನೆಗಳನ್ನು ಒದಗಿಸಲಾಗುವುದು ಎಂದು ಟ್ರಸ್ಟ್ ತಿಳಿಸಿದೆ.

**ಐ.ಎನ್.ಎಸ್. ಇಂಫಾಲ್ ನೌಕಾ ದಳಕ್ಕೆ ಸೇರ್ಪಡೆ**
ನವದೆಹಲಿ : ಐ.ಎನ್.ಎಸ್. ಇಂಫಾಲ್ ಸಮರ ನೌಕೆಯನ್ನು ಭಾರತೀಯ ನೌಕಾ ದಳಕ್ಕೆ ಸೇರ್ಪಡೆ ಮಾಡಿಕೊಂಡಿರುವುದು ಭಾರತೀಯರಿಗೆ ಹೆಮ್ಮೆಯ ವಿಷಯ. ದೇಶ ರಕ್ಷಣಾ ವಿಷಯದಲ್ಲಿ ಸ್ವಾವಲಂಬಿಯಾಗುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**ಖೇಲ್ ರತ್ನ, ಅರ್ಜುನ ಪ್ರಶಸ್ತಿ ಮರಳಿಸಲು ವಿನೇಶ್ ಫೋಗಟ್ ನಿರ್ಧಾರ**
ನವದೆಹಲಿ : ಕುಸ್ತಿ ಪಟುಗಳು ನ್ಯಾಯಕ್ಕಾಗಿ ಪರದಾಡುತ್ತಿರುವ ಹಿನ್ನೆಲೆಯಲ್ಲಿ, ತಮಗೆ ನೀಡಲಾದ ಖೇಲ್ ರತ್ನ ಹಾಗೂ ಅರ್ಜುನ್ ಪ್ರಶಸ್ತಿಗಳನ್ನು ಪ್ರಧಾನ ಮಂತ್ರಿಗೆ ಮರಳಿಸುವುದಾಗಿ ಕುಸ್ತಿ ಪಟು ವಿನೇಶ್ ಫೋಗಟ್ ಹೇಳಿದ್ದಾರೆ. ಫೋಗಟ್ ಅವರು ಎರಡು ಬಾರಿ ವಿಶ್ವ ಚಾಂಪಿಯನ್ ಆಗಿದ್ದಾರೆ.

**ಡೀಪ್‌ಫೇಕ್ ತಡೆಗಾಗಿ ಜಾಲತಾಣ ಕಂಪನಿಗಳಿಗೆ ಕೇಂದ್ರದ ಸೂಚನೆ**
ನವದೆಹಲಿ : ಡೀಪ್‌ಫೇಕ್‌ಗಳಿಗೆ ಸಂಬಂಧಿಸಿದಂತೆ ಐ.ಟಿ. ನಿಯಮಗಳನ್ನು ಜಾಲತಾಣ ಕಂಪನಿಗಳು ಪಾಲಿಸಬೇಕು. ತನ್ನ ಬಳಕೆದಾರರು ಡೀಪ್‌ಫೇಕ್ ರೀತಿಯ ಕೃತ್ಯಗಳನ್ನು ನಡೆಸದಂತೆ ಮಾಹಿತಿ ನೀಡಬೇಕು ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಡೀಪ್‌ಫೇಕ್ ತಡೆಗಾಗಿ ಅಗತ್ಯವಾದಲ್ಲಿ ಮುಂಬರುವ ದಿನಗಳಲ್ಲಿ ಇನ್ನಷ್ಟು ಕ್ರಮಗಳನ್ನು ತೆಗೆದುಕೊಳ್ಳುವುದಾಗಿಯೂ ಸರ್ಕಾರ ಹೇಳಿದೆ.

**ಸೌದಿ ಪ್ರಧಾನಿ ಜೊತೆ ಮೋದಿ ಚರ್ಚೆ**
ನವದೆಹಲಿ : ಮಧ್ಯ ಪ್ರಾಚ್ಯ ಪರಿಸ್ಥಿತಿ ಕುರಿತು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೌದಿ ಅರೇಬಿಯಾದ ಪ್ರಧಾನ ಮಂತ್ರಿ ಮೊಹಮ್ಮದ್ ಬಿನ್ ಸಲ್ಮಾನ್ ಜೊತೆ ಚರ್ಚೆ ನಡೆಸಿದ್ದಾರೆ. ಪಶ್ಚಿಮ ಏಷಿಯಾದಲ್ಲಿ ಉಂಟಾಗಿರುವ ಹಿಂಸಾಚಾರ, ಉಗ್ರವಾದ ಹಾಗೂ ನಾಗರಿಕರ ಸಾವಿನ ಕುರಿತು ಉಭಯ ನಾಯಕರು ಕಳವಳ ವ್ಯಕ್ತಪಡಿಸಿದ್ದಾರೆ.

**ಮಾನವ ಕಳ್ಳಸಾಗಣೆ ಶಂಕೆ : ಫ್ರಾನ್ಸ್‌ನಿಂದ ವಾಪಸ್ಸಾದ ವಿಮಾನ**
ಮುಂಬೈ : ಮಾನವ ಕಳ್ಳಸಾಗಣೆಯ ಶಂಕೆಯಿಂದಾಗಿ ಫ್ರಾನ್ಸ್‌ನಲ್ಲಿ ತಡೆಯಲ್ಪಟ್ಟಿದ್ದ ವಿಮಾನ ಮುಂಬೈಗೆ ವಾಪಸ್ಸಾಗಿದೆ. ಇದರಲ್ಲಿ 276 ಪ್ರಯಾಣಿಕರಿದ್ದು, ಬಹುತೇಕ ಭಾರತೀಯರಾಗಿದ್ದಾರೆ. ಮಂಗಳವಾರ ಬೆಳಗಿನ ಜಾವ ವಿಮಾನ ಬಂದಿಳಿದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಹಿಮೊಫಿಲಿಯಾ ಪೀಡಿತರಿಗೆ 5 ದಿನಗಳ ಕಾರ್ಯಕ್ರಮ

# ಶ್ರೀಕಾಂತ್ ಗೌಡಗೆ 'ಮಿಸ್ಟರ್ ಬ್ಲೂ ಬೆಲ್' ಪ್ರಶಸ್ತಿ




ದಾವಣಗೆರೆ, ಡಿ.26- ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯು ಹಿಮೊಫಿಲಿಯಾ ಪೀಡಿತ ಯುವಕರಿಗಾಗಿ ಈಚೆಗೆ 5 ದಿನಗಳ ಕಾಲ 'ಬ್ಲೂ ಬೆಲ್' ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಶಿಬಿರದಲ್ಲಿ ಕ್ರಿಯಾಶೀಲ ಶಿಬಿರಾರ್ಥಿ ಶ್ರೀಕಾಂತ್ ಗೌಡ ಅವರಿಗೆ 'ಮಿಸ್ಟರ್ ಬ್ಲೂಬೆಲ್' ಪ್ರಶಸ್ತಿಯನ್ನು ನೀಡಲಾಯಿತು.

ಎ.ವಿ.ಕೆ. ಹಾಗೂ ಡಿ.ಆರ್.ಎಂ. ಕಾಲೇಜಿನ ನಿವೃತ್ತ ಪ್ರಾಂಶುಪಾಲ ಜೆ.ಬಿ. ರಾಜ್ ಕಾರ್ಯಕ್ರಮ ವನ್ನು ಉದ್ಘಾಟಿಸಿದರು. ಸಂಸ್ಥೆಯ ಉಪಾಧ್ಯಕ್ಷ ಬಿ.ಟಿ. ಅಚ್ಯುತ್ ಶಿಬಿರಾರ್ಥಿಗಳಿಗೆ ಶುಭ ಹಾರೈಸಿ ದರು. ಕಾರ್ಯಕ್ರಮದ ಮೊದಲ ದಿವಸ ಜೆಜೆಎಂ ವೈದ್ಯಕೀಯ ಕಾಲೇಜಿನ ಪೆಥಾಲಜಿ ವಿಭಾಗದ ಮುಖ್ಯಸ್ಥ ಡಾ. ವರದೇಂದ್ರ ಕುಲಕರ್ಣಿ ಮಾತನಾಡಿ, ಹಿಮೊಫಿಲಿಯಾ ಮಕ್ಕಳಿಗೆ ಶಿಕ್ಷಣ ಅನಿವಾರ್ಯ ಮತ್ತು ಅವಶ್ಯಕವಾಗಿದೆ ಎಂದು ಹೇಳಿದರು.

ಸೊಸೈಟಿ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಹಿಮೊಫಿಲಿಯಾ ಮತ್ತು ಇನ್ಹಿಬೀಟರ್ ಕುರಿತು ತಿಳಿಸಿಕೊಟ್ಟರು.

ಕಾಲೇಜ್ ಆಫ್ ಡೆಂಟಲ್ ಸೈನ್ಸ್‌ನ ಡಾ. ರಾಜೇಶ್ವರಿ ಅಣ್ಣಿಗೇರಿ, 'ಗುಟ್ಕಾ ಮತ್ತು ತಂಬಾಕು ಜಾಗೃತಿ', ಸಮೃದ್ಧಿ ಮತ್ತು ಶಕ್ತಿಯುತ ಜೀವನ' ಕುರಿತು ಅನ್‌ಮೋಲ್ ಸಂಸ್ಥೆಯ ಅಧ್ಯಕ್ಷ ದಿನೇಶ್ ಸಿ.ಜಿ, ದಾವಣಗೆರೆಯ ಸಂಯುಕ್ತ ಪ್ರಾದೇಶಿಕ ಕೇಂದ್ರದ ಪುನಶ್ಚೇತನ ಅಧಿಕಾರಿ ಕನಗಸಭಾಪತಿ ಅವರು, ಅಂಗವಿಕಲ ಕಾಯ್ದೆಯಡಿ ಬರುವ ಸಾಮಾಜಿಕ ಯೋಜನೆಗಳ ಕುರಿತು ಹಿಮೊಫಿಲಿಯಾ ಪೀಡಿತರು ಪಡೆದುಕೊಳ್ಳಬೇಕಾದ ಹಕ್ಕುಗಳು ಮತ್ತು ಅಂಗವಿಕಲರಿಗಾಗಿ ಇರುವ ಸರ್ಕಾರಿ ಸೌಲಭ್ಯಗಳ ಕುರಿತು ತಿಳಿಸಿಕೊಟ್ಟರು.

ಡಾ. ಮೀರಾ ಹನಗವಾಡಿ ಅವರು 'ಸ್ವಯಂ ಚುಚ್ಚುಮದ್ದು', ಡಾ. ಇ.ಎಂ. ಸುರೇಂದ್ರ ಅವರು 'ಒಳ್ಳೆಯ ಆರೋಗ್ಯಕ್ಕಾಗಿ ಒಳ್ಳೆಯ ಜೀವನ ಶೈಲಿ' ಕುರಿತು ಉಪನ್ಯಾಸ ನೀಡಿದರು. ಸೈನಿಕ ಕರಿಬಸಪ್ಪ, ರವಿಕುಮಾರ್, ಕಿರಣ್, ನವೀನ್ ಹವಳಿ ಅವರು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು.

ಯೋಗ ಗುರು ಶಂಭುಲಿಂಗಯ್ಯ ಶಿಬಿರಾರ್ಥಿಗಳಿಗೆ ಯೋಗಾಭ್ಯಾಸ ಮಾಡಿಸಿದರು. ಸಮಾರೋಪ ಸಮಾರಂಭದಲ್ಲಿ ಸಂಯುಕ್ತ ಪ್ರಾದೇಶಿಕ ಕೇಂದ್ರದ ನಿರ್ದೇಶಕಿ ಮೀನಾಕ್ಷಿ, ಸಂಸ್ಥೆಯ ಗೌರವಾಧ್ಯಕ್ಷರಾದ ಕಿರುವಾಡಿ ಗಿರಿಜಮ್ಮ ಹಾಗೂ ಪ್ರಕಾಶ್ ಗಡಿಯಾರ್ ಪಾಲ್ಗೊಂಡಿದ್ದರು.

## ಇಸ್ರೇಲ್ ರಾಯಭಾರಿ ಕಚೇರಿ ಬಳಿ ಸ್ಫೋಟ

ನವದೆಹಲಿ, ಡಿ. 26 – ಚಾಣಕ್ಯಪುರಿಯ ರಾಯಭಾರಿ ವಲಯದಲ್ಲಿರುವ ಇಸ್ರೇಲ್ ರಾಯಭಾರಿ ಕಚೇರಿ ಬಳಿ ಸ್ಫೋಟವೊಂದು ಸಂಭವಿಸಿದೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ. ಸ್ಥಳದಲ್ಲಿ ಇಸ್ರೇಲ್ ರಾಯಭಾರಿ ಅವಹೇಳನ ಮಾಡುವ ಪತ್ರವೊಂದು ಕಂಡು ಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಡೀ ಸ್ಥಳವನ್ನು ಈಗ ಶೋಧಿಸಲಾಗುತ್ತಿದೆ. ರಾಷ್ಟ್ರೀಯ ತನಿಖಾ ಸಂಸ್ಥೆಯ ತಂಡ ಸ್ಥಳಕ್ಕೆ ತಲುಪಿದೆ. ಇಸ್ರೇಲ್ ಹಾಗೂ ಹಮಾಸ್ ನಡುವೆ ಯುದ್ಧ ಆರಂಭವಾದ ನಂತರ ಇಸ್ರೇಲ್ ರಾಯಭಾರಿ ಕಚೇರಿ ಸುತ್ತ ಭದ್ರತೆಯನ್ನು ಹೆಚ್ಚಿಸಲಾಗಿದೆ.

## ಸಚಿವ ಸ್ಥಾನದಿಂದ ಶಿವಾನಂದ ಪಾಟೀಲರ ತಕ್ಷಣವೇ ವಜಾಕ್ಕೆ ಒತ್ತಾಯ



ದಾವಣಗೆರೆ, ಡಿ.26- ರಾಜ್ಯದ ರೈತರನ್ನು ಅವಮಾನಿಸಿದ ಸಚಿವ ಶಿವಾನಂದ ಪಾಟೀಲರನ್ನು ತಕ್ಷಣವೇ ಸಂಪುಟದಿಂದ ವಜಾ ಮಾಡುವಂತೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ.ವೈ. ಪ್ರಕಾಶ್ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಸಾಲ ಮನ್ನಾ ಮಾಡಿ ಬಿಟ್ಟರೆ ರೈತರ ಜೀವನ ನಡೆಯುತ್ತದೆಯೇ? ರೈತರು ಆಸೆಪಟ್ಟರೆ ಬರಗಾಲ ಬರುತ್ತದೆಯೇ? ರೈತರ ಆಸೆಯಂತೆ ಮಳೆ ಬರುತ್ತದೆಯೇ? ಬರಗಾಲವಾಗಲೀ ಅಥವಾ ಮಳೆಗಾಲವಾ ಗಲೀ ಪ್ರಕೃತಿ ನಿಯಮ. ಯಾರು ಅಂದುಕೊಂಡಂತೆ ನಡೆಯುವುದಿಲ್ಲ. ಅತಿವೃಷ್ಟಿ, ಅನಾವೃಷ್ಟಿ ಎಂಬುದು ನೈಸರ್ಗಿಕ ವಿಕೋಪ ಎಂಬ ಸಾಮಾನ್ಯ ಜ್ಞಾನವೂ ಇಲ್ಲವೇ ನಿಮಗೆ. ರೈತರು ಭೂಮಿಯನ್ನು ನಂಬಿರುತ್ತಾರೆ. ಭೂಮಿಯಿಂದ ಬರುವ ಆದಾಯದಿಂದ ಜೀವನ ಕಟ್ಟಿಕೊಳ್ಳುತ್ತಾರೆ. ಇಂಥ ಸಾಮಾನ್ಯ ಜ್ಞಾನವು ಇಲ್ಲದ ತಮಗೇಕೆ ಸಚಿವ ಸ್ಥಾನ ಎಂದು ಪ್ರಕಾಶ್ ಪ್ರಶ್ನಿಸಿದರು.

## ಅದಾನಿ ಕುಟುಂಬದಿಂದ ಹಸಿರು ಇಂಧನದಲ್ಲಿ 9,350 ಕೋಟಿ ರೂ. ಹೂಡಿಕೆ

ನವದೆಹಲಿ, ಡಿ. 26 – ಉದ್ಯಮಿ ಗೌತಮ್ ಅದಾನಿ ಹಾಗೂ ಅವರ ಕುಟುಂಬದವರು ಹಸಿರು ಇಂಧನ ವಲಯಕ್ಕೆ 9,350 ಕೋಟಿ ರೂ. ಹೂಡಿಕೆ ಮಾಡಲಿದ್ದಾರೆ. ಇದು 2030ರ ವೇಳೆಗೆ 45 ಗಿಗಾವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ ತಲುಪಲು ನೆರವಾಗಲಿದೆ ಎಂದು ಕಂಪನಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಹಿಂಡನ್‌ಬರ್ಗ್ ರೀಸರ್ಚ್ ವರದಿಯ ನಂತರ ಅದಾನಿ ಸಮೂಹದ ಅದಾನಿ ಗ್ರೀನ್ ಎನರ್ಜಿ (ಎ.ಜಿ.ಇ.ಎಲ್.)ಗೆ ತೀವ್ರ ಹಿನ್ನಡೆಯಾಗಿತ್ತು. ಕುಟುಂಬದವರು ಮಾಡಲಿರುವ ಹೂಡಿಕೆ ಕಂಪನಿಗೆ ಬಲ ನೀಡಲಿದೆ.

## ರೈಲ್ವೆ ನಿಲ್ದಾಣಗಳಲ್ಲಿ ಮೋದಿ ಸೆಲ್ಫಿ ತಾಣಕ್ಕೆ ಖರ್ಗೆ ತರಾಟೆ

ನವದೆಹಲಿ, ಡಿ. 26 – ರೈಲ್ವೆ ನಿಲ್ದಾಣಗಳಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಚಿತ್ರದ ಜೊತೆ ಸೆಲ್ಫಿ ತೆಗೆಸಿಕೊಳ್ಳಲು ವ್ಯವಸ್ಥೆ ಮಾಡಿರುವುದನ್ನು ಟೀಕಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸರ್ಕಾರ ತೆರಿಗೆದಾರರ ಹಣವನ್ನು ಪೋಲು ಮಾಡುತ್ತಿದೆ ಎಂದಿದ್ದಾರೆ. ಮೋದಿ ಅವರ 3ಡಿ ಸೆಲ್ಫಿ ತಾಣಗಳನ್ನು ರೈಲ್ವೆ ನಿಲ್ದಾಣಗಳಲ್ಲಿ ಸ್ಥಾಪಿಸಿರುವುದು ತೆರಿಗೆದಾರರ ಹಣವನ್ನು ಪೋಲು ಮಾಡಿದಂತೆ. ಮತ್ತೊಂದೆಡೆ ಪ್ರತಿಪಕ್ಷಗಳ ರಾಜ್ಯಗಳು ಉದ್ಯೋಗ ಖಾತ್ರಿ ಅನುದಾನಕ್ಕಾಗಿ ಕಾಯುತ್ತಿವೆ ಎಂದು ಖರ್ಗೆ ಹೇಳಿದ್ದಾರೆ.

ಎ ದರ್ಜೆಯ ರೈಲ್ವೆ ನಿಲ್ದಾಣಗಳಲ್ಲಿ ತಲಾ 1.25 ಲಕ್ಷ ರೂ. ವೆಚ್ಚದಲ್ಲಿ ತಾತ್ಕಾಲಿಕ ಸೆಲ್ಫಿ ಬೂತ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಸಿ ದರ್ಜೆಯ ರೈಲ್ವೆ ನಿಲ್ದಾಣಗಳಲ್ಲಿ ಶಾಶ್ವತ ಬೂತ್ ನಿರ್ಮಿಸಲಾಗುತ್ತಿದ್ದು, ಇವುಗಳ ವೆಚ್ಚ 6.25 ಲಕ್ಷ ರೂ. ಎಂದು ಮಾಹಿತಿ ಹಕ್ಕು ಅರ್ಜಿಯೊಂದಕ್ಕೆ ತಿಳಿಸಲಾಗಿದೆ.

## ವಸತಿ ಯೋಜನೆಗೆ ಹಣ ಸ್ಲಂ ಜನರ ಹೋರಾಟಕ್ಕೆ ಸಂದ ಜಯ

ದಾವಣಗೆರೆ, ಡಿ.26- ಸರ್ಕಾರದ 6ನೇ ಗ್ಯಾರಂಟಿ ಸ್ಲಂ ನಿವಾಸಿಗಳ ವಸತಿ ಯೋಜನೆಗೆ ಹಣ ಮಂಜೂರು ಮಾಡಿರುವುದು ಸ್ಲಂ ಜನರು ನಡೆಸಿದ ನಿರಂತರ ಹೋರಾಟಕ್ಕೆ ಸಂದ ಜಯವಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ಬೇಡಿಕೆಗಳನ್ನು ಹಂತ-ಹಂತವಾಗಿ ಈಡೇರಿಸಲು ಮುಂದಾಗಬೇಕೆಂದು ಸ್ಲಂ ಜನಾಂದೋಲನ ಕರ್ನಾಟಕ ಪ್ರಧಾನ ಕಾರ್ಯದರ್ಶಿ ರೇಣುಕಾ ಯಲ್ಲಮ್ಮ ಒತ್ತಾಯಿಸಿದ್ದಾರೆ.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ನಮ್ಮ ಮತ ವಸತಿ ಹಕ್ಕಿಗಾಗಿ ಹಾಗೂ ಸ್ಲಂ ಜನರ ವಿಮೋಚನೆಗಾಗಿ ಎಂಬ ಜಾಗೃತಿಯೊಂದಿಗೆ ರಾಜ್ಯಾದ್ಯಂತ ಸ್ಲಂ ಜನರಲ್ಲಿ ಜಾಗೃತಿ ಕೈಗೊಂಡ ಪರಿಣಾಮ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಹಾಗಾಗಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 21-12-2023 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ, ಕೊಳಗೇರಿ ನಿವಾಸಿಗಳಿಗೆ ಮನೆ ನಿರ್ಮಾಣಕ್ಕೆ 6,170 ಕೋಟಿ ಬೃಹತ್ ಪ್ರಮಾಣದ ಅನುದಾನ ಮಂಜೂರು ಮಾಡಿ, ಫಲಾನುಭವಿಗಳ ವಂತಿಕೆ ಹಣವನ್ನು ಸರ್ಕಾರವೇ ಪಾವತಿಸಲು ಮುಂದಾಗಿರುವುದನ್ನು ಸ್ಲಂ ಜನಾಂದೋಲನ - ಕರ್ನಾಟಕದಿಂದ ಸ್ವಾಗತಿಸುತ್ತದೆ ಎಂದು ರೇಣುಕಾ ಯಲ್ಲಮ್ಮ ತಿಳಿಸಿದ್ದಾರೆ.

## ಭಗೀರಥ ಉಪ್ಪಾರ ಸಮಾಜದ ಪ್ರತಿಭಾ ಪುರಸ್ಕಾರಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ

ದಾವಣಗೆರೆ, ಡಿ.26- ಜಿಲ್ಲಾ ಭಗೀರಥ ಉಪ್ಪಾರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ 2022-23 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪುರಸ್ಕಾರ ಸಮಾರಂಭವು ಇದೇ ದಿನಾಂಕ 28 ರಂದು ನಡೆಯಲಿದೆ. ಆಸಕ್ತ ವಿದ್ಯಾರ್ಥಿಗಳು ಹೆಸರನ್ನು ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಉಪ್ಪಾರ ವಿದ್ಯಾರ್ಥಿ ನಿಲಯದ ಕಛೇರಿಯಲ್ಲಿ ನೋಂದಾಯಿಸಬಹುದು.ವಿವರಗಳಿಗೆ : ರಮೇಶ್ ಎಂ.ಸಿ. (ಮೊ: 94485 67515), ಹಾಲೇಶ್ ಹೆಚ್. ಎಸ್. (ಮೊ: 9844207701), ನಾಗರಾಜ್ ಎನ್. (ಮೊ: 98441 01183) ಇವರುಗಳಿಗೆ ಸಂಪರ್ಕಿಸಲು ಪ್ರಧಾನ ಕಾರ್ಯದರ್ಶಿ ಎನ್. ನಾಗರಾಜ ತಿಳಿಸಿದ್ದಾರೆ.

## ಅನ್ನದಾತರ ಬಗ್ಗೆ ಎಚ್ಚರಿಕೆಯಿಂದ ಮಾತನಾಡಬೇಕು : ಸಿದ್ದರಾಮಯ್ಯ

ಬೆಂಗಳೂರು, ಡಿ. 26 - ಅನ್ನದಾತ ರೈತರ ಬಗ್ಗೆ ಎಚ್ಚರಿಕೆ ಮಾತ್ರವಲ್ಲ, ಗೌರವದಿಂದ ಮಾತನಾಡಬೇಕು. ಹಗುರ ಮಾತುಗಳ ಮೂಲಕ ಅವಮಾನವಾಗುವಂತೆ ಮಾಡಬಾರದು. ಇದು ಪ್ರತಿಯೊಬ್ಬರು ಕಡ್ಡಾಯವಾಗಿ ಅನುಸರಿಸಿಕೊಂಡು ಬರಬೇಕಾದ ನೀತಿ ಸಂಹಿತೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ರೈತ ಕುಟುಂಬದಿಂದ ಬಂದಿರುವ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರಿಗೆ ರೈತರನ್ನು ಅವಮಾನಿಸಬೇಕೆಂಬ ದುರುದ್ದೇಶ ಖಂಡಿತಾ ಇರಲಾರದು. ತನ್ನ ಜೊತೆಗಿದ್ದ ರೈತರೊಂದಿಗಿನ ಸಲುಗೆಯಿಂದ ಕೆಲವು ಮಾತುಗಳನ್ನು ಆಡಿದ್ದಾರೆ. ಆದರೆ ಇದು ಸಮಸ್ತ ರೈತ ಸಮುದಾಯಕ್ಕೆ ಅನ್ವಯ ಮಾಡುವಾಗ ವಿಪರೀತ ಅರ್ಥಕ್ಕೆ ಕಾರಣವಾಗುತ್ತದೆ, ಇದು ಸಲ್ಲದು ಎಂದಿದ್ದಾರೆ.

ರೈತರ ಕಲ್ಯಾಣಕ್ಕಾಗಿ ಕಿಂಚಿತ್ತೂ ಕೆಲಸ ಮಾಡದೇ ಇರುವ, ಮೂಲತಃ ರೈತ ವಿರೋಧಿಯಾಗಿರುವ ಬಿಜೆಪಿಯ ನಾಯಕರು, ಇಂತಹದ್ದೇ ಅವಕಾಶಕ್ಕಾಗಿ ಕಾದು ಕೂತವರಂತೆ ಶಿವಾನಂದ ಪಾಟೀಲರ ಮಾತುಗಳನ್ನು ವಿವಾದವನ್ನಾಗಿ ಮಾಡಿದ್ದಾರೆ.

ಬೀಜ-ಗೊಬ್ಬರ ಕೊಡಿ ಎಂದು ಕೇಳಿದ ರೈತರನ್ನು ಗುಂಡಿಕ್ಕಿ ಸಾಯಿಸಿದ ಮತ್ತು ರೈತರ ಸಾಲ ಮನ್ನಾ ಮಾಡಿ ಎಂದು ಕೇಳಿದರೆ ನೋಟ್ ಪ್ರಿಂಟಿಂಗ್ ಮೆಷಿನ್ ಇದೆಯೇ ಎಂದು ಕೇಳಿದ ಭಾರತೀಯ ಜನತಾ ಪಕ್ಷದ ನಾಯಕರಿಗೆ ಕಾಂಗ್ರೆಸ್ ಪಕ್ಷದ ವಿರುದ್ಧ ಮಾತನಾಡುವ ಯಾವ ನೈತಿಕತೆ ಇದೆ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವ ಬಿಜೆಪಿ ನಾಯಕರು ರೈತರ ಕಲ್ಯಾಣಕ್ಕಾಗಿ ಏನು ಮಾಡಿದ್ದಾರೆ? ನಾವು ನಿಜವಾದ ರೈತ ಮಿತ್ರರು, ಬಿಜೆಪಿಯವರಂತೆ ನಕಲಿ ಮಿತ್ರರಲ್ಲ. ರೈತರ ಬಗೆಗಿನ ನಮ್ಮ ಪ್ರೀತಿ-ಅಭಿಮಾನಕ್ಕೆ ನಮ್ಮ ಸರ್ಕಾರದ ಕಳೆದ ಆರು ತಿಂಗಳುಗಳಲ್ಲಿ ಜಾರಿಗೆ ತಂದಿರುವ ರೈತ ಪರ ಕಾರ್ಯಕ್ರಮಗಳೇ ಸಾಕ್ಷಿ.

ಬರಗಾಲದಿಂದ ನೊಂದಿರುವ ರಾಜ್ಯದ ರೈತರಿಗೆ ಕೇಂದ್ರ ಸರ್ಕಾರ ನಯಾಪೈಸೆಯ ಪರಿಹಾರ ನೀಡದೇ ಇದ್ದರೂ, ನಾವು ಪ್ರತಿ ರೈತ ಕುಟುಂಬಗಳಿಗೆ ಎರಡು ಸಾವಿರ ರೂ. ನೀಡಿದ್ದೇವೆ ಎಂದವರು ಹೇಳಿದ್ದಾರೆ.

## ಕಾನ್‌ಸ್ಟೇಬಲ್ ಮತ್ತು ರೈಫಲ್ ಮ್ಯಾನ್ ಹುದ್ದೆಗಳಿಗೆ ಅರ್ಜಿ

ದಾವಣಗೆರೆ, ಡಿ. 26- ಸಿಬ್ಬಂದಿ ನೇಮಕಾತಿ ಆಯೋಗದ (ಎಸ್‌ಎಸ್‌ಸಿ) ವತಿಯಿಂದ ಕೇಂದ್ರ ಸಶಸ್ತ್ರ ಪೊಲೀಸ್ (ಸಿಎಪಿಎಫ್) ಮತ್ತು ಎಸ್‌ಎಸ್‌ಎಫ್ ಪಡೆಗಳಲ್ಲಿ ಕಾನ್‌ಸ್ಟೇಬಲ್ ಮತ್ತು ಅಸ್ಸಾಂ ರೈಫಲ್‌ನಲ್ಲಿ ರೈಫಲ್ ಮ್ಯಾನ್ ಹುದ್ದೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಯನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್ https://ssc.nic.in/" \t "_blank, https://ssc.nic.in or http://www.sskkr.kar.nic.in/" \t "_blank" www.sskkr.kar.nic.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 31 ಕೊನೆಯ ದಿನ.

ವಿವರಕ್ಕೆ 08025502520 ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ದಾವಣಗೆರೆ. ದೂ. ಸಂ : 08192 259446 ಸಂಪರ್ಕಿಸಲು ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ.

## ಸಮಾಜಕ್ಕೆ ಸಂಸ್ಕಾರ ಸಿಕ್ಕಲ್ಲಿ ಶ್ರೇಷ್ಠ ಸಮಾಜ ನಿರ್ಮಾಣ

### ನಂದಿಗುಡಿ ಕೆಂಚವೀರೇಶ್ವರ ಶಿವಯೋಗಿಗಳ ಪುಣ್ಯ ಸಂಸ್ಮರಣೆಯಲ್ಲಿ ಶಾಸಕ ಹರೀಶ್ ಅಭಿಮತ



ಮಲೇಬೆನ್ನೂರು, ಡಿ. 26 - ನಾಡಿನಲ್ಲಿ ನೂರಾರು ವರ್ಷಗಳಿಂದ ಮಠಗಳು ಆಧ್ಯಾತ್ಮದ ಜೊತೆಗೆ ಶಿಕ್ಷಣ, ಸಂಸ್ಕೃತಿ, ಸಂಸ್ಕಾರವನ್ನು ಒಟ್ಟೊಟ್ಟಿಗೆ ನೀಡುತ್ತವೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಂದಿಗುಡಿ ವೃಷಭಪುರಿ ಬೃಹನ್ಮಠದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಶ್ರೀ ಕೆಂಚವೀರೇಶ್ವರ ಮಹಾ ಶಿವ ಯೋಗಿಗಳ ಪುಣ್ಯ ಸಂಸ್ಮರಣಾ ಮಹೋತ್ಸವ ಮತ್ತು ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ 14ನೇ ಸೂರ್ಯ ಸಿಂಹಾಸನಾರೋಹಣ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾಜಕ್ಕೆ ಸಂಸ್ಕಾರ ಸಿಕ್ಕಲ್ಲಿ ಶ್ರೇಷ್ಠ ಸಮಾಜ ನಿರ್ಮಾಣ ಆಗುತ್ತದೆ. ಈ ನಿಟ್ಟಿನಲ್ಲಿ ನಂದಿಗುಡಿ ಬೃಹನ್ಮಠವು ಹಲವು ವರ್ಷಗಳಿಂದ ಅಂತಹ ಮಹಾತ್ಕಾರ್ಯ ಮಾಡುತ್ತಿದೆ. ಶಿಕ್ಷಣ ಸಂಸ್ಥೆಗಳನ್ನು ತೆರೆದು ಶಿಕ್ಷಣದ ಜೊತೆ ಸಮಾಜದಲ್ಲಿ ಸಂಸ್ಕಾರವನ್ನು ಬಿತ್ತಿ ಬೆಳೆಸುತ್ತಿದೆ ಎಂದು ಹರೀಶ್ ಮೆಚ್ಚುಗೆ ವ್ಯಕ್ತ ಪಡಿಸಿದರು.

ಉಪನ್ಯಾಸಕರಾಗಿದ್ದ ಹೊನ್ನಾಳಿಯ ಶಾಂತರಾಜ ಪಾಟೀಲ್ ಮಾತನಾಡಿ, ತುಂಗಭದ್ರಾ ನದಿಯ ತಟದಲ್ಲಿ ಐತಿಹಾಸಿಕ ನಂದಿ ವಿಗ್ರಹ ಇರುವುದರಿಂದ ಈ ಗ್ರಾಮಕ್ಕೆ ನಂದಿಗುಡಿ ಎಂಬ ಹೆಸರು ಬಂದಿದೆ. ಈ ನದಿಯ ತಟದಲ್ಲಿ ಇರುವ ಈ ಮಠವು ಐತಿಹಾಸಿಕ ಭವ್ಯ ಪರಂಪರೆ ಹೊಂದಿದೆ. ಜಾತಿ ಮತಗಳನ್ನು ಮೀರಿ ಎಲ್ಲಾ ಸಮುದಾಯದ ಭಕ್ತರನ್ನು ಹೊಂದಿದ ಮಠವಾಗಿದೆ. ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣ, ದಾಸೋಹ ಮತ್ತು ಅನ್ನದಾಸೋಹವನ್ನು ನೆಡಸಿಕೊಂಡು ಬಂದಿದೆ ಎಂದು ತಿಳಿಸಿದರು.

ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು.

ಹೊನ್ನಾಳಿ ಶಾಸಕ ಶಾಂತನಗೌಡ, ಮಾಜಿ ಶಾಸಕ ಡಿ.ಬಿ. ಗಂಗಪ್ಪ, ನೊಳಂಬ ವೀರಶೈವ ಸಂಘದ ಕೇಂದ್ರ ಸಮಿತಿ ಅಧ್ಯಕ್ಷ ಆರ್.ಎಸ್. ಪಾಟೀಲ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಉಕ್ಕಡಗಾತ್ರಿ ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಾರ್ಯದರ್ಶಿ ಎಸ್. ಸುರೇಶ್ ಮಾತನಾಡಿದರು. ಉಕ್ಕಡಗಾತ್ರಿ ಗ್ರಾ.ಪಂ. ಅಧ್ಯಕ್ಷೆ ಭಾರತಮ್ಮ, ಉಪಾಧ್ಯಕ್ಷ ಗೋವಿನಹಾಳ್ ದಡ್ಡಿ ಪ್ರಕಾಶ್, ವಾಸನ ಗ್ರಾ. ಪಂ. ಅಧ್ಯಕ್ಷ ರುದ್ರಗೌಡ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಜಿ.ಪಂ. ಮಾಜಿ ಸದಸ್ಯೆ ಶ್ರೀಮತಿ ಚಿದಾನಂದಮ್ಮ ಮತ್ತು ಮಲೇಬೆನ್ನೂರು ಅಪೂರ್ವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಡಾ.ಟಿ. ಬಸವರಾಜ್ ಈ ದಿನದ ದಾಸೋಹ ಸೇವಾರ್ಥಿಗಳಾಗಿದ್ದರು.

# ಜಗಳೂರು ತಾ.ನ್ನು ಚಿತ್ರದುರ್ಗ ಜಿಲ್ಲೆಗೆ ಪುನಃ ಮರು ಸೇರ್ಪಡೆಯ ಅವಶ್ಯಕತೆ ಇದೆಯಾ?



**-ಜಿ.ಎಸ್.ಸುಭಾಷ್ ಚಂದ್ರಭೋಸ್**
ನಿವೃತ್ತ ಉಪನ್ಯಾಸಕರು, ಮುಚ್ಚನೂರು, ಜಗಳೂರು ತಾಲ್ಲೂಕು
**ಮೊ. 9916760160**

1997 ರವರೆಗೂ ಜಗಳೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆಯ 9 ತಾಲ್ಲೂಕುಗಳಲ್ಲಿ ಒಂದಾಗಿತ್ತು. ಚಿತ್ರದುರ್ಗ ಜಿಲ್ಲೆ ರಚನೆಯಾದ ದಿನದಿಂದಲೂ ಜಗಳೂರು ತಾಲ್ಲೂಕು ಅದರ ಜೊತೆಯಲ್ಲಿದ್ದರೂ ಏಕೆ ಅಭಿವೃದ್ಧಿಗೊಳ್ಳಲಿಲ್ಲ? ಜಗಳೂರು ತಾಲ್ಲೂಕು ಜಗಳೂರು ಕಸಬಾ ಸೇರಿ ಮೂರು ಹೋಬಳಿಗಳನ್ನು ಒಳಗೊಂಡಿದೆ. ಎರಡು ಹೋಬಳಿ ಕೇಂದ್ರಗಳು ತಾಲ್ಲೂಕಿನ ಗಡಿಭಾಗದಲ್ಲಿವೆ. ಒಂದು ಹೋಬಳಿ ಕೇಂದ್ರ ದಾವಣಗೆರೆಗೆ ಹತ್ತಿರವಾದರೆ, ಇನ್ನೊಂದು ಹೋಬಳಿ ಕೇಂದ್ರ 50 ಕಿ.ಮೀ. ದೂರವಿದೆ. 1997 ರಲ್ಲಿ ಗದ್ದಿಗೌಡರ್, ಹುಂಡೇಕರ್, ವಾಸುದೇವರ ಸಮಿತಿಯನ್ನು ಆಧರಿಸಿ ಆಗಿನ 20 ಜಿಲ್ಲೆಗಳನ್ನು 27 ಕ್ಕೆ ಏರಿಸಿ, ಆಗಿನ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಚಿತ್ರದುರ್ಗದಲ್ಲಿದ್ದ ದಾವಣಗೆರೆಯನ್ನು ಬೇರ್ಪಡಿಸಿ ದಾವಣಗೆರೆ, ಹರಿಹರ, ಜಗಳೂರು ಇದರ ಜೊತೆಗೆ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ ಹಾಗೂ ಬಳ್ಳಾರಿ ಜಿಲ್ಲೆಯ ಈಗಿನ ವಿಜಯನಗರ ಜಿಲ್ಲೆಯ ಹರಪನಹಳ್ಳಿಯನ್ನು ಸೇರಿಸಿ ದಿನಾಂಕ :15-08-1997 ರಲ್ಲಿ ದಾವಣಗೆರೆ ಜಿಲ್ಲೆ ಜನ್ಮತಾಳಿತು.

ಜಗಳೂರು ತಾಲ್ಲೂಕಿನ ಜನ ಎಲ್ಲಿದ್ದರೂ ನತದೃಷ್ಟರು, ಚಿತ್ರದುರ್ಗ ಜಿಲ್ಲೆಯಲ್ಲಿದ್ದಾಗ ಉಪವಿಭಾಗ, ಎ.ಪಿ.ಎಂ.ಸಿ ನ್ಯಾಯಾಲಯ ಮುಂತಾದವುಗಳೂ ದಾವಣಗೆರೆಗೆ ಸೇರಿದ್ದವು. ಡಿ.ವೈ.ಎಸ್‌ಪಿ ಕಛೇರಿ ಚಳ್ಳಕೆರೆಗೆ ಸೇರಿತ್ತು. ಹೀಗೆ ತಾಲ್ಲೂಕಿನ ಕೆಲಸ ಕಾರ್ಯಗಳಿಗೆ ಮೂರು ಕಡೆಗೆ ಪರದಾಡಬೇಕಾಗಿತ್ತು. ನಂತರ ದಾವಣಗೆರೆ ಜಿಲ್ಲೆ ಉದಯವಾದ ಮೇಲೆ ರಾಜಕೀಯ ಚದುರಂಗದಾಟದಿಂದ ಜಗಳೂರು ತಾಲ್ಲೂಕು ಹರಪನಹಳ್ಳಿ ಉಪವಿಭಾಗಕ್ಕೆ ಸೇರ್ಪಡೆಯಾಯಿತು. ಜಿಲ್ಲಾ ಕೇಂದ್ರ 48 ಕಿ.ಮೀ. ಉಪವಿಭಾಗ ಕೇಂದ್ರ ಸುಮಾರು 70 ಕಿ,ಮೀ. ಆಗುವುದರಿಂದ ಜಗಳೂರು ತಾಲ್ಲೂಕಿನ ಮುಗ್ಧ ಜನರು ಮನೆ-ಮಠ ಬಿಟ್ಟು ಅಲೆದಾಡಬೇಕಾಯಿತು. ಮರು ಸೇರ್ಪಡೆಯ ಅಣ್ಣಂದಿರು, ನಮ್ಮಗಳ ಅಭಿಪ್ರಾಯ ಕೇಳಿಲ್ಲವೆಂದು ಮೊಂಡುವಾದ ಮಾಡುತ್ತಿದ್ದಾರೆ. ಮೇಲ್ಕಂಡ ಸಮಿತಿಗಳನ್ನು ಆಧರಿಸಿ ಮಾಡಿದ್ದಾರೆ ಎಂಬುದನ್ನು ಮರೆತು ಹಾಗಾಗ ಕುಂಬಕರ್ಣನಂತೆ ಎಚ್ಚರಗೊಂಡಾಗಲೆಲ್ಲಾ ಹುತ್ತಬಡಿದು ಹಾವು ಎಬ್ಬಿಸಿ ಪುಂಗಿ ಊದುವ ಕೆಲಸ ಮಾಡುತಿದ್ದಾರೆ ನಮ್ಮ ಅಣ್ಣಂದಿರು.

ಜಗಳೂರು ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಸೇರಿ ಸುಮಾರು 25 ವರ್ಷಗಳಾದವು. ಇಲ್ಲಿಯವರೆಗೆ ಯಾವ ಜನ ನಾಯಕರು ಜಗಳೂರು ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಸೇರಿಸಿದ್ದನ್ನು ಪ್ರಶ್ನೆ ಮಾಡಿಲ್ಲ. ಈ ಜಿಲ್ಲೆಯಾದಾಗಿನಿಂದ ಐದಾರು ಜನನಾಯಕರು ತಾಲ್ಲೂಕಿಗೆ ಬೇಕಾದ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಈಗಿನ ಜನನಾಯಕರು ಕ್ಷೇತ್ರದ ಬಗ್ಗೆ ತಮ್ಮದೇ ಆದ ಆಲೋಚನೆಯ ಯೋಜನೆಗಳ ಕನಸುಗಳನ್ನು ಸೂಪಜ್ಞ ಮನಸ್ಸಿನಿಂದ ರೂಪಿಸುತ್ತಿದ್ದಾರೆ. ಈಗ ಹರಪನಹಳ್ಳಿ ದಾವಣಗೆರೆ ಜಿಲ್ಲೆಯಿಂದ ಪುನಃ (ಬಳ್ಳಾರಿ) ವಿಜಯನಗರ ಜಿಲ್ಲೆಗೆ ಸೇರ್ಪಡೆಯಾದ ಮೇಲೆ ಜಗಳೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆಗೆ ಸೇರಿಸಬೇಕೆಂದು ಒಂದಿಷ್ಟು ಅಣ್ಣಂದಿರು ಕೆಲವು ಸೌಲಭ್ಯಗಳು (ಡಿ,ಆರ್.ಡಿ, ವಿದರ್ಭ, ಬಯಲು ಸೀಮೆ) ಸಿಗುತ್ತವೆಂದು ಇಲ್ಲಸಲ್ಲದ ಆಸೆಗಳನ್ನು ಹುಟ್ಟಿಸಿ ಜಾತಿ, ಮತ, ಧರ್ಮ, ಪಂಥಗಳನ್ನು ಒಡೆಯುವಂತಹ ಪ್ರಯತ್ನ ಮಾಡುತ್ತಿದ್ದಾರೆ, ಜಗಳೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆಗೆ ಮರು ಸೇರ್ಪಡೆಯಾದರೆ, ಭದ್ರಾ ಮೇಲ್ದಂಡೆ ಯೋಜನೆಯಿಂದ ಕಸಬಾ ಹೋಬಳಿಯ ಕೆಲವು ಗ್ರಾಮಗಳಿಗೆ ಇದರ ಪ್ರಯೋಜನ ದೊರಕಬಹುದು.

ತಾಲ್ಲೂಕು ಸಮಗ್ರ ನೀರಾವರಿ ಆಗುತ್ತದೆಂದು ಜನರಿಗೆ




ಇಲ್ಲ ಸಲ್ಲದ ಆಸೆ ಹುಟ್ಟಿಸುತ್ತಿದ್ದಾರೆ. ಬಿಳಿಚೋಡು ಮತ್ತು ಸೊಕ್ಕೆ ಹೋಬಳಿಯ ಗ್ರಾಮಗಳಿಗೆ ಇದರಿಂದ ಯಾವ ಪ್ರಯೋಜನವೂ ಇಲ್ಲ. ಚಿತ್ರದುರ್ಗ ಜಿಲ್ಲೆ ಈಗ 6 ತಾಲ್ಲೂಕು ಗಳನ್ನು ಒಳಗೊಂಡಿದೆ, ಈ ಯೋಜನೆಯಿಂದ ಹಿರಿಯೂರು, ಹೊಸದುರ್ಗ, ಚಿತ್ರದುರ್ಗದ (ಕೆಲವು ಭಾಗ) ಚಳ್ಳಕೆರೆಯ (ಕೆಲವು ಭಾಗ) ಸೌಲಭ್ಯ ಪಡೆಯಲಿದೆ. ಇದರಲ್ಲಿ ಹೊಳಲ್ಕೆರೆ, ಮೊಳಕಾಲ್ಮೂರಿಗೆ ಇದರಿಂದ ಯಾವ ಅನುಕೂಲವಿಲ್ಲ, ಮೊಳಕಾಲ್ಮೂರಿನಿಂದ ಚಿತ್ರದುರ್ಗಕ್ಕೆ ಸುಮಾರು 100 ಕಿ.ಮೀ ಇದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅತೀ ಹಿಂದುಳಿದೆ ಪ್ರದೇಶ ಮೊಳಕಾಲ್ಮೂರು. ಇವರು ಬಳ್ಳಾರಿಗೆ (40 ಕಿ,ಮೀ) ಸೇರಿಸಬೇಕೆಂದು ಹೋರಾಟ ಮಾಡಿದರೆ ಹೇಗೆ? ಮೊಳಕಾಲ್ಮೂರು ತಾಲ್ಲೂಕಿನ ಉಳ್ಳಾಗಡ್ಡೆ ರಾಂಪುರ ಹೋಬಳಿ ಬಳ್ಳಾರಿಗೆ 25 ಕಿ.ಮೀ. ಮಾತ್ರ ಇದೆ. ಇವರ ಒಡನಾಟ ಬಳ್ಳಾರಿಯಲ್ಲಿದೆ. ಇವರು ಬಳ್ಳಾರಿಗೆ ಸೇರಿಸಬೇಕೆಂದರೆ ಆಡಳಿತದ ಮೇಲೆ ಎಷ್ಟು ದುಷ್ಪರಿಣಾಮ ಬೀರುತ್ತದೆ.

ಮರು ಸೇರ್ಪಡೆಯ ಅಣ್ಣಂದಿರು ಮುಗ್ಧ ಜನರಿಗೆ ದಾವಣಗೆರೆ ಶ್ರೀಮಂತ ಜಿಲ್ಲೆ. ಚಿತ್ರದುರ್ಗ ಜಿಲ್ಲೆಗೆ ಸೇರಿಕೊಂಡರೆ ಕೈಲಾಸವನ್ನೇ ಧರೆಗೆ ಇಳಿಸಬಹುದೆಂದು ಅಂಗೈಯಲ್ಲಿ ಆಶಾ ಗೋಪುರಗಳನ್ನು ತೋರಿಸುತ್ತಿದ್ದಾರೆ. ದಾವಣಗೆರೆ ತಾಲ್ಲೂಕಿನ ಆನಗೋಡು, ಮಾಯಕೊಂಡ ಹೋಬಳಿಯ ಶೇಕಡ 70 ರಷ್ಟು ಗ್ರಾಮಗಳು ನೀರಾವರಿಯ ಸೌಕರ್ಯವನ್ನು ಹೊಂದಿಲ್ಲ. ಜಗಳೂರು ಚಿತ್ರದುರ್ಗ ಜಿಲ್ಲೆಯಲ್ಲಿದ್ದಾಗ ಈ ಪಟ್ಟಣಕ್ಕೆ ರೈಲು ಮಾರ್ಗದ ಸರ್ವೇ ಕಾರ್ಯ ನಡೆದಿತ್ತು, ಈ ರೈಲು ಮಾರ್ಗ ಆರಂಭವಾಗಿದ್ದರೆ, ವಿಜಯಪುರ, ಬಾಗಲಕೋಟೆ, ಬಾದಾಮಿ, ಗದಗ, ಕೊಪ್ಪಳ, ಹೊಸಪೇಟೆ, ಕೊಟ್ಟೂರು, ಜಗಳೂರು, ಮಾರ್ಗವಾಗಿ ಚಿತ್ರದುರ್ಗ ತಲುಪಿದ್ದರೆ ಈ ಪಟ್ಟಣಗಳಿಗೆ ಬೆಂಗಳೂರು ಸಮೀಪವಾಗುತ್ತಿತ್ತು. ಜಗಳೂರು ಸಹ ಎಷ್ಟು ಅಭಿವೃದ್ಧಿ ಹೊಂದುತ್ತಿತ್ತು. ಎನ್ನುವುದನ್ನು ಮರು ಸೇರ್ಪಡೆಯ ಅಣ್ಣಂದಿರು ಯೋಚನೆ ಮಾಡಿದ್ದೀರಾ? ಚಿತ್ರದುರ್ಗದಿಂದ ಸೊಲ್ಲಾಪುರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ-13 ಜಗಳೂರು ಪಟ್ಟಣದ ಮೂಲಕ ಹೋಗಬೇಕಾಗಿತ್ತು. ಈ ಎರಡೂ ಯೋಜನೆಗಳಿಗೆ ಆಗಿನ ಭೂ ಮಾಲೀಕರು ರಾಜಕೀಯವನ್ನು ಬಳಸಿಕೊಂಡು ಜಗಳೂರು ಪಟ್ಟಣವನ್ನು ಮತ್ತು ತಾಲ್ಲೂಕನ್ನು ಹಿಂದುಳಿಯುವಂತೆ ಮಾಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಹಾಗೂ ಚಿತ್ರದುರ್ಗ ನಗರ ಎಷ್ಟು ಅಭಿವೃದ್ಧಿಯಾಗಿದೆ ಎಂಬುದನ್ನು ಅಂಕಿ-ಅಂಶಗಳ ಮೂಲಕ ಮರು ಸೇರ್ಪಡೆಯ ಅಣ್ಣಂದಿರು ಸಾದರಪಡಿಸಬೇಕು. ಚಿತ್ರದುರ್ಗ ನಗರಕ್ಕೆ ಚಾರಿತ್ರಿಕ ಪರಂಪರೆ ಇದೆ. ಐತಿಹಾಸಿಕ ಮಹತ್ವವಿದೆ. ಅದೊಂದು ಪ್ರವಾಸಿ ಕೇಂದ್ರ ಆಗಿದ್ದರೂ, ಅಲ್ಲಿ ವಿಶಾಲವಾದ ರಸ್ತೆಗಳಾಗಲೀ, ಉದ್ಯಾನವನಗಳಾಗಲೀ ಹಾಗೂ ಇನ್ನು ಮುಂತಾದ ಸಾಮಾನ್ಯ ಕನಿಷ್ಟ ಸೌಕರ್ಯಗಳಿಲ್ಲದೆ, ಈ ನಗರ ಬಿಕೋ ಎನ್ನುತ್ತಿದೆ. ಉದಾ: ಇಲ್ಲಿಯ ಜಿಲ್ಲಾಸ್ಪತ್ರೆ ನೋಡಿದರೆ, ಇದು ಜಿಲ್ಲಾ ಕೇಂದ್ರವೇ ಎಂಬ ಅನುಮಾನ ಬರುತ್ತದೆ. ಈ ಹಿಂದುಳಿದ ಪ್ರದೇಶಗಳಿಗೆ ವಿಶೇಷ (ಪ್ಯಾಕೇಜ್) ಅನುದಾನದ ಮೂಲಕ ಅಭಿವೃದ್ಧಿಯನ್ನು ಮಾಡಲು ಏಕೆ ಸಾಧ್ಯವಾಗಿಲ್ಲ? ಮರು ಸೇರ್ಪಡೆಯ ಅಣ್ಣಂದಿರು ನಿಮಗೆ ವಿಶೇಷ ಅನುದಾನ, ವಿಶೇಷ ಮೀಸಲಾತಿ ನಿಮ್ಮ ಮನೆಯ ಬಾಗಿಲಿಗೆ ಬರುತ್ತವೆಂದು ಹುಚ್ಚು ಮನಸ್ಸಿನ ಹತ್ತು ಮುಖಗಳನ್ನು ಸೃಷ್ಟಿ ಮಾಡುತ್ತಾ ಇದ್ದಾರೆ. ನಿಮ್ಮ ಮನೆ ಬಾಗಿಲಿಗೆ ಯಾವ ಅನುದಾನವೂ ಬರುವುದಿಲ್ಲ. ಈಗ ಹೇಗೆ ಚಿತ್ರದುರ್ಗ ಹಿಂದುಳಿದ ಪ್ರದೇಶವೆಂದು ಹಣೆಪಟ್ಟಿ ಹೊಂದಿದೆಯೋ ಹಾಗೆ ನಾವೂ ಸಹ ಹಣೆಪಟ್ಟಿ ಧರಿಸಬೇಕಾಗುತ್ತದೆ. ಒಂದು ವೇಳೆ ಸೇರ್ಪಡೆ ಯಾದರೆ ಮುಂದೊಂದು ದಿನ ಮರು ಸೇರ್ಪಡೆಯ ಅಣ್ಣಂದಿರಿಗೆ ಶಾಪ ಹಾಕುವ ಕಾಲ ಬರಬಹುದು?

ದಾವಣಗೆರೆ ಜಿಲ್ಲೆಯಲ್ಲಿರುವ ಜಗಳೂರು ತಾಲ್ಲೂಕು ಹೂವಿನ ಜೊತೆ ನಾರು ಸ್ವರ್ಗ ಸೇರಿದಂತೆ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ. ಮರು ಸೇರ್ಪಡೆಯ ಅಣ್ಣಂದಿರು ತುಘಲಕ್ ದರ್ಬಾರ್ ಮಾಡಲು ಹೊರಟಿದ್ದಾರೆ. ತುಘಲಕ್ ದೆಹಲಿಯಿಂದ ದೇವಗಿರಿಗೆ, ದೇವಗಿರಿಯಿಂದ ದೆಹಲಿಗೆ ರಾಜಧಾನಿಯನ್ನು ಬದಲಾವಣೆ ಮಾಡುತ್ತಿದ್ದನಂತೆ, ಜನರ ಬವಣೆಗಳು ಮಾತ್ರ ಬೆಟ್ಟದಷ್ಟು ಹಾಗೆಯೇ ಇದ್ದವೆಂಬುದನ್ನು ಕೊನೆಗೆ ತುಘಲಕ್ ಅರಿತನಂತೆ, ಹೀಗೆ ಬದಲಾವಣೆ ಮಾಡುತ್ತಾ ಹೋದರೆ (4ನೇ ಪುಟಕ್ಕೆ)

# ಯುವನಿಧಿ ಭಿತ್ತಿಪತ್ರ ಬಿಡುಗಡೆ

**(1ನೇ ಪುಟದಿಂದ)** ಪಡೆದವರು ಮಾತ್ರವೇ ಈ ಯೋಜನೆಗೆ ಅರ್ಹರಾಗಿದ್ದಾರೆ. ಹೊರ ರಾಜ್ಯಗಳಲ್ಲಿ ಪದವಿ ಪಡೆದವರಿಗೆ ಈ ಯೋಜನೆಯಲ್ಲಿ ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್, ಗ್ರಾಮಗಳಲ್ಲಿರುವ ನಿರುದ್ಯೋಗಿ ಪದವೀಧರ/ಡಿಪ್ಲೋಮಾ ಪಡೆದವರು ಬಾಪೂಜಿ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಬಸವನಗೌಡ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಷಣ್ಮುಖಪ್ಪ ಮತ್ತಿತರರು ಉಪಸ್ಥಿತರಿದ್ದರು.

## ನಿರುದ್ಯೋಗಿಗಳು ಉದ್ಯೋಗ ಪಡೆಯಲು ನೆರವು

ಯುವನಿಧಿ ಯೋಜನೆಗೆ ಸೇರ್ಪಡೆಯಾಗುವವರಿಗೆ ಉದ್ಯೋಗಾವಕಾಶ ಹಾಗೂ ಕೌಶಲ್ಯ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು. ಕೌಶಲ್ಯಾಭಿವೃದ್ಧಿ ಇಲಾಖೆಯ ಮೂಲಕ ಇವರಿಗೆ ತರಬೇತಿ ಕೊಡಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಮೂರು ತಿಂಗಳಿಗೊಮ್ಮೆ ಉದ್ಯೋಗ ಮೇಳ ನಡೆಸಲು ಜಿಲ್ಲಾಡಳಿತ ಈಗಾಗಲೇ ನಿರ್ಧರಿಸಿದೆ. ಜನವರಿಯಲ್ಲಿ ಮುಂದಿನ ಮೇಳ ನಡೆಯಲಿದ್ದು, ಇದರಲ್ಲಿ ಪಾಲ್ಗೊಳ್ಳಲು ಯುವನಿಧಿ ಫಲಾನುಭವಿಗಳಿಗೆ ವೈಯಕ್ತಿಕ ಮಾಹಿತಿಯನ್ನೂ ನೀಡಲಾಗುವುದು ಎಂದರು.

## ಇಂದಿನಿಂದ ಗೃಹಲಕ್ಷ್ಮಿ ಶಿಬಿರ

ಜಿಲ್ಲೆಯ ಗ್ರಾಮ ಪಂಚಾಯ್ತಿಗಳಲ್ಲಿ ಇಂದಿನಿಂದ ಡಿ.29 ರವರೆಗೆ ಗೃಹ ಲಕ್ಷ್ಮಿ ಶಿಬಿರಗಳನ್ನು ಆಯೋಜಿಸಲಾಗುವುದು ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ತಿಳಿಸಿದರು.

ಆಧಾರ್ ಜೋಡಣೆ ಸಮಸ್ಯೆ, ಬ್ಯಾಂಕ್ ಖಾತೆ ತೆರೆಯುವುದೂ ಸೇರಿದಂತೆ ಹಲವಾರು ವಿಷಯಗಳಲ್ಲಿ ನೆರವಾಗಲು ಶಿಬಿರ ನಡೆಸಲಾಗುವುದು ಎಂದವರು ಹೇಳಿದರು.

ಪಿ.ಡಿ.ಒ., ಡಾಟಾ ಎಂಟ್ರಿ ಆಪರೇಟರ್, ಅಂಗನವಾಡಿ ಕಾರ್ಯಕರ್ತೆಯರು, ಅಂಚೆ ಕಚೇರಿ ಸಿಬ್ಬಂದಿ ಸೇರಿದಂತೆ ಸಂಬಂಧಿಸಿದವರು ಈ ಶಿಬಿರದಲ್ಲಿ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

## ತಿಂಗಳು ಹಾಕಬೇಕು ನಿರುದ್ಯೋಗ ಹಾಜರಿ!

**(1ನೇ ಪುಟದಿಂದ)** ಸಲ್ಲಿಸಲಾಗುವ ಅರ್ಜಿಗಳನ್ನು ಉದ್ಯೋಗಾಧಿಕಾರಿಗಳು ಆನ್‌ಲೈನ್ ಮೂಲಕ ಪರಿಶೀಲಿಸಿ ಅನುಮೋದನೆ ನೀಡಲಿದ್ದಾರೆ. ನಂತರವೇ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗಲಿದೆ.

ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಶಕ್ತಿ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಬಗ್ಗೆ ಜಿಲ್ಲೆಯ ಅಧಿಕಾರಿಗಳಿಗೆ ಸಾಕಷ್ಟು ಸ್ಪಷ್ಟನೆ ಇತ್ತು. ಆದರೆ, ಯುವನಿಧಿ ಯೋಜನೆಯ ಫಲಾನುಭವಿಗಳ ಬಗ್ಗೆ ಸ್ಪಷ್ಟನೆ ಸಿಕ್ಕಿಲ್ಲ.

ಏಕೆಂದರೆ ಪದವಿ ಪೂರೈಸಿರುವವರಲ್ಲಿ ಹಲವರು ಬೇರೆ ಜಿಲ್ಲೆಯವರಾಗಿರಬಹುದು. ಈ ಜಿಲ್ಲೆಯವರು ಹೊರಗಿನ ಜಿಲ್ಲೆಗಳಲ್ಲಿ ಪದವಿ ಪಡೆದಿರಬಹುದು. ಪದವಿ ಇಲ್ಲವೇ ಡಿಪ್ಲೋಮಾ ಪಡೆದವರು ಉನ್ನತ ವ್ಯಾಸಂಗಕ್ಕೆ ಹೋಗಿರುವ ಸಾಧ್ಯತೆಯೂ ಇದೆ. ಈ ಎಲ್ಲ ಕಾರಣಗಳಿಂದ ಫಲಾನುಭವಿಗಳ ವಿಷಯದಲ್ಲಿ ಸ್ಪಷ್ಟತೆ ಇಲ್ಲ.

2023 ರಲ್ಲಿ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಿಂದ ಪಡೆದಿರುವ ಮಾಹಿತಿಯ ಪ್ರಕಾರ, 8,852 ವಿದ್ಯಾರ್ಥಿಗಳು ಪದವಿ ಹಾಗೂ ಡಿಪ್ಲೋಮಾ ಪಡೆದಿದ್ದಾರೆ. ಇವರಲ್ಲಿ 4,299 ಪುರುಷ ಹಾಗೂ 4,553 ಮಹಿಳೆಯರಿದ್ದಾರೆ.

5,934 ಜನರು ಪದವಿ, 2,15 ಜನರು ಬಿ.ಇ. ಹಾಗೂ 903 ಜನರು ಪದವಿ ಪಡೆದಿದ್ದಾರೆ. ಇವರಲ್ಲಿ ಎಷ್ಟು ಜನರು ಯುವನಿಧಿಗಾಗಿ ಅರ್ಜಿ ಸಲ್ಲಿಸಲಿದ್ದಾರೆ ಎಂಬುದು ಮುಂದಿನ ದಿನಗಳಲ್ಲಿ ಸ್ಪಷ್ಟವಾಗಲಿದೆ.

# ಮನುಷ್ಯನ ಮುಪ್ಪಿಗೆ ಡೈನೋಸಾರ್ ಕಾರಣ...!

## ಡೈನೋಸಾರ್‌ನಿಂದಾಗಿಯೇ ಮಾನವ ಕೇವಲ ಶತಾಯುಷಿ

ಬರ್ಮಿಂಗ್‌ಹ್ಯಾಮ್, ಡಿ. 26 - ಹುಟ್ಟು ಹಾಗೂ ಸಾವು ಒಂದೇ ನಾಣ್ಯದ ಎರಡು ಮುಖಗಳು. ಸಾವು ನಮ್ಮ ಜೈವಿಕತೆಯ ಸಹಜ ಭಾಗವೇ ಆಗಿದೆ. ಮನುಷ್ಯರ ಗರಿಷ್ಠ ಜೀವಿತಾವಧಿ ಕೇವಲ 120 ವರ್ಷಕ್ಕಿಂತ ತುಸು ಹೆಚ್ಚಿದೆ. ಎಲ್ಲ ಪ್ರಾಣಿಗಳಿಗೂ ವಯಸ್ಸಾಗುತ್ತದೆಯಾದರೂ, ವಯಸ್ಸಾಗುವ ವೇಗ ಒಂದೇ ಅಲ್ಲ. ಮನುಷ್ಯ ವರ್ಷಗಳು ಕಳೆದಂತೆ ವೃದ್ಧನಾಗುತ್ತಾನೆ. ಕೆಲ ಪ್ರಾಣಿಗಳು ಹಾಗಲ್ಲ, ಅವುಗಳಿಗೆ ವಯಸ್ಸಾಗುವುದೇ ಇಲ್ಲ!

ಮನುಷ್ಯರಿಗೆ 30 ದಾಟಿದ ನಂತರ ಮುಪ್ಪು ಆವರಿಸಲು ಆರಂಭಿಸುತ್ತದೆ. ಪ್ರತಿ ಎಂಟು ವರ್ಷಗಳಿಗೊಮ್ಮೆ ಸಾವಿನ ಸಾಧ್ಯತೆ ದುಪ್ಪಟ್ಟಾಗುತ್ತಾ ಹೋಗುತ್ತದೆ. ಒಂದೊಮ್ಮೆ ಶತಾಯುಷಿಗಳಾಗುವ ಭಾಗ್ಯ ಲಭಿಸಿದರೂ, ನಂತರ ಪ್ರತಿ ವರ್ಷ ಭೂಮಿಗೆ ವಿದಾಯ ಹೇಳುವ ಸಾಧ್ಯತೆ ಹೆಚ್ಚಾಗಿಯೇ ಇರುತ್ತದೆ.

ಮನುಷ್ಯ ಡೈನೋಸಾರ್‌ಗಳ ಕಾಲದಲ್ಲಿ ಹುಟ್ಟಿದ್ದೇ ವೃದ್ಧಾಪ್ಯದ ಸಮಸ್ಯೆಗೆ ಕಾರಣ ಎಂದು ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದ ಜಾವೋ ಪೆಡ್ರೊ ಡಿ ಮಗಲ್ಹೇಸ್ ಪ್ರತಿಪಾದಿಸುತ್ತಾರೆ.

ಇತರೆ ಸಸ್ತನಿಗಳಿಗೆ ಹೋಲಿಸಿದರೆ ಮನುಷ್ಯ ಹೆಚ್ಚು ಕಾಲ ಬದುಕುತ್ತಾನೆ. ಅದರಲ್ಲೂ ನೆಲದ ಮೇಲೆ ಬದುಕುವ ಸಸ್ತನಿಗಳಲ್ಲಿ ಮನುಷ್ಯರೇ ದೀರ್ಘಾಯುಷಿಗಳು. ತಿಮಿಂಗಿಲಗಳು ಮಾತ್ರ ಆಯುಷ್ಯದಲ್ಲಿ ಮನುಷ್ಯರನ್ನು ಹಿಂದೆ ಹಾಕಿರುವ ಲೆಕ್ಕಾಚಾರವಿದೆ. ಆದರೆ, ಸರಿಸೃಪಗಳು, ಉಭಯ ಚರಗಳು ಹಾಗೂ ಮೀನುಗಳಲ್ಲಿ ವೃದ್ಧಾಪ್ಯದ ಸಂಕೇತಗಳು ಕಂಡು ಬರುವುದಿಲ್ಲ. ಆಮೆ, ಸಾಲಮಂಡರ್ ಮೀನು ಹಾಗೂ ರಾಕ್‌ಫಿಶ್‌ಗಳಲ್ಲಿ ವೃದ್ಧಾಪ್ಯ ರಹಿತ ಜೀವನ ಕಾಣಬಹುದು.

ಹಲವಾರು ಸರಿಸೃಪ ಹಾಗೂ ಉಭಯಚರಗಳಲ್ಲಿ ವೃದ್ಧಾಪ್ಯ ಇಲ್ಲವೇ ವಯೋಸಂಬಂಧದ ಸಾವು ಕಂಡು ಬರುವುದಿಲ್ಲ ಎಂದು 2022ರಲ್ಲಿ ಸೈನ್ಸ್ ನಿಯತಕಾಲಿಕದಲ್ಲಿ ನಡೆಸಲಾದ ಅಧ್ಯಯನ ತಿಳಿಸಿತ್ತು.



**ವೃದ್ಧಾಪ್ಯ ರಹಿತ ಜೀವನ :** ವೃದ್ಧಾಪ್ಯ ರಹಿತ ಎನ್ನಲಾಗುವ ಈ ಜೀವಿಗಳನ್ನು ಸುದೀರ್ಘ ಕಾಲ ಅಧ್ಯಯನ ಮಾಡಿದಲ್ಲಿ, ಅವುಗಳಲ್ಲೂ ವೃದ್ಧಾಪ್ಯ ಕಂಡು ಬರಬಹುದೇ? ಅಂತಹ ಅದೃಷ್ಟ ಸಿಗುವುದು ಕಷ್ಟ. ಎಂದರೆ, ಗ್ರೀನ್‌ಲ್ಯಾಂಡ್ ಶಾರ್ಕ್ ರೀತಿಯ ಪ್ರಾಣಿಗಳು ಸುಮಾರು 400 ವರ್ಷ ಬದುಕುತ್ತವೆ. ಹೀಗಾಗಿ ಅವುಗಳ ವೃದ್ಧಾಪ್ಯಕ್ಕೆ ಕಾಯುವುದು ನರಮನುಷ್ಯರಿಂದ ಕಷ್ಟಸಾಧ್ಯ.

ಕೆಲ ವೃದ್ಧಾಪ್ಯ ರಹಿತ ಜೀವಿಗಳು, ತಮ್ಮ ಜೀವಿತಾವಧಿಯ ಉದ್ದಕ್ಕೂ ಬೆಳೆಯುತ್ತವೆ. ಹೀಗಾಗಿ ಈ ರೀತಿಯ ಹೆಣ್ಣು ಪ್ರಾಣಿಗಳು ವಯಸ್ಸಾದಂತೆ ಹೆಚ್ಚು ಮೊಟ್ಟೆ ಇಡುತ್ತವೆ. ಈ ವರ್ತನೆ ಸಸ್ತನಿಗಳಿಗೆ ತದ್ವಿರುದ್ಧವಾಗಿದೆ. ವೃದ್ಧಾಪ್ಯದಿಂದ ಬಹುತೇಕ ಮುಕ್ತವಾಗಿರುವ ಈ ಪ್ರಾಣಿಗಳು ತಮ್ಮ ಬೇಟೆಯಾಡುವ ಪ್ರಾಣಿಗಳಿಂದ ಇಲ್ಲವೇ ರೋಗಗಳಿಂದ ಸಾವನ್ನಪ್ಪುತ್ತವೆ.

**ಡೈನೋಸಾರ್ ಕಾಟ :** ಉಭಯಚರಗಳು 370 ದಶಲಕ್ಷ ವರ್ಷಗಳ ಹಿಂದೆ ರೂಪುಗೊಂಡಿದ್ದವು. 320 ದಶಲಕ್ಷ ವರ್ಷಗಳ ನಂತರ ಸರಿಸೃಪಗಳು ಹುಟ್ಟಿಕೊಂಡವು. ನಂತರ ಸರಿಸೃಪಗಳಿಂದ ಸಸ್ತನಿಗಳು ಹುಟ್ಟಿಕೊಂಡವು. ಈ ಜೀವ ವಿಕಾಸದ ಸುದೀರ್ಘ ಯಾನದಲ್ಲಿ ಸಸ್ತನಿ ಕುಟುಂಬಕ್ಕೆ ಸೇರಿದ ಮನುಷ್ಯ ಹುಟ್ಟಿಕೊಂಡಿದ್ದು ಇತ್ತೀಚೆಗೆ.

ಸುಮಾರು 200 ದಶಲಕ್ಷ ವರ್ಷಗಳ ಹಿಂದೆ ಜ್ವಾಲಾಮುಖಿಯ ಸ್ಫೋಟದಿಂದ ಶೇ.76ರಷ್ಟು ಜೀವಿಗಳು ನಾಶವಾದವು. ನಂತರ ಡೈನೋಸಾರ್‌ಗಳು ನೆಲದ ತುಂಬಾ ಆವರಿಸಿಕೊಂಡವು. ಈ ಡೈನೋಸಾರ್‌ಗಳ ಬೇಟೆಯಿಂದ ತಪ್ಪಿಸಿಕೊಳ್ಳಲು ಸಸ್ತನಿಗಳು ಚಿಕ್ಕವಾಗುತ್ತಾ ಸಾಗಿದವು. ಅಂತೆಯೇ ರಾತ್ರಿ ಬದುಕುವುದನ್ನು ಕಲಿತವು ಮತ್ತು ಜೀವಿತಾವಧಿಯೂ ಕಡಿಮೆಯಾಯಿತು.

**ಚಿಕ್ಕ ಜೀವನ, ಹೆಚ್ಚು ಮರಿ :** ಡೈನೋಸಾರ್‌ಗಳ ಹಾವಳಿಯಿಂದ ಸುದೀರ್ಘ ಕಾಲ ಬದುಕುವ ಅವಕಾಶವಿಲ್ಲದ ಈ ಜೀವಿಗಳು, ಬದುಕಿರುವ ಅಲ್ಪ ಕಾಲದಲ್ಲೇ ತ್ವರಿತವಾಗಿ ಮರಿಗಳಿಗೆ ಜನ್ಮ ನೀಡುವುದನ್ನು ಕಲಿತವು. ಇರುವ ಸಂಕ್ಷಿಪ್ತ ಜೀವನದಲ್ಲೇ ಹೆಚ್ಚು ಮರಿಗಳನ್ನು ಹುಟ್ಟು ಹಾಕಿ ತಮ್ಮ ಸಂತತಿ ಉಳಿಸಿಕೊಂಡವು. ಸಂಕ್ಷಿಪ್ತ ಜೀವನ, ಹೆಚ್ಚು ಮರಿಗಳ ಉತ್ಪತ್ತಿ ಮಾಡುವ ಪ್ರವೃತ್ತಿ ಅವುಗಳ ರಕ್ತಗತ ಗುಣವಾಯಿತು.

ದೇಹದ ವ್ಯವಸ್ಥೆಗೆ ಧಕ್ಕೆಯಾದಾಗ ಅದನ್ನು ಸರಿಪಡಿಸುವ ವ್ಯವಸ್ಥೆ ಸುದೀರ್ಘ ಕಾಲ ಬದುಕುವ ಪ್ರಾಣಿಗಳಲ್ಲಿ ಇರುತ್ತದೆ. ಸಸ್ತನಿಗಳು ಇಂತಹ ವ್ಯವಸ್ಥೆಯನ್ನೇ ಕಳೆದುಕೊಂಡವು.

**ಕಳೆದು ಹೋದ ದೀರ್ಘಾಯುಷ್ಯ :** ಸುಮಾರು 66 ದಶಲಕ್ಷ ವರ್ಷಗಳ ಹಿಂದೆ ಕ್ಷುದ್ರ ಗ್ರಹವೊಂದು ಭೂಮಿಗೆ ಬಡಿದು ಡೈನೋಸಾರ್‌ಗಳು ಸಾವನ್ನಪ್ಪಿದವು. ನಂತರ ಜೀವಿತಾವಧಿಯಲ್ಲಿ ವೈವಿಧ್ಯತೆ ಹೊಂದಿರುವ ಜೀವಿಗಳು ಹುಟ್ಟಿಕೊಂಡವು. ಆ ಕಾಲಘಟ್ಟದಲ್ಲಿ ಹುಟ್ಟಿಕೊಂಡ ಆದಿ ಮಾನವರು ಬೇರೆ ಸಸ್ತನಿಗಳಿಗಿಂತ ಹೆಚ್ಚು ಕಾಲ ಬದಕುವ ಸಾಮರ್ಥ್ಯ ಪಡೆದುಕೊಂಡರು. ಆದರೆ, ಡೈನೋಸಾರ್ ಕಾಲದಲ್ಲಿ ಉಂಟಾದ ಪರಿಣಾಮಗಳು ಸಂಪೂರ್ಣ ನಿವಾರಣೆಯಾಗಲಿಲ್ಲ. ನೂರಾರು ವರ್ಷಗಳ ಕಾಲ ಬದುಕಲು ಅಗತ್ಯವಾದ ಅಂಗರಚನೆ ಪಡೆದುಕೊಳ್ಳಲು ಆಗಲಿಲ್ಲ.

ಡೈನೋಸಾರ್‌ಗಳ ಪ್ರಭಾವಕ್ಕೆ ಸಿಲುಕದ ಸಸ್ತನಿಗಳ ಅಧ್ಯಯನ ಮಾಡಿದಾಗ, ಅವುಗಳ ಜೀವನಚಕ್ರ ಬೇರೆಯದೇ ಆಗಿರುವುದು ಕಂಡು ಬರುತ್ತದೆ. ನ್ಯೂಜಿಲ್ಯಾಂಡ್‌ನಲ್ಲಿ ಟುವಾಟರ ಎಂಬ ಹಲ್ಲಿ ಹೋಲುವ ಪ್ರಾಣಿ ಕಂಡು ಬರುತ್ತದೆ. ಆದರೆ, ಇದು 250 ದಶಲಕ್ಷ ವರ್ಷಗಳ ಹಿಂದೆ ಹಾವು ಹಾಗೂ ಹಲ್ಲಿಗಳಿಂದ ಭಿನ್ನವಾಗಿ ರೂಪುಗೊಂಡ ಪ್ರಾಣಿ. ನಿಧಾನದ ಗತಿಯ ಜೀವವಿಕಾಸ ಹೊಂದಿರುವ ಇದನ್ನು 'ಸಜೀವ ಪಳಿಯುಳಿಕೆ' ಎಂದೂ ಪರಿಗಣಿಸಲಾಗುತ್ತದೆ. ಟುವಾಟರಗಳು 100 ವರ್ಷಕ್ಕೂ ಹೆಚ್ಚು ಕಾಲ ಬದುಕುತ್ತವೆ. ಮನುಷ್ಯರಿಗಿಂತ ನಿಧಾನವಾಗಿ ವೃದ್ಧಾಪ್ಯ ಕಾಣುತ್ತವೆ. ಹೀಗಾಗಿ, ಮನುಷ್ಯರ ಜೀವಿತಾವಧಿಗೆ ಡೈನೋಸಾರ್‌ಗಳಿಂದ ಕತ್ತರಿ ಬಿತ್ತು ಎಂದು ಹೇಳಬಹುದು.

# ಜಗಳೂರು ತಾ.ನ್ನು ಚಿತ್ರದುರ್ಗ ಜಿಲ್ಲೆಗೆ ಪುನಃ ಮರು ಸೇರ್ಪಡೆಯ ಅವಶ್ಯಕತೆ ಇದೆಯಾ?

**(3ನೇ ಪುಟದಿಂದ)** ಚನ್ನಗಿರಿ ಮತ್ತು ಹೊನ್ನಾಳಿಯವರು ಈಗಲೂ ಭಾವನಾತ್ಮಕವಾಗಿ ಶಿವಮೊಗ್ಗಕ್ಕೆ ಹೊಂದಿಕೊಂಡಿದ್ದಾರೆ, ಈಗ ರಚನೆಯಾಗಿರುವ ನ್ಯಾಮತಿ (ದಾವಣಗೆರೆ 80 ಕಿ.ಮೀ ಶಿವಮೊಗ್ಗಕ್ಕೆ 20 ಕಿ.ಮೀ) ತಾಲ್ಲೂಕಿನವರು ಈಗಾಗಲೇ ಶಿವಮೊಗ್ಗ ಜಿಲ್ಲೆಗೆ ಸೇರಿಸಬೇಕೆಂದು ಅಪಸ್ವರ ಎತ್ತಿದ್ದಾರೆ. ಹಾಗಾದರೆ ದಾವಣಗೆರೆ ಜಿಲ್ಲೆಯಲ್ಲಿ ದಾವಣಗೆರೆ ಮತ್ತು ಹರಿಹರ ಮಾತ್ರ ಉಳಿಯುತ್ತವೆ. ಎರಡು ತಾಲ್ಲೂಕಿಗೆ ಒಂದು ಜಿಲ್ಲೆ ಮಾಡುತ್ತಾ ಹೋದರೆ, ಕರ್ನಾಟಕದಲ್ಲಿ ಸುಮಾರು ನೂರಾರು ಜಿಲ್ಲೆಗಳಾಗುತ್ತವೆ. ಈ ರೀತಿ ಜನರ ತಾಳಕ್ಕೆ ತಕ್ಕಂತೆ ಕುರುಡು ಕಾಂಚಾಣ ಕುಣಿಯುತಲಿದ್ದರೆ, ಆರ್ಥಿಕ ವ್ಯವಸ್ಥೆಯ ಗತಿ ಏನು? (ಚಿತ್ರದುರ್ಗಕ್ಕೆ ಹೋದರೆ ಕೆಲಸಕ್ಕಷ್ಟೇ ಸೀಮಿತ) ಚಿತ್ರದುರ್ಗ ಜಿಲ್ಲೆಯ ಬಹುತೇಕ ತಾಲ್ಲೂಕಿನ ಜನ ದಿನನಿತ್ಯ ಒಂದಲ್ಲಾ ಒಂದು ಕೆಲಸಕ್ಕೆ ದಾವಣಗೆರೆಗೆ ಬಂದು ಹೋಗುತ್ತಾರೆ.

ದಾವಣಗೆರೆ ಮಧ್ಯ ಕರ್ನಾಟಕದ ಕೇಂದ್ರ ಬಿಂದು. ಈಗಾಗಲೇ ಎರಡನೇ ರಾಜಧಾನಿಯ ಕೂಗು ರಾಜ್ಯದಲ್ಲಿ ಅಲ್ಲಲ್ಲಿ ಕೇಳಿ ಬರುತ್ತಿರುವಾಗ, ದಾವಣಗೆರೆ ಎರಡನೇ ರಾಜಧಾನಿಗೆ ತುಂಬಾ ಅರ್ಹತೆಗಳನ್ನು ಪಡೆದಿದೆ. ಆಕಸ್ಮಾತ್ ದಾವಣಗೆರೆ ಎರಡನೇ ರಾಜಧಾನಿಯಾದರೆ, ಸುಮಾರು 30-40 ಕಿ.ಮೀ ವ್ಯಾಪ್ತಿಯಲ್ಲಿ ದಾವಣಗೆರೆಯನ್ನು ಬೃಹತ್ ಮಹಾ ನಗರವಾಗಿ ವಿಸ್ತರಿಸಬಹುದು. ಆಗ ಜಗಳೂರು ತಾಲ್ಲೂಕು ಉಪನಗರವಾದರೂ ಆಶ್ಚರ್ಯಪಡಬೇಕಾಗಿಲ್ಲ.

ಇಲ್ಲಿಯ ಭೂಮಿಗೆ ಬಂಗಾರದ ಬೆಲೆ ಬರುತ್ತದೆ. ಬರದ ನಾಡಿನ ಜನ ಬಂಗಾರದ ಮನುಷ್ಯರಾಗುತ್ತಾರೆ. ಯಾವ ಕಾರಣದಿಂದಲೂ ಯಾವ ಕಾಲದಲ್ಲೂ ಚಿತ್ರದುರ್ಗ ಈ ಅರ್ಹತೆ ಪಡೆಯಲು ಸಾಧ್ಯವೇ ಇಲ್ಲ. ಹಾಗಾದರೆ ಈ ಹಿಂದುಳಿದ ಪ್ರದೇಶದಲ್ಲಿ ಸೇರುವುದು ಎಷ್ಟು ಸರಿ? ಎಂಬುದನ್ನು ಹತ್ತಾರು ಸಾರಿ ಯೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕು. ಒಂದು ಜಿಲ್ಲಾ ಕೇಂದ್ರದ ಭೌಗೋಳಿಕ ವ್ಯಾಪ್ತಿ ಕನಿಷ್ಠ ಎಷ್ಟಿರಬೇಕೆಂಬುದನ್ನು ಮರು ಸೇರ್ಪಡೆಯ ಅಣ್ಣಂದಿರು ಅರ್ಥ ಮಾಡಿಕೊಳ್ಳಬೇಕು.

ದಾವಣಗೆರೆ ನಗರ ಶಿಕ್ಷಣ ಕ್ಷೇತ್ರದ ಜ್ಞಾನಗಂಗೆ, ಇಲ್ಲಿ ದಾವಣಗೆರೆ ವಿಶ್ವ ವಿದ್ಯಾನಿಲಯ ಎರಡು- ಮೂರು ಮೆಡಿಕಲ್ ಕಾಲೇಜುಗಳು, ನಾಲ್ಕು ಇಂಜಿನಿಯರಿಂಗ್ ಹಾಗೂ ಹತ್ತಿಪ್ಪತ್ತು ಪದವಿ ಕಾಲೇಜುಗಳು ಸುಮಾರು 30 ಕ್ಕೂ ಹೆಚ್ಚು ಗುಣಾತ್ಮಕ ಪದವಿ ಪೂರ್ವ ಕಾಲೇಜುಗಳು ಎರಡು, ಮೂರು ಡೆಂಟಲ್ ಕಾಲೇಜುಗಳು ಹಾಗೂ ದೃಶ್ಯ ಕಲಾ ಮಾಧ್ಯಮ ಕಾಲೇಜು, ವಿವಿಧ ಸಮುದಾಯ ಗಳಿಗೆ ಸೇರಿದ ವಿದ್ಯಾರ್ಥಿ ನಿಲಯಗಳುಂಟು, ಸುಸಜ್ಜಿತವಾದ ವಿವಿಧ ರೀತಿಯ ಆಸ್ಪತ್ರೆಗಳುಂಟು. ಒಂದೆರಡು ಕಲ್ಯಾಣ ಮಂಟಪಗಳು ಬಡ ಜನರ ಪಾಲಿಗೆ ವರದಾನವಾಗಿವೆ.

ಒಂದು ಖಾಸಗಿ ಸರ್ವೆಯ ಮೂಲಕ ಸಮೀಕ್ಷೆ ಮಾಡಿದರೆ ಜಗಳೂರು ತಾಲ್ಲೂಕಿನವರು ದಾವಣಗೆರೆಯಲ್ಲಿ ಅನ್ನ, ಆಶ್ರಯ, ದುಡಿಮೆಗಾಗಿ ನೆಲೆಸಿದ್ದಾರೆ. ಇಲ್ಲಿ ದುಡಿದು ತಿನ್ನುವವರಿಗೆ ಕೈತುಂಬಾ ಕೆಲಸ ಸಿಗುತ್ತದೆ. ಇದನ್ನು ಚಿತ್ರದುರ್ಗ ದಲ್ಲಿ ಪಡೆಯಲಿಕ್ಕೆ ಎಂದಿಗೂ ಸಾಧ್ಯವಿಲ್ಲ. ಜಗಳೂರು ತಾಲ್ಲೂಕಿನವರು ದಾವಣಗೆರೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುತ್ತಿರುವುದು ಹಾಗೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ, ಸಿ.ಇ.ಟಿ ಕೌನ್ಸಿಲಿಂಗ್ ಮೂಲಕ ದಾವಣಗೆರೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆಯೇ ವಿನಃ ಚಿತ್ರದುರ್ಗವನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲವೆಂಬುದನ್ನು ಮರು ಸೇರ್ಪಡೆಯ ಅಣ್ಣಂದಿರು ನೆನಪು ಮಾಡಿಕೊಳ್ಳಬೇಕು. ಮತ್ತೇನಾದರೂ ಜಗಳೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆಗೆ ಸೇರ್ಪಡೆಯಾದರೆ ಉಪವಿಭಾಗ, ಡಿ.ವೈ.ಎಸ್.ಪಿ. ಕಛೇರಿ ಮುಂತಾದ ಕಛೇರಿಗಳಿಗೆ ಚಳ್ಳಕೆರೆಗೆ ನಮ್ಮ ತಾಲ್ಲೂಕನ್ನು ಸೇರ್ಪಡೆ ಮಾಡಿದರೂ ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ ಈ ಹಿಂದೆ ಹರಪನಹಳ್ಳಿಗೆ ಉಪವಿಭಾಗ ಡಿ.ವೈ.ಎಸ್.ಪಿ. ಕಛೇರಿ ಸೇರಿದಾಗ, ಮರು ಸೇರ್ಪಡೆಯ ಅಣ್ಣಂದಿರು ಯಾರು ತುಟಿ, ಬಾಯಿ ಎರಡನ್ನೂ ಬಿಟ್ಟಿರಲಿಲ್ಲ.

ದಾವಣಗೆರೆ ಜಿಲ್ಲೆಯಲ್ಲಿ ಜಗಳೂರು ತಾಲ್ಲೂಕು ಮುಂದುವರಿದರೆ ಉಪವಿಭಾಗ, ಡಿ.ವೈ.ಎಸ್.ಪಿ. ಇನ್ನೂ ಮುಂತಾದ ಕಛೇರಿಗಳು ದಾವಣಗೆರೆಯಲ್ಲಿಯೇ ಇರುವುದರಿಂದ ಶ್ರಮ, ಕಾಲ, ಹಣದ ಉಳಿತಾಯವಾಗುತ್ತದೆ. ಒಂದೇ ಬಸ್ ಚಾರ್ಜ್‌ನಲ್ಲಿ ಹತ್ತಾರು ಕೆಲಸಗಳನ್ನು ಮಾಡಿಕೊಂಡು ಬರಬಹುದು ಮರು ಸೇರ್ಪಡೆಯ ಅಣ್ಣಂದಿರು ತಮ್ಮ ತವಕಗಳಿಗೆ ಇಡೀ ತಾಲ್ಲೂಕನ್ನು ಖೆಡ್ಡಾಕ್ಕೆ ದಬ್ಬಿದಂತಾಗುತ್ತದೆ. ತಾಲ್ಲೂಕಿನಲ್ಲಿ ಬೆಟ್ಟದಷ್ಟು, ಸಾಗರದಷ್ಟು ಕೆಲಸ ಕಾರ್ಯಗಳಿವೆ, ಇವುಗಳನ್ನು ಜನ ನಾಯಕರ ಗಮನಕ್ಕೆ ತಂದು, ಜನ ನಾಯಕರು ಅಧಿಕಾರಿಗಳಿಗೆ ಮಾರ್ಗದರ್ಶಕರಾಗಿ, ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ, ಎಲ್ಲರ ಕೈಗಳು ಒಂದಾದರೆ ಅಭಿವೃದ್ಧಿ ಮರೀಚಿಕೆಯಾಗಿ ಉಳಿಯುವುದಿಲ್ಲ. 2018 ರಲ್ಲಿ ಜಗಳೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆ ಸಂದರ್ಭದಲ್ಲಿ ತರಳಬಾಳು ಶ್ರೀಗಳ ಆಶಯದಂತೆ (ಕರ್ನಾಟಕ ಸರ್ಕಾರದ ಮಾನ್ಯ ಸಿದ್ಧರಾಮಯ್ಯ, ಮಾನ್ಯ ಕುಮಾರಸ್ವಾಮಿ, ಮಾನ್ಯ ಯಡಿಯೂರಪ್ಪ ಹಾಗೂ ಜನನಾಯಕರು) ಜಗಳೂರು ವಿಧಾನಸಭಾ ಕ್ಷೇತ್ರದ 57 ಕೆರೆಗಳಿಗೆ ತುಂಗ ಭದ್ರಾ ನದಿಯಿಂದ ದೀಟೂರು ಜಾಕ್‌ವೆಲ್ ಮೂಲಕ ಅಣಜಿ ಸಮೀಪದ ಚಟ್ನಳ್ಳಿ ಗುಡ್ಡದಲ್ಲಿ ಭೂಮಿಯ ಗುರುತ್ವಾಕರ್ಷಣೆ ಮೂಲಕ ಕೆರೆ ತುಂಬಿಸುವ ಯೋಜನೆಗೆ ಈಗಾಗಲೇ ಚಾಲನೆಯನ್ನ ಕೊಡಲಾಗಿದೆ. ಜನನಾಯಕರು ಅದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳಬೇಕು. ಈ ಯೋಜನೆಯಿಂದ ತಾಲ್ಲೂಕು ಸಂಪೂರ್ಣವಾಗಿ ಅಂತರ್ಜಲದಿಂದ ಇಮ್ಮಡಿಗೊಳ್ಳುತ್ತದೆ.

- ಜಗಳೂರು ತಾಲ್ಲೂಕು ಮೂರು ಯೋಜನೆಗಳಿಂದ ಬರದ ನಾಡಿನ ಹಣೆ ಪಟ್ಟಿಯಿಂದ ಬಿಡಿಸಿಕೊಳ್ಳಬಹುದು.
- ಭದ್ರಾ ಮೇಲ್ದಂಡ ಯೋಜನೆ
- ಬಹು ಗ್ರಾಮ ಕುಡಿಯುವ ನೀರಿನ ಜಲ ಸಿರಿಯೋಜನೆ
- 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ

ಜಗಳೂರು ತಾಲ್ಲೂಕಿನ ಜನರ ದಣಿವನ್ನು ನೀಗಿಸಬಹುದು.

ಜಗಳೂರು ತಾಲ್ಲೂಕಿನಲ್ಲಿಯೇ ಅನೇಕ ಅಸಮತೋಲನಗಳಿವೆ. ಅಂದರೆ ತಾಲ್ಲೂಕಿನಲ್ಲಿ ಬಸವನಕೋಟೆ ಒಂದು ಮಾದರಿ ಗ್ರಾಮ. ಇವರಿಗೆ ಚಿತ್ರದುರ್ಗ ಸುಮಾರು 80 ಕಿ.ಮೀ ದಾವಣಗೆರೆ ಸುಮಾರು 40 ಕಿ.ಮೀ. ಈ ಊರಿನ ಜನರ ಬವಣೆಯನ್ನು ಒಂದು ಪಕ್ಷಿ ನೋಟದ ಮೂಲಕ ಚಿತ್ರಿಸಿದರೆ, ನಾಡ ಕಛೇರಿ ಸೊಕ್ಕೆಗೆ 10 ಕಿ,ಮೀ ಹೋಗಬೇಕು. ಪೊಲೀಸ್ ಠಾಣೆಗೆ ಸುಮಾರು 25ಕಿ.ಮೀ ಬಿಳಿಚೋಡಿಗೆ ಬರಬೇಕು. ಕೃಷಿ ಇಲಾಖೆ ಕೆಲಸಗಳಿಗೆ ಸುಮಾರು 20 ಕಿ.ಮೀ ಹೊಸಕೆರೆಗೆ ಬರಬೇಕು. ಇಂತಹ ಭೌಗೋಳಿಕ ಅಸಮತೋಲನಗಳಿಂದ ಜನರ ಬದುಕು ಕಷ್ಟವಾಗುತ್ತದೆ. (ಬಸವನಕೋಟೆ, ಹರಪನಹಳ್ಳಿ ತಾಲ್ಲೂಕಿನ ಅರಸೀಕರೆ ಹೋಬಳಿ ಕೇಂದ್ರ ಕೇವಲ 5ಕಿ.ಮೀ ಇಲ್ಲಿ ಈ ಮೇಲ್ಕಂಡ ಎಲ್ಲಾ ಸೌಲಭ್ಯಗಳು ಸಿಗುತ್ತವೆ ಎಂದು ಇವರು ಹರಪನಹಳ್ಳಿ ತಾಲ್ಲೂಕಿಗೆ ಸೇರಲು ಮನಸ್ಸು ಮಾಡಿದರೆ ಸೇರಬಹುದೇ ?

ಮರು ಸೇರ್ಪಡೆಯ ಅಣ್ಣಂದಿರು, ದಾವಣಗೆರೆ ಜಿಲ್ಲೆಯಲ್ಲಿ 5 ತಾಲ್ಲೂಕುಗಳು ನೀರಾವರಿ ಹೊಂ ದಿವೆ. ಜಗಳೂರು ತಾಲ್ಲೂಕು ನೀರಾವರಿ ಹೊಂದಿಲ್ಲ, ಬರದ ನಾಡು ಎಂದು ಹೇಳುತ್ತಾರೆ. ಉದಾ: ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ನಾಗಮಂಗಲ ತಾಲ್ಲೂಕು ಮಾತ್ರ ನೀರಾವರಿಯನ್ನು ಹೊಂದಿಲ್ಲ ಎಂಬುದನ್ನು ಅಣ್ಣಂದಿರ ಗಮನಕ್ಕೆ ತರುತ್ತಿದ್ದೇವೆ. ದಾವಣಗೆರೆ ಜಿಲ್ಲೆ ಉದಯವಾದ ಮೇಲೆ ಅಗ್ನಿಶಾಮಕ ಠಾಣೆ, ಎ.ಪಿ.ಎಮ್.ಸಿ ಮಾರ್ಕೆಟ್, ಜಗಳೂರಿನಲ್ಲಿ ಪದವಿ, ಐಟಿಐ ಕಾಲೇಜ್ ಹಾಗೂ ಜಗಳೂರು ಹೊಸಕೆರೆ, ಬಿಳಿಚೋಡು, ಪಲ್ಲಾಗಟ್ಟೆಯಲ್ಲಿ ಪದವಿ ಪೂರ್ವ ಕಾಲೇಜುಗಳು ಹಾಗೂ ತಾಲ್ಲೂಕಿನ ವಿವಿಧೆಡೆ ಮುರಾರ್ಜಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಮುಂತಾದ ವಸತಿ ಶಾಲೆಗಳು ನಿರ್ಮಾಣಗೊಂಡಿವೆ. ವಿವಿದೆಡೆ ವಿದ್ಯುತ್ ಸ್ಟೇಷನ್‌ಗಳು (ಬಿಳಿಚೋಡು, ಪಲ್ಲಾಗಟ್ಟೆ, ಹಿರೆಮಲ್ಲನಹೊಳೆ ಮುಂತಾದ) ನಿರ್ಮಾಣಗೊಂಡಿವೆ. 57 ಕೆರೆಗಳಿಗೆ ತುಂಗಭದ್ರಾ ನದಿಯಿಂದ ಜಗಳೂರು ತಾಲ್ಲೂಕಿಗೆ ನೀರು ತುಂಬಿಸುವ ಯೋಜನೆ ಆಯಾ ಜಿಲ್ಲೆಗೆ ಮಾತ್ರ ಸೀಮಿತ ಎಂದರೆ ಏನು ಮಾಡಬೇಕು?

ದಾವಣಗೆರೆ ಜಿಲ್ಲೆಯಲ್ಲಿ ಜಗಳೂರು ತಾಲ್ಲೂಕು ಏಕೈಕ ಹಿಂದುಳಿದ ತಾಲ್ಲೂಕು ಎಂದು, ಅದರ ಮೂಲಕ ನಮಗೆ ಹೆಚ್ಚಿನ ಅನುದಾನವನ್ನು ಕೇಳಲು ನೈತಿಕ ಬಲ ಬರುತ್ತದೆ. ಈಗ ಮತ್ತೆ ನಾವು ಚಿತ್ರದುರ್ಗ ಜಿಲ್ಲೆಗೆ ಸೇರಿಸಿ ಎಂದು ಹೋರಾಟ ಮಾಡಿದರೆ ಬೆಟ್ಟ ಅಗೆದು ಇಲಿ ಹಿಡಿದಂತಾಗುತ್ತದೆ. ಸಾಮಾನ್ಯ ಜನರಿಗೆ ದಿಕ್ಕು ತಪ್ಪಿಸುವ ಕೆಲಸವನ್ನು ಮರು ಸೇರ್ಪಡೆಯ ಅಣ್ಣಂದಿರು ಮಾಡುತ್ತಿದ್ದಾರೆಯೇ ವಿನಃ ದಿಕ್ಕು ತೋರಿಸುವ ಕೆಲಸ ಮಾಡುತ್ತಿಲ್ಲ, ಜಗಳೂರು ತಾಲ್ಲೂಕು ಹಿಂದುಳಿದಿರುವ ಬಗ್ಗೆ ಅರಿವು ಮೂಡಿಸಿ, ಅನುದಾನ ಮುಂತಾದ ಸೌಲಭ್ಯಗಳ ಅಭಿವೃದ್ಧಿಗೆ ಒಗ್ಗಟ್ಟಿನ ಮಂತ್ರದೊಂದಿಗೆ ತಾಲ್ಲೂಕಿನ ಶ್ರೇಯೋಭಿವೃದ್ಧಿಗೆ ಪಣ ತೊಡುವ ಪ್ರಯತ್ನವನ್ನು ಪಕ್ಷಾತೀತವಾಗಿ, ಜಾತ್ಯತೀತವಾಗಿ ಜನನಾಯಕರ ಗಮನಕ್ಕೆ ತರುವ ಕೆಲಸ ಮಾಡಬೇಕು. ಈ ಮೇಲಿನ ಎಲ್ಲಾ ಅಂಶಗಳನ್ನು ಮನವರಿಕೆ ಮಾಡಿಕೊಂಡರೆ ಜಗಳೂರು ತಾಲ್ಲೂಕನ್ನು ಚಿತ್ರದುರ್ಗ ಜಿಲ್ಲೆಗೆ ಮರು ಸೇರ್ಪಡೆಯ ಅವಶ್ಯಕತೆ ಇದೆಯೇ? ಎಂಬುದು ನಮ್ಮ ಪ್ರಶ್ನೆ.

# ಉಚ್ಚಾಟಿಸಿದರೆ ಅವ್ಯವಹಾರ ಬಯಲು

**(1ನೇ ಪುಟದಿಂದ)** ದೇಶದ 'ಚೌಕಿದಾರ' ಎಂದು ಬಣ್ಣಿಸಿಕೊಳ್ಳುತ್ತಿರುವ ಮತ್ತು 'ನಾ ಖಾವೂಂಗಾ ನಾ ಖಾನೆ ದೂಂಗಾ' ಎಂದು ಆಗಾಗ ಗುಟುರು ಹಾಕುವ ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮದೇ ಪಕ್ಷದ ನಾಯಕ ಮಾಡುತ್ತಿರುವ ಭ್ರಷ್ಟಾಚಾರದ ಆರೋಪಗಳ ಬಗ್ಗೆ ಮೌನವಾಗಿರುವುದು ನಿಗೂಢವಾಗಿದೆ.

ಇದು ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಲ್ಲಿ ಕೇಂದ್ರದ ನಾಯಕರಿಗೂ ಪಾಲು ಹೋಗಿದೆ ಎನ್ನುವ ಆರೋಪಕ್ಕೆ ಎಡೆ ಮಾಡಿಕೊಡುವುದಿಲ್ಲವೇ? ಎಂದೂ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಶಾಸಕ ಯತ್ನಾಳ್ ಅವರು ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕೆಂಬ ಬದ್ಧತೆ ಹೊಂದಿದ್ದರೆ, ತಮ್ಮ ಆರೋಪವನ್ನು ತಾರ್ಕಿಕ ಅಂತ್ಯದೆಡೆಗೆ ಒಯ್ಯಬೇಕು. ಕೊರೊನಾ ಭ್ರಷ್ಟಾಚಾರದ ಬಗ್ಗೆ ತಮ್ಮ ಬಳಿ ಇರುವ ಎಲ್ಲ ಮಾಹಿತಿಯನ್ನು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ರಚಿಸಲಾಗಿರುವ ತನಿಖಾ ಆಯೋಗಕ್ಕೆ ಒಪ್ಪಿಸಬೇಕು ಎಂದೂ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

# ಅಕ್ರಮ ಆಸ್ತಿ ಸಂಪರ್ಕ : ಇ.ಡಿ. ಆರೋಪ

**(1ನೇ ಪುಟದಿಂದ)** ಎಂದು ಜಾರಿ ನಿರ್ದೇಶನಾಲಯ ಹೇಳಿದೆ. ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಪತಿ ವಾದ್ರಾರನ್ನು ಜಾರಿ ನಿರ್ದೇಶನಾಲಯ ಈ ಹಿಂದೆ ಪ್ರಶ್ನಿಸಿತ್ತು. ಯಾವುದೇ ತಪ್ಪು ಮಾಡಿಲ್ಲ ಎಂದು ವಾದ್ರಾ ಹೇಳಿದ್ದರು.


**ಟಾಟಾ ಏಸ್ ಬಾಡಿಗೆಗಿದೆ**
ಟಾಟಾ ಏಸ್ ವಾಹನ ಡ್ರೈವರ್ (ಬಿಟ್ಟು) ರಹಿತವಾಗಿ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಬಾಡಿಗೆಗೆ ದೊರೆಯುತ್ತದೆ.
ಮೊ. 97385-23711

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು, ಹುಡುಗರು, ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ (ತುಂಗಭದ್ರಾ ಬಡಾವಣೆ) 40x60 ಪಶ್ಚಿಮ (64 ಲಕ್ಷ) 40x60 ದಕ್ಷಿಣ (63.5 ಲಕ್ಷ) 40 ಫೀಟ್ ರೋಡ್‌ಗೆ
ಕಿರಣ್ ಭೂಸ್ನೂರ್ (ಏಜೆಂಟ್)
98440 63409, 97315-63409
ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ. (ಟಾಪ್ ಲೊಕೇಶನ್)

**ಸೈಟು ಮಾರಾಟಕ್ಕಿವೆ**
ಹೊಸ ಬಸ್ ಸ್ಟ್ಯಾಂಡ್ ಹಿಂಭಾಗ ಗಣೇಶ ಲೇಔಟ್‌ನಲ್ಲಿ 30x48 North ನೇರ ಪಾರ್ಟಿಯಿಂದ ವ್ಯಾಪಾರ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ ಇದೆ**
ಸುಸಜ್ಜಿತವಾದ 2 BHK ಮನೆ. ವಿದ್ಯಾನಗರ, ನೂತನ ಕಾಲೇಜು ರಸ್ತೆ, ಕಾಮದೇನು ಹೋಟೆಲ್ ಹತ್ತಿರ.
ಮೊ : 97400 01129

**ಮನೆ ಬಾಡಿಗೆಗೆ (ಲೀಸ್) ಇದೆ**
ಸುಸಜ್ಜಿತವಾದ 2 BHK (ಮೊದಲನೇ ಮಹಡಿ) ಮನೆ ಶಂಕರ್ ವಿಹಾರ್ ಬಡಾವಣೆ, ಬ್ಲಡ್ ಬ್ಯಾಂಕ್ ಹಿಂಭಾಗ. (ಸಸ್ಯಹಾರಿಗಳಿಗೆ ಮಾತ್ರ)
73386 04640

**ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. Wanted Labours For Office Work. Contact :
76768 44100, 91649 23589

**ಕೇಬಲ್ ಹುಡುಗರು ಬೇಕಾಗಿದ್ದಾರೆ**
ಕೇಬಲ್ ಕೆಲಸ ಬರಬೇಕು. ಅಂತಹವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ. :
99022 09820

**ಬೇಕಾಗಿದ್ದಾರೆ**
ಅಡುಗೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಮತ್ತು ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಕುವೆಂಪು ನಗರ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ.
99164-54770

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**WANTED**
Order Booking - PUC Contact along with Bio Data.
AK TRADERS
BAPUJI HOSPITAL ROAD PJ EXTENSION

**ಉದ್ಯೋಗಾವಕಾಶ**
ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ದುರ್ಗಾಸ್ಥಳ ಚಿಟ್‌ಫಂಡ್ ಕಂಪನಿ ವತಿಯಿಂದ ಚನ್ನಗಿರಿ ಮತ್ತು ದಾವಣಗೆರೆ ಶಾಖೆಯಲ್ಲಿ ಕೆಲಸ ಮಾಡಲು ಎಕ್ಸಿಕ್ಯೂಟಿವ್ ಮತ್ತು ಕಲೆಕ್ಷನ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಇನ್ಸೆಂಟಿವ್, ಅನುಭವವಿರುವವರಿಗೆ ಆದ್ಯತೆ.
96863 00769, 96864 12409

**ಡ್ರೈವರ್ಸ್ ಬೇಕಾಗಿದ್ದಾರೆ**
ಸ್ಮಾರ್ಟ್ ಸಿಟಿ ಕ್ಯಾಬ್ಸ್ ದಾವಣಗೆರೆ ಕ್ಯಾಬ್ ಡ್ರೈವರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
81233 02057


**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, B.COM ಆದ ಮಹಿಳೆಯರು ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ ದಾವಣಗೆರೆ.

**FACULTY REQUIRED**
For Java and Python subjects
Experience: 0-1 year
Work location: Davanagere
(Send your resume to the provided number)
97380 14849

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು [illegible], ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**'ಮಚ್ಚೆ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಪಾರ್ಟ್‌ನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮತ್ತು ಟೆಲಿಕಾಲರ್ ಹುದ್ದೆಗೆ ಮಿನಿಮಮ್ 2 ವರ್ಷ ಅನುಭವ ಇರುವ ಯುವಕ/ಯುವತಿಯರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ :
97392 94066

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
ಸುಸಜ್ಜಿತವಾದ 2 ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ.
ಬಾಡಿಗೆ : 7000, ಅಡ್ವಾನ್ಸ್ : 20,000
ವಿಳಾಸ : KBR Complex, RMC Link Road, Near BT Park, (Behind LIC office) TC Layout out Davanagere.
63621 47549, 99725 35329

**ತಕ್ಷಣ ಬೇಕಾಗಿದ್ದಾರೆ**
ಸೌತ್ ಇಂಡಿಯನ್ ಅಡುಗೆ ಭಟ್ಟರು (ಕುಕ್) ಸಪ್ಲೈಯರ್ ಅನುಭವ ಇರುವವರಿಗೆ ಆಕರ್ಷಕ ವೇತನ ಕೊಡಲಾಗುವುದು. ಹೋಟೆಲ್ ಪೂಜಾ ಇಂಟರ್ ನ್ಯಾಷನಲ್, ಪಿ.ಬಿ.ರಸ್ತೆ, ದಾವಣಗೆರೆ.
88846 30532, 96060 96697
81055 47878

**OT STAFF ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಅಪರೇಷನ್ ಥಿಯೇಟರ್‌ನಲ್ಲಿ ಅನುಭವವುಳ್ಳ O.T Staff ಬೇಕಾಗಿದ್ದಾರೆ. ಸಂಪರ್ಕಿಸಿ.
70194 01728

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**COSDARM HAIR & SKIN CARE INSTITUTE**
ಉಚಿತ ಉಚಿತ ಉಚಿತ
ಸೌಂದರ್ಯ ಮತ್ತು ಕೂದಲು ರಕ್ಷಣೆ ತರಗತಿಗಳು ಪ್ರವೇಶ ತೆರೆಯಲಾಗಿದೆ
ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
76192 57443
81975 72499 C/A

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು SSLC/PUC ಪಾಸಾದ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
91106 21233

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**2BHK HOUSE FOR RENT**
2 BHK house for rent, 14th Cross, Anjaneya Badavane Nearby, Sanjeevani nursing college/opposite to nutan college, East facing, Bore and Tap water available. Contact :
94490 23364, 90192 22404

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸನ್ಸ್ ಹಾಗೂ ದ್ವಿಚಕ್ರ ವಾಹನ ಹೊಂದಿರುವ ಕಾರ್ ಡ್ರೈವರ್ ತಕ್ಷಣ ಬೇಕಾಗದ್ದಾರೆ. ಸಂಪರ್ಕಿಸಿ :
94486 56091
(ಮೇಲ್ಕಂಡ ನಂಬರ್‌ಗೆ ಈ ಹಿಂದೆ ಕರೆ ಮಾಡಿದವರು ಪುನಃ ಕರೆ ಮಾಡಬೇಡಿ)

## ಬೈಕ್ ಸ್ಕಿಡ್‌ನಿಂದ ಬಿದ್ದು ನರಳಾಡುತ್ತಿದ್ದ ತಂದೆ - ಮಗುವನ್ನು ರಕ್ಷಿಸಿದ ಡಾ. ರವಿ



ದಾವಣಗೆರೆ, ಡಿ. 26- ಸಮೀಪದ ಆನಗೋಡು-ಅಣಜಿ ಮಾರ್ಗವಾಗಿ ಜಗಳೂರಿಗೆ ಹೊರಟಿದ್ದ ಆರೈಕೆ ಆಸ್ಪತ್ರೆಯ ಹಿರಿಯ ವೈದ್ಯ ಡಾ. ಟಿ.ಜಿ. ರವಿಕುಮಾರ್ ಅವರು ಪವಾಡ ರಂಗವ್ವನಹಳ್ಳಿಯ ಬಳಿ ಬೈಕ್ ಸ್ಕಿಡ್ ಆಗಿ ಬಿದ್ದು ನರಳಾಡುತ್ತಿದ್ದ ತಂದೆ, ಮಗುವನ್ನು ರಕ್ಷಿಸಿದರು.

ಕ್ರಿಸ್ ಮಸ್ ಕಾರಣ ಆನಗೋಡು ಪಿಹೆಚ್‌ಸಿ ರಜೆ ಇದ್ದಿದ್ದರಿಂದ ಸಮೀಪದ ಖಾಸಗಿ ಕ್ಲಿನಿಕ್ ಗೆ ಕರೆದೊಯ್ದು, ತಾವೇ ಖುದ್ದಾಗಿ ಗಾಯಾಳುವಿಗೆ ಚಿಕಿತ್ಸೆ ನೀಡಿ ಮಾನವೀಯತೆ ಮೆರೆದಿದ್ದಾರೆ.

ಪ್ರಥಮ ಚಿಕಿತ್ಸೆ ನೀಡಿದ ನಂತರ ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಡಾ. ರವಿಕುಮಾರ್ ತಿಳಿಸಿದ್ದಾರೆ.

## ಹಳೇಬಾತಿ ಇಂದು ಸಂದಲ್, ನಾಳೆ ಉರುಸ್



ದಾವಣಗೆರೆ ತಾಲ್ಲೂಕು ಹಳೇಬಾತಿಯಲ್ಲಿರುವ ಹಜರತ್ ಸೈಯದ್ ಚಮನ್ ಷಾ ವಲಿ ಬಾಬಾ ರವರ ಸಂದಲ್ ಇಂದು ಸಾಯಂಕಾಲ ಜರುಗಲಿದೆ. ಗಂಧ ಲೇಪೆಸಿ ಗಲೀಫ್ ಅರ್ಪಿಸಲಾಗುವುದು. ಫಾತೇಹಾ ಖಾನಿ (ಓದಿಕೆ)ಜರುಗಲಿದೆ. ನಾಳೆ ಗುರುವಾರ ಉರುಸ್ ಆಚರಿಸಲಾಗುವುದು.

## ಮುಕ್ತೇನಹಳ್ಳಿ ಗ್ರಾಮದಲ್ಲಿ 1500 ಅಡಿಕೆ ಗಿಡಗಳನ್ನು ಕತ್ತರಿಸಿರುವ ದುಷ್ಕರ್ಮಿಗಳು

ಹೊನ್ನಾಳಿ, ಡಿ.26- ಮುಕ್ತೇನಹಳ್ಳಿ ಗ್ರಾಮದ ಭಾನುವಳ್ಳಿ ಪರಮೇಶ್ವರಪ್ಪ ಅವರ ಸರ್ವೇ ನಂಬರ್ 76/1ಪಿ2 ರ 2 ಎಕರೆ ವಿಸ್ತೀರ್ಣದಲ್ಲಿ ಬೆಳೆದಿದ್ದ ಸುಮಾರು 2 ವರ್ಷ ಪ್ರಾಯದ 1500 ಅಡಿಕೆ ಗಿಡಗಳನ್ನು ಯಾರೋ ದುಷ್ಕರ್ಮಿಗಳು ಭಾನುವಾರ ರಾತ್ರಿ ಕಡಿದು ಹಾಕಿರುವ ಪ್ರಕರಣ ಜರುಗಿದೆ.

ಘಟನೆಯ ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕ ಡಿ. ಜಿ.ಶಾಂತನಗೌಡ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಘಟನೆಗೆ ಕಾರಣರಾದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ನೊಂದ ರೈತ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕೆಂದು ಪೊಲೀಸ್ ಇನ್ಸ್‌ಪೆಕ್ಟರ್ ಸುನಿಲ್ ಕುಮಾರ್ ಅವರಿಗೆ ಸೂಚಿಸಿದರು.

2 ವರ್ಷದ ಅಡಿಕೆ ಗಿಡಗಳನ್ನು ತುಂಬಾ ಚೆನ್ನಾಗಿ ಪೋಷಣೆ ಮಾಡಲಾಗಿತ್ತು. ಇನ್ನು 2 ವರ್ಷದ ನಂತರ ಅಡಿಕೆ ಫಸಲು ಕೊಡುತ್ತಿತ್ತು. ಇದರಿಂದ ಲಕ್ಷಾಂತರ ರೂ.ನಷ್ಟು ಹಾನಿಯಾಗಿದೆ ಎಂದು ಪರಮೇಶ್ವರಪ್ಪ ಅವರು ಪತ್ರಕರ್ತರ ಮುಂದೆ ತಮ್ಮ ಅಳಲು ತೋಡಿಕೊಂಡರು.

ಪೊಲೀಸ್ ಇನ್ಸ್‌ಪೆಕ್ಟರ್ ಸುನಿಲ್ ಕುಮಾರ್ ಅವರು ಶ್ವಾನದಳದ ತಂಡದೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

## 2 ಕೋಟಿ ದಾಟಿದ ಮೋದಿ ಯೂಟ್ಯೂಬ್ ಚಂದಾದಾರರು

ನವದೆಹಲಿ, ಡಿ. 26 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಯೂಟ್ಯೂಬ್ ಚಾನಲ್ ಚಂದಾದಾರರ ಸಂಖ್ಯೆ 2 ಕೋಟಿಗೆ ತಲುಪಿದೆ. ಸರ್ಕಾರದ ಮುಖ್ಯಸ್ಥರಲ್ಲಿ ಇಷ್ಟೊಂದು ಚಂದಾದಾರರನ್ನು ಹೊಂದಿರುವ ಏಕೈಕ ನಾಯಕ ಮೋದಿ ಆಗಿದ್ದಾರೆ.

ಮೋದಿ ಅವರ ಚಾನಲ್‌ನಲ್ಲಿ ಪ್ರಕಟಿಸಲಾದ ವಿಡಿಯೋಗಳು 4.5 ಶತಕೋಟಿಗೂ ಹೆಚ್ಚು ವೀಕ್ಷಣೆ ಪಡೆದಿವೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಎರಡನೇ ಸ್ಥಾನದಲ್ಲಿ ಬ್ರೆಜಿಲ್ ಅಧ್ಯಕ್ಷ ಜೈರ್ ಬೊಲ್ಸೊನೋರೋ ಇದ್ದು ಅವರ ಚಂದಾದಾರರ ಸಂಖ್ಯೆ 64 ಲಕ್ಷದಷ್ಟಿದೆ. ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಜೆಲೆನ್‌ಸ್ಕಿ ಅವರ ವಿಡಿಯೋಗಳನ್ನು 22.4 ಕೋಟಿ ಜನರು ವೀಕ್ಷಿಸಿದ್ದಾರೆ.

# ವಿಶೇಷ ಚೇತನರ ಕೌಶಲ್ಯಕ್ಕೆ ಅನುಗುಣವಾದ ಸೌಲಭ್ಯ ಸಿಗುವಂತಾಗಲಿ



**ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ್**

ದಾವಣಗೆರೆ, ಡಿ. 26- ವಿಶೇಷ ಚೇತನರಿಗೆ ಮೀಸಲಾದ ಅನುದಾನದಲ್ಲಿ ಕೇವಲ ತ್ರಿಚಕ್ರದ ಬೈಸಿಕಲ್, ಸ್ಕೂಟರ್ ನೀಡುವುದಷ್ಟೇ ಅಲ್ಲ.

ಬದಲಾಗಿ ಸ್ವಾವಲಂಬಿ ಜೀವನಕ್ಕೆ ಅನುಕೂಲವಾಗುವಂತಹ ಮತ್ತು ಅವರ ಕೌಶಲ್ಯಕ್ಕೆ ತಕ್ಕನಾದ ಕಂಪ್ಯೂಟರ್, ಜೆರಾಕ್ಸ್ ಸೇರಿದಂತೆ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಎಲ್ಲರಂತೆ ಜೀವನ ನಡೆಸುವ ಅವಕಾಶ ನೀಡಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ್ ಹೇಳಿದರು.

ನಗರದ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಎನೇಬಲ್ ಇಂಡಿಯಾ, ಸ್ಫೂರ್ತಿ ಸೇವಾ ಸಂಸ್ಥೆ, ರಾಜ್ಯ ಆರ್‌ಪಿಡಿ ಟಾಸ್ಕ್‌ಪೋರ್ಸ್ ಸಹಯೋಗದಲ್ಲಿ ಏರ್ಪಡಿಸಿದ್ದ ವಿಕಲಚೇತನರ ಹಕ್ಕುಗಳ ಕಾಯ್ದೆ-2016 ಮತ್ತು ಶೇ. 5 ಅನುದಾನ ಬಳಕೆ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿಶೇಷ ಚೇತನರಿಗೆ ಮೀಸಲಾದ ಅನುದಾನದಲ್ಲಿ ತ್ರಿಚಕ್ರದ ಬೈಸಿಕಲ್, ಸ್ಕೂಟರ್ ನೀಡುವುದಲ್ಲದೇ ಸ್ವಾವಲಂಬಿ ಬದುಕಿಗೆ ಅಗತ್ಯ ಪರಿಕರಗಳನ್ನು ಮತ್ತು ಇತರೆ ಸೌಲಭ್ಯಗಳನ್ನು ನೀಡಬೇಕಾಗಿದೆ ಎಂದರು.

ದೈಹಿಕವಾಗಿ ನ್ಯೂನತೆ ಇದ್ದರೂ ವಿಶೇಷ ಚೇತನರಿಗೆ ಕೌಶಲ್ಯದ ಕೊರತೆಯಿಲ್ಲ. ಕೌಶಲಕ್ಕೆ ತಕ್ಕ ಸೌಲಭ್ಯ ಕೊಡಬೇಕು. ಮೀಸಲಿಟ್ಟ ಅನುದಾನದ ಸದ್ಬಳಕೆಯಾಗಬೇಕು. ಜೀವನ ಕಟ್ಟಿಕೊಳ್ಳುವ ವಾತಾವರಣ ಕಲ್ಪಿಸಿಕೊಡುವ ಅಗತ್ಯವಿದೆ ಎಂದು ಹೇಳಿದರು.

ವಿಶೇಷ ಚೇತನರಿಗೆ ಶೇ. 5 ರಷ್ಟು ಕನಿಷ್ಠ ಸೌಲಭ್ಯ ಮಾತ್ರವಲ್ಲದೇ ಅಧಿಕ ಸವಲತ್ತುಗಳನ್ನು ನೀಡಬೇಕು. ವಿವಿಧ ಇಲಾಖೆಗಳಲ್ಲಿ ಸಾಕಷ್ಟು ಅನುದಾನ ಬರುತ್ತಿದ್ದರೂ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಇಂತಹ ಸೌಲಭ್ಯಗಳ ಬಗ್ಗೆ ಜನ ಜಾಗೃತಿ ಮೂಡಿಸುವಂತೆ ಸಲಹೆ ನೀಡಿದರು.

ಸರ್ಕಾರಿ ಕಚೇರಿಗಳಲ್ಲಿ ವಿಶೇಷ ಚೇತನರು ಸರಾಗವಾಗಿ ಓಡಾಡುವ ರ್‍ಯಾಂಪ್ ಗಳನ್ನು ನಿರ್ಮಾಣ ಮಾಡಬೇಕೆಂದರು.

ಸ್ಫೂರ್ತಿ ಸಂಸ್ಥೆಯ ಸಿಇಓ ರೂಪಾನಾಯ್ಕ ಮಾತನಾಡಿ, ವಿಶೇಷ ಚೇತನರಿಗೆ ಯಾವುದೇ ಅನುಕಂಪ, ಕನಿಕರ ಬೇಡ. ಬದಲಿಗೆ ಅವರಿಗೆ ಸಲಕರಣೆ, ಅಗತ್ಯ ಸೌಲಭ್ಯಗಳನ್ನು ನೀಡುವ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ತ್ರಿಚಕ್ರ ಬೈಸಿಕಲ್, ಸ್ಕೂಟರ್ ಜೊತೆಗೆ ಜೀವನ ನಡೆಸಲು ಬೇಕಾದ ಕೆಲಸವನ್ನು ಸಹ ಕೊಡಿಸಬೇಕಾಗಿದೆ ಎಂದರು.


ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ಬಿ. ಮಲ್ಲಾನಾಯ್ಕ, ಜಿಲ್ಲಾ ಅಂಗವಿಕಲ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಜಿ. ಪ್ರಕಾಶ್, ಸತ್ಯನಾರಾಯಣ, ಟಾಸ್ಕ್‌ಪೋರ್ಸ್ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ವಿಜಯಲಕ್ಷ್ಮೀ, ಅರುಣ್ ಕುಮಾರ್, ಕೆ. ಸುಧೀಂದ್ರ ಕುಮಾರ್, ತಾ. ಪಂ. ಇಓ ರಾಮಭೋವಿ ಮತ್ತಿತರರು ಪಾಲ್ಗೊಂಡಿದ್ದರು.

## ಕೂಲಂಬಿಯಲ್ಲಿ ಇಂದು ರಥೋತ್ಸವ, ಸಾಮೂಹಿಕ ವಿವಾಹ



ಹೊನ್ನಾಳಿ ತಾಲ್ಲೂಕಿನ ಕೂಲಂಬಿ ಗ್ರಾಮದ ಶ್ರೀ ಗುರು ಗದ್ದಿಗೇಶ್ವರ ಸ್ವಾಮಿ ಕಾರ್ತಿಕೋತ್ಸವ ರಥೋತ್ಸವ, ಸಾಮೂಹಿಕ ವಿವಾಹ ಮತ್ತು ಹೂವಿನ ಅಡ್ಡಪಲ್ಲಕ್ಕಿ ಉತ್ಸವ ಕಾರ್ಯಕ್ರಮಗಳು ಇಂದು ನಡೆಯಲಿದೆ ಎಂದು ಗದ್ದಿಗೇಶ್ವರ ಬಸವಣ್ಣ ರಾಮೇಶ್ವರ ಕಮಿಟಿ ಅಧ್ಯಕ್ಷ ಟಿ.ಎಸ್.ಸೋಮಶೇಖರ್ ತಿಳಿಸಿದ್ದಾರೆ. ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಗುರುಗದ್ದಿಗೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಸಾಮೂಹಿಕ ವಿವಾಹ ನಡೆಯಲಿವೆ. ರಾತ್ರಿ 8 ಗಂಟೆಗೆ ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತದೆ.

## ಕಡಲಬಾಳು ಮದ್ವಾಂಜನೇಯ ಸ್ವಾಮಿಯ ಕಾರ್ತಿಕೋತ್ಸವ





ದಾವಣಗೆರೆ, ಡಿ.26- ಶ್ರೀ ಕ್ಷೇತ್ರ ಕಡಲಬಾಳು ಮದ್ವಾಂಜನೇಯ ಸ್ವಾಮಿಯ ಕಡೇ ಕಾರ್ತಿಕೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ದೀಪ ಹಚ್ಚುವುದರ ಮುಖಾಂತರ ಚಾಲನೆ ನೀಡಿದರು. ಮುದೇಗೌಡ್ರು ಗಿರೀಶ್ ಹೆಚ್.ಮರುಳಸಿದ್ದೇಶ್, ಎಸ್.ಎಂ.ಪಿ ಸ್ಟೋನ್ ಕ್ರಷರ್ ಬೇತೂರು ಕರಿಬಸಪ್ಪ, ಬಿ.ಕೆ.ಪರಶುರಾಮ್, ಮೇಕಾ ಮುರಳಿಕೃಷ್ಣ, ಟಿ.ಅಂಜಿ, ಬಾಬು, ಎ.ಬಿ.ಪ್ರಭಾಕರ್, ಹೆಚ್.ಎಸ್.ಉಜ್ಜಪ್ಪ ಕರಿಗೌಡ್ರು, ಹನುಮಂತಪ್ಪ ಮುಂತಾದವರು ಉಪಸ್ಥಿತರಿದ್ದರು.

## ಕೊರೊನಾ: ಏಳು ದಿನ ಮನೆ ವಾಸ ಕಡ್ಡಾಯ

**(1ನೇ ಪುಟದಿಂದ)** ರೂಪಾಂತರಿಗಳು ಸೃಷ್ಟಿಯಾಗುವ ಸಾಧ್ಯತೆಯೂ ಇದೆ, ಇವುಗಳು ಕಾಲಾನಂತರದಲ್ಲಿ ಶಕ್ತಿಹೀನವಾಗುತ್ತಾ ಹೋಗುವುದರಿಂದ ಹೆಚ್ಚು ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಲಾಗಿದೆ. ಈಗಿರುವ ಸೋಂಕಿಗೆ ಒಳಗಾದವರು ಮನೆಯಲ್ಲೇ ಚಿಕಿತ್ಸೆ ಪಡೆಯಬಹುದು. ಗರ್ಭಿಣಿಯರು, 60 ವರ್ಷ ಮೇಲ್ಪಟ್ಟವರು, ದೀರ್ಘಕಾಲಿಕ ಕಾಯಿಲೆಗಳಿಂದ ಬಳಲುತ್ತಿರುವವರು ಜನ ದಟ್ಟಣೆ ಪ್ರದೇಶಗಳಿಗೆ ಭೇಟಿ ನೀಡುವುದನ್ನು ತಪ್ಪಿಸುವಂತೆ ಸಲಹೆ ಮಾಡಿದೆ.

# ರೈತ ವಿರೋಧಿ ಮನಸ್ಥಿತಿಯ ಸಚಿವರ ವಜಾಕ್ಕೆ ಜಿಲ್ಲಾ ರೈತರ ಒಕ್ಕೂಟದ ಆಗ್ರಹ

ದಾವಣಗೆರೆ, ಡಿ. 26-ಬೆಳೆ ಪರಿಹಾರ, ಸಾಲಮನ್ನಾ ಆಗುತ್ತದೆ ಎಂಬ ಕಾರಣಕ್ಕಾಗಿಯೇ ಮೇಲಿಂದ ಮೇಲೆ ಬರ ಬರಲಿ ಎಂದು ರೈತರು ಬಯಸುತ್ತಾರೆಂಬ ಸಚಿವ ಶಿವಾನಂದ ಪಾಟೀಲ್ ಹೇಳಿಕೆಯನ್ನು ಜಿಲ್ಲಾ ರೈತರ ಒಕ್ಕೂಟ ಖಂಡಿಸಿ, ಸಚಿವ ಸ್ಥಾನದಿಂದ ವಜಾಗೊಳಿಸಲು ಆಗ್ರಹಿಸಿದೆ.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ರೈತ ಒಕ್ಕೂಟದ ಮುಖಂಡ ಕೋಳೇನಹಳ್ಳಿ ಬಿ.ಎಂ. ಸತೀಶ್ ಮಾತನಾಡಿ, ಸಚಿವ ಶಿವಾನಂದ್ ಪಾಟೀಲ್ ರೈತರನ್ನು ಅವಮಾನಿಸುವ ರೀತಿಯಲ್ಲಿ ಹೇಳಿಕೆ ನೀಡಿದ್ದು, ರೈತ ವಿರೋಧಿ ಮನಸ್ಥಿತಿ ಇರುವ ಅವರನ್ನು ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸುವಂತೆ ಅವರು ಒತ್ತಾಯಿಸಿದರು.

ಈ ಹಿಂದೆ ಕೂಡ ಐದು ಲಕ್ಷ ರೂ. ಪರಿಹಾರದ ಆಸೆಗಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಹೆಚ್ಚಾಗುತ್ತಿದೆ ಎಂದು ರೈತರ ಜೀವನವನ್ನು ಅಣಕ ಮಾಡಿದ್ದರು. ರೈತರನ್ನು ಕೀಳಾಗಿ ನೋಡುವುದೇ ಇವರ ಸಂಸ್ಕೃತಿ ಆಗಿದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ 125 ವರ್ಷಗಳಲ್ಲಿ ಕಂಡರಿಯದ ಭೀಕರ ಬರಗಾಲ ಬಂದಿದ್ದು, ರಾಜ್ಯದಲ್ಲಿ 48.17 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವ ಬಗ್ಗೆ ಸಮೀಕ್ಷೆಯಿಂದ ತಿಳಿದುಬಂದಿದೆ. ಆದರೂ ರಾಜ್ಯ ಕಾಂಗ್ರೆಸ್ ಸರ್ಕಾರ ಬರ ಪರಿಹಾರ ನೀಡಲು ಮುಂದಾಗದಿರುವುದು ವಿಷಾದದ ಸಂಗತಿಯಾಗಿದೆ. ರೈತರ ಸಂಕಷ್ಟಕ್ಕೆ ನೆರವಾಗದೇ ಇರುವುದು ಖಂಡನೀಯ ಎಂದರು.

ಬರ ಪರಿಹಾರ ಕೇಳಲು ದೆಹಲಿಗೆ ತೆರಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಕೃಷ್ಣ ಭೈರೇಗೌಡ, ಜಮೀರ್ ಅಹಮದ್ ಅವರು ಐಷಾರಾಮಿ ಜೆಟ್ ವಿಮಾನದಲ್ಲಿ ಪ್ರಯಾಣಿಸಿರುವುದು ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ಮನಸ್ಥಿತಿಯನ್ನು ತೋರಿಸುತ್ತಿದೆ ಎಂದು ಹೇಳಿದರು.

ಒಂದು ವಾರದೊಳಗೆ ಸಚಿವ ಶಿವಾನಂದ ಪಾಟೀಲರನ್ನು ಸಂಪುಟದಿಂದ ವಜಾಗೊಳಿಸದಿದ್ದರೆ, ಹೋರಾಟ ರೂಪಿಸಲಾಗುವುದು. ವಿಳಂಬ ಧೋರಣೆಯನ್ನು ಅನುಸರಿಸದೇ ಬರ ಪರಿಹಾರವನ್ನು ಆಯಾ ರೈತರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ಬೆಳವನೂರು ನಾಗೇಶ್ವರರಾವ್, ವಾಸನ ಬಸವರಾಜಪ್ಪ,ಧನಂಜಯ ಕಡ್ಲೇಬಾಳು, ಗೋಪನಾಳು ಕರಿಬಸಪ್ಪ, ಚಿಕ್ಕಬೂದಿಹಾಳ್ ಭಗತ್ ಸಿಂಗ್, ಆರನೇ ಕಲ್ಲು ವಿಜಯಕುಮಾರ್, ಕನಗೊಂಡನಹಳ್ಳಿ ನಿಂಗಪ್ಪ, ರಾಜಶೇಖರ ನಾಗಪ್ಪ, ಮಳಲ್ಕೆರೆ ಕಲ್ಲಪ್ಪ ಉಪಸ್ಥಿತರಿದ್ದರು.

## ಬಿಜೆಪಿ ಕಾರ್ಯಕರ್ತರಿಂದ ವಾಜಪೇಯಿ ಜನ್ಮ ದಿನಾಚರಣೆ



ಜಗಳೂರು

ಜಗಳೂರು, ಡಿ. 26- ಇಲ್ಲಿನ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರಿಂದ ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನ ಕಾರ್ಯಕ್ರಮವನ್ನು ಆಚರಿಸಲಾಯಿತು.

ಜಿಲ್ಲಾ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರ ಅಧ್ಯಕ್ಷ ಕೃಷ್ಣಮೂರ್ತಿ ಪವಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಲಿಂಗರಾಜು, ಹಾಲೇಕಲ್ ಚಂದ್ರಾ ನಾಯ್ಕ್, ಬೆಣ್ಣೆದೋಸೆ ರವಿಶಂಕರ್, ಆರ್. ಪ್ರತಾಪ್, ಶ್ರೀಮತಿ ಸರೋಜಮ್ಮ ದೀಕ್ಷಿತ್, ಅಂತೋಣಿ, ರಾಮಚಂದ್ರ ವಾಡೋನಿ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ. ಅರುಣ್ ಕುಮಾರ್, ಶಿವಕುಮಾರಸ್ವಾಮಿ, ಎನ್.ಎಸ್. ರಾಜು ಮತ್ತು ಇತರರು ಮಾತನಾಡಿದರು. ತಾಲ್ಲೂಕು ಬಿಜೆಪಿ ನಿಷ್ಠಾವಂತ ಕಾರ್ಯಕರ್ತರ ಅಧ್ಯಕ್ಷ ಬಾಬುರೆಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೆ.ಟಿ. ಕಲ್ಲೇಶ್ ಕಾರ್ಯಕ್ರಮ ನಿರೂಪಿಸಿದರು.

## ನಗರದಲ್ಲಿ ಇಂದು ಗಂಗಾಮತಸ್ಥರ ಸಭೆ

ಜನವರಿ 14 ಮತ್ತು 15 ರಂದು ನಡೆಯುವ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯ ನವರ ಜಾತ್ರಾ ಮಹೋತ್ಸವದ ಅಂಗವಾಗಿ ಗಂಗಾಮತಸ್ಥರ (ಬೆಸ್ತರ) ಸಂಘದ ಕಚೇರಿಯಲ್ಲಿ ಇಂದು 3.30 ಕ್ಕೆ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜೆ. ಉಮೇಶ್ ಶಿರಮಗೊಂಡನಹಳ್ಳಿ ತಿಳಿಸಿದ್ದಾರೆ. ಇತ್ತೀಚಿಗೆ ನಮ್ಮನ್ನಗಲಿದ ಸಮಾಜದ ಮಾಜಿ ಅಧ್ಯಕ್ಷರಾಗಿದ್ದ ಮಾಗಾನಹಳ್ಳಿ ಹಾಲಪ್ಪ ಅವರ ನುಡಿ ನಮನ ಕಾರ್ಯಕ್ರಮವನ್ನೂ ಸಹ ಇದೇ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ. ಶ್ರೀ ಶಾಂತ ಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಸಮಾಜದ ಜಿಲ್ಲಾಧ್ಯಕ್ಷ ಮಾಗಾನಹಳ್ಳಿ ಬಿ.ಕೆ. ಮಂಜುನಾಥ ಅಧ್ಯಕ್ಷತೆ ವಹಿಸಲಿದ್ದಾರೆ.

**KVJ ಬೇಕಾಗಿದ್ದಾರೆ**

ಹರಿಹರದಲ್ಲಿ ನೂತನವಾಗಿ ಆರಂಭವಾಗಿರುವ **'ಕಲ್ಪವೃಕ್ಷ'** ಎಕ್ಸ್‌ಕ್ಲೂಸಿವ್ ಜ್ಯೂವಲರಿ ಶೋರೂಂನಲ್ಲಿ ಅನುಭವವುಳ್ಳ ಸೇಲ್ಸ್ ಬಾಯ್ಸ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಆಸಕ್ತರು ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ : ಅನುಭವವುಳ್ಳವರಿಗೆ ಆದ್ಯತೆ ಕೊಡಲಾಗುವುದು.

**KALPAVRUKSH, Gold-Silver-Diamond, Main Road, Harihar.**

**PH : 81056 0901, 98443 59130**

# ವೀರಶೈವ ಮಹಾಸಭಾದ ಬಗ್ಗೆ ಹಗುರ ಮಾತು ಸಲ್ಲದು : ಯತ್ನಾಳ್ ಹೇಳಿಕೆಗೆ ಖಂಡನೆ



ದಾವಣಗೆರೆ, ಡಿ. 26- ನಗರದಲ್ಲಿ ಯಶಸ್ವಿಯಾಗಿ ನಡೆದ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ 24 ನೇ ಅಧಿವೇಶನದ ಬಗ್ಗೆ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ನೀಡಿರುವ ಹಗುರವಾದ ಹೇಳಿಕೆಯನ್ನು ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಜಿ. ರಮೇಶ್ ಖಂಡಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ಮಾರ್ಗದರ್ಶನದಲ್ಲಿ ಎರಡು ದಿನಗಳ ಕಾಲ ನಡೆದ ಅಧಿವೇಶನ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಮುಂಬರುವ ಪೀಳಿಗೆಗೆ ಅತ್ಯುತ್ತಮ ಸಲಹೆ, ಸೂಚನೆಗಳನ್ನು ನೀಡುವ ಮೂಲಕ ಸಮಾಜದ ಬಗ್ಗೆ ಕಳಕಳಿಯನ್ನು ಮೂಡಿಸುವ ಪ್ರಯತ್ನ ಮಾಡಿರುವುದು ಶ್ಲಾಘನೀಯ ಎಂದರು.

ವೀರಶೈವ-ಲಿಂಗಾಯತ ಮಠಾಧೀಶರನ್ನು, ಸಮುದಾಯದ ಎಲ್ಲಾ ಒಳಪಂಗಡಗಳನ್ನು ಒಗ್ಗೂಡಿಸುವಲ್ಲಿ ಸಫಲರಾಗಿದ್ದು, ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಅಧಿವೇಶನದ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ವೀರಶೈವ-ಲಿಂಗಾಯತ ಸಮಾಜದಲ್ಲಿನ ಉನ್ನತ ಶ್ರೇಣಿಯಲ್ಲಿರುವ ಎಲ್ಲಾ ಕ್ಷೇತ್ರದ ಗಣ್ಯರನ್ನು ಒಗ್ಗೂಡಿಸಿ ಕೃಷಿ, ಕೈಗಾರಿಕೆ, ಶಿಕ್ಷಣ, ಸಾಹಿತ್ಯ, ನೌಕರರ, ಮಹಿಳೆಯರ, ಯುವಜನರ ಉತ್ತಮ ಕೊಡುಗೆಯನ್ನು ಸಲ್ಲಿಸುವ ಪ್ರಮುಖ 8 ನಿರ್ಣಯಗಳನ್ನು ಮಂಡಿಸಿದ್ದಾರೆ ಎಂದರು.

ಮಹಾಧಿವೇಶನದಲ್ಲಿ ಮೂರು ಮನೆ ಅಲ್ಲ. ಒಂದೇ ಮನೆ ಇದ್ದುದು, ಅದು ವೀರಶೈವ-ಲಿಂಗಾಯತ ಮನೆ ಎಂಬುದನ್ನು ಯತ್ನಾಳರು ಅರಿಯಬೇಕಿದೆ. ಬಸವಣ್ಣನವರ ವಚನ ಹೇಳುವುದು, ಶರಣ-ಶರಣೆಯರ ವಿಚಾರಗಳ ಬಗ್ಗೆ ವೇದಿಕೆಯ ಮೇಲೆ ಮಾತನಾಡುವುದಲ್ಲ. ಬದುಕಿನಲ್ಲಿ ಅಳವಡಿಸಿಕೊಂಡು, ಉಸಿರಿನಲ್ಲೂ ಶರಣರ ಸಂದೇಶ ಇರಬೇಕು. ಯತ್ನಳ್ ಅವರಿಗೆ ಸ್ವಪಕ್ಷದವರು ಮೇಲೂ ಪ್ರೀತಿ ಇಲ್ಲ. ಸ್ವಜಾತಿ ನಾಯಕರ ಮೇಲೂ ವಿಶ್ವಾಸವಿಲ್ಲ ಎಂದು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಪದಾಧಿಕಾರಿಯೂ ಆಗಿರುವ ಚಿತ್ರ ನಿರ್ಮಾಪಕ ಉಮೇಶ್ ಬಣಕಾರ್, ಮಹಾಸಭಾದ ಮಹಿಳಾ ಘಟಕದ ಪುಷ್ಪಾ ವಾಲಿ, ಐನಳ್ಳಿ ಶುಭಾ ಮತ್ತು ಇತರರು ಉಪಸ್ಥಿತರಿದ್ದರು.

**WANTED**

***Require Supervisor for Supervision work* on Construction site with Experience of 2 or 3 years.**

Candidate must know to read & write Properly.

Interested can apply with proper resume & Photo Attested.

**Attractive Salary / M : 98803 04009**

**ಶಿವ ಸಹಕಾರಿ ಬ್ಯಾಂಕ್ ನಿಯಮಿತ**

ಆಡಳಿತ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ - 577 001. ಪೋನ್ : 256107

**ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002**

**ಕಬ್ಜೆ ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**

ಈ ಕೆಳಗೆ ರುಜು ಮಾಡಿರುವ **ಶ್ರೀ ಡಿ.ಜಿ ಸುರೇಶ್, ಪ್ರಧಾನ ವ್ಯವಸ್ಥಾಪಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ** ಬ್ಯಾಂಕಿನ ಅಧಿಕೃತ ಅಧಿಕಾರಿಯಾದ ನಾನು ಸೆಕ್ಯುರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಧ್ಯಾದೇಶ 2002 ನಿಯಮ (3) ಕಲಂ 13(12) ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 9ರ ಅಂತರ್ಗತವಾಗಿ ನನ್ನ ಅಧಿಕಾರವನ್ನು ಉಪಯೋಗಿಸಿ **1) ಸತೀಶ್ ವೈ.ಬಿ. ಬಿನ್ ಬಸಪ್ಪ, # 57/2, 2ನೇ ಮೇನ್, ಎ.ವಿ.ಕೆ. ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577002.** ಇವರಿಂದ ಬ್ಯಾಂಕಿಗೆ ಸಲ್ಲಬೇಕಾದ ಬಾಕಿ ಮೊಬಲಗು ರೂ. 2,38,86,951.18 (ರೂ. ಎರಡು ಕೋಟಿ ಮೂವತ್ತೆಂಟು ಲಕ್ಷದ ಎಂಬತ್ತಾರು ಸಾವಿರದ ಒಂಬೈನೂರ ಐವತ್ತೊಂದು ಹದಿನೆಂಟು ಪೈಸೆ ಮಾತ್ರ)ಗಳನ್ನು ಪಾವತಿಸುವಂತೆ 60 ದಿನಗಳ ಕಾನೂನುಬದ್ಧ ತಗಾದೆಯನ್ನು ದಿನಾಂಕ 28.08.2023ರಂದು ಕೊಟ್ಟಿದ್ದರೂ ಕೂಡಾ, ಈ ಅವಧಿ ಒಳಗೆ ಬಾಕಿದಾರ ಸಾಲಗಾರನು ಸಾಲವನ್ನು ಪಾವತಿಸಲು ವಿಫಲವಾದ ಪ್ರಯುಕ್ತ ಸದರಿ ಕಾನೂನಿನ 13(4) ಮತ್ತು ಸದರಿ ಆಧ್ಯಾದೇಶದ ನಿಯಮ 9 ರಂತೆ ನಾನು ನನ್ನ ಅಧಿಕಾರವನ್ನು ಉಪಯೋಗಿಸಿ, ಈ ಕೆಳಗೆ ಕಂಡ ಸ್ಥಿರ ಆಸ್ತಿಗಳನ್ನು ಬ್ಯಾಂಕಿಗೆ ಬರಬೇಕಾದ ಸಾಲಕ್ಕಾಗಿ ಕಬ್ಜೆ ವಹಿಸಿಕೊಂಡಿರುತ್ತೇವೆ ಎಂದು ಸಾಲಗಾರನಿಗೂ, ಸಾರ್ವಜನಿಕರಿಗೂ ಈ ನೋಟಿಸ್ ಮುಖೇನ ಗಮನಕ್ಕೆ ತರುತ್ತಿದ್ದೇನೆ.

ಸಾಲಗಾರನು ಮತ್ತು ಸಾರ್ವಜನಿಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಬ್ಯಾಂಕಿಗೆ ಬರತಕ್ಕ ರೂ. 2,38,86,951.18 (ರೂ. ಎರಡು ಕೋಟಿ ಮೂವತ್ತೆಂಟು ಲಕ್ಷದ ಎಂಬತ್ತಾರು ಸಾವಿರದ ಒಂಬೈನೂರ ಐವತ್ತೊಂದು ಹದಿನೆಂಟು ಪೈಸೆ ಮಾತ್ರ) ಋಣ (ಚಾರ್ಜ್) ಮತ್ತು ದಿನಾಂಕ :18.08.2023ರಿಂದ ತಗುಲುವ ಬಡ್ಡಿ ಸೇರಿಸಿ ಸಂದಾಯವಾಗುವ ತನಕ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ರೀತಿಯ ವ್ಯವಹಾರವನ್ನು ಮಾಡತಕ್ಕದ್ದಲ್ಲ ಎಂದು ಈ ಮೂಲಕ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ.

**ಸ್ಥಿರಾಸ್ತಿ ವಿವರಗಳು:** ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಕಛೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು ದಾವಣಗೆರೆ ಸೈಟ್ ನಂ. 17, #57/2, 2ಎ, 2ಬಿ, 2ಸಿ, 2ಡಿ, 2ಈ, 2ಎಫ್, 2ನೇ ಮೇನ್ ಪಿ.ಜೆ. ಬಡಾವಣೆ, ದಾವಣಗೆರೆಯಲ್ಲಿರುವ ಸೈಟಿನ ಒಟ್ಟು ಅಳತೆ 73x44 (3212 ಚದುರ ಅಡಿ) ಜಾಗದ ಪೈಕಿ 2626 ಚದುರಡಿ ಜಾಗದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ನೆಲ ಮಹಡಿ, ಒಂದನೇ ಮಹಡಿ ಮತ್ತು ಎರಡನೇ ಮಹಡಿ ಆರ್.ಸಿ.ಸಿ. ಬಿಲ್ಡಿಂಗ್ ವಾಣಿಜ್ಯ ಕಟ್ಟಡ ಮತ್ತು ವಾಸದ ಮನೆ ಮತ್ತು ಇದೇ ಸೈಟ್ ನಂ. 17 ಇದಕ್ಕೆ ಲಗತ್ತಾದ 29x33 ಅಡಿ (ವಿಭಾಗದ ಪತ್ರದಲ್ಲಿನ ಕಂಡಂತೆ ಸೈಟ್ ನಂ. 2) ಮತ್ತು ಸದರಿ ಆಸ್ತಿಯ ಚಕ್ಕುಬಂದಿ ವಿವರ ಈ ಕೆಳಕಂಡಂತೆ ಇರುತ್ತದೆ.

**ಸೊತ್ತಿಗೆ ಚಕ್ಕುಬಂದಿ:** ಪೂರ್ವಕ್ಕೆ : 2ನೇ ಮುಖ್ಯರಸ್ತೆ, ಪಶ್ಚಿಮಕ್ಕೆ : ವೈ.ಬಿ. ಶಿವಯೋಗಿ ಹೌಸ್, ಉತ್ತರಕ್ಕೆ : ಕಾಮನ್ ಪ್ಯಾಸೇಜ್, ದಕ್ಷಿಣಕ್ಕೆ : ವೈ.ಬಿ. ಆನಂದ್ ಮತ್ತು ಬಿ.ಶಿವಯೋಗಿರವರ ಆಸ್ತಿ.

ಸ್ಥಳ : ದಾವಣಗೆರೆ.
ದಿನಾಂಕ: 09.11.2023

**ಸಹಿ/-**
**ಪ್ರಧಾನ ವ್ಯವಸ್ಥಾಪಕರು ಮತ್ತು ಅಧಿಕೃತ ಅಧಿಕಾರಿ,**
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.

## ಪೇದೆಯ ಹತ್ಯೆ

**(1ನೇ ಪುಟದಿಂದ)** ಪೊಲೀಸರ ತಂಡವನ್ನು ಕಳಿಸಲಾಗಿತ್ತು.

ಪೊಲೀಸ್ ತಂಡದ ಮೇಲೆ ಕುಮಾರ್, ಪತ್ನಿ ಹಾಗೂ ಮಗ ಗುಂಡು ಹಾರಿಸಿದರು. ಆಗ ಪೇದೆ ರಾಠಿ ಅವರ ತೊಡೆಗೆ ಗುಂಡು ತಗುಲಿತು. ತಕ್ಷಣವೇ ಅವರನ್ನು ಕಾನ್ಪುರದ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಫಲಕಾರಿಯಾಗದೇ ಅವರು ಸಾವನ್ನಪ್ಪಿದ್ದಾರೆ. ಚಕಮಕಿಯಲ್ಲಿ ರೌಡಿ ಶೀಟರ್ ಹಾಗೂ ಆತನ ಮಗನಿಗೆ ಗಾಯಗಳಾಗಿವೆ. ಅವರನ್ನು ಕನ್ನೌಜ್‌ನ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

**ದೊಡ್ಡಬಾತಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಭಿನಂದಿಸಿದ ಅಥಿತ್ ಅಂಬರ್‌ಕರ್**



ದಾವಣಗೆರೆ, ಡಿ. 26 - ದೊಡ್ಡಬಾತಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ,ಇದರ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದ ನೇತೃತ್ವದ ತಂಡವು ಜಿ.ಎಂ ಸಿದ್ದೇಶ್ವರ ಮತ್ತು ಎಸ್.ಎ ಅವರ ಮಾರ್ಗದರ್ಶನದಲ್ಲಿ ಪ್ರಚಂಡ ಬಹುಮತದಿಂದ ಆಯ್ಕೆಯಾಗಿರುತ್ತದೆ. ಈ ವಿಜಯಕ್ಕೆ ಸಹಕರಿಸಿದ ಸಮಸ್ತ ಸಹಕಾರಿ ಬಂಧುಗಳಿಗೆ ಅಥಿತ್ ಅಂಬರ್‌ಕರ್ ಹೃದಯಪೂರ್ವಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

ADVT

**ಹುಟ್ಟುಹಬ್ಬದ ಶುಭಾಶಯಗಳು**





ಆತ್ಮೀಯ ಸ್ನೇಹಿತ ಬಿಜೆಪಿ ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ, ದಾವಣಗೆರೆ ವಕೀಲರ ಸಂಘ ನಿಯಮಿತ ಮತ್ತು ಅಂಭಾಭವಾನಿ ಕ್ರೆಡಿಟ್ ಕೋ-ಆಪ್ ಬ್ಯಾಂಕ್ ಲಿ., ನಿರ್ದೇಶಕರಾದ

**ಶ್ರೀಯುತ ಎ.ಸಿ. ರಾಘವೇಂದ್ರ**

ಇವರಿಗೆ ಜನ್ಮದಿನದ ಶುಭಾಶಯಗಳು.

**ಶುಭ ಕೋರುವವರು :**

+ **ಹೆಚ್. ದಿವಾಕರ್,** ಜಿಲ್ಲಾ ಸಂಚಾಲಕರು, ಕಾನೂನು ಪ್ರಕೋಷ್ಟ, ದಾವಣಗೆರೆ ಮತ್ತು ಮಾಜಿ ಉಪಾಧ್ಯಕ್ಷರು, ವಕೀಲರ ಸಂಘ, ದಾವಣಗೆರೆ. ಮಾಜಿ ನಿರ್ದೇಶಕರು, ಡಿಡಿಸಿಸಿ ಬ್ಯಾಂಕ್
+ **ಎಲ್. ದಯಾನಂದ,** ಜಿಲ್ಲಾಧ್ಯಕ್ಷರು, ಅಧಿವ್ಯಕ್ತ ಪರಿಷತ್, ದಾವಣಗೆರೆ
+ **ಅಜೀರ್ ಪಠಾಣ್,** ಎಸ್.ಎಸ್.ಎಸ್. ಎಂಟರ್ ಪ್ರೈಸಸ್
+ **ಎ.ಎಸ್. ಮಂಜುನಾಥ,** ಸಹ ಕಾರ್ಯದರ್ಶಿ, ವಕೀಲರ ಸಂಘ, ದಾವಣಗೆರೆ.
+ **ಕಿರಣ್‌ಕುಮಾರ್ ಸುರ್ವೆ,** ಬಿಜೆಪಿ ಮುಖಂಡರು
+ **ಆಲೂರು ಪ್ರಕಾಶ್** + **ತಿರುವಲ್ಲೇಶ್** + **ಶಿವಶಂಕರಪ್ಪ**
+ **ಪ್ರಶಾಂತ್** + **ನೀಲಕಂಠ, ನೋಟರಿ** + **ವೆಂಕಟೇಶ್**

**ದೇಶಕ್ಕೆ ಮತ್ತೊಮ್ಮೆ ಮೋದೀಜಿ, ದಾವಣಗೆರೆಗೆ ಜಿ.ಎಂ. ಸಿದ್ದೇಶಣ್ಣ**

## ಮಹಾಸಭಾದ ರಾಷ್ಟ್ರೀಯ ಅಧಿವೇಶನ ಯಶಸ್ಸಿಗೆ ಶಾಸಕ ಎಸ್ಸೆಸ್ ಧನ್ಯವಾದ



ದಾವಣಗೆರೆ, ಡಿ. 26- ಇಲ್ಲಿನ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಎರಡು ದಿನಗಳ ಕಾಲ ನಡೆದ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾ ಅಧಿವೇಶನದ ಯಶಸ್ಸಿಗೆ ಶ್ರಮಿಸಿದ ಎಲ್ಲರಿಗೂ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಧನ್ಯವಾದ ಸಲ್ಲಿಸಿದ್ದಾರೆ. ಅಧಿವೇಶನ ದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ್ದ ಹರ-ಗುರು ಚರಮೂರ್ತಿಗಳಿಗೆ, ಮುಖ್ಯ ಅತಿಥಿಗಳಿಗೆ, ಉಪನ್ಯಾಸ ಹಾಗೂ ದಿಕ್ಸೂಚಿ ನುಡಿಗಳನ್ನಾಡಿದ ಗಣ್ಯರಿಗೆ, ರಾಜಕೀಯ ನಾಯಕರಿಗೆ, ಸಹಕಾರ ನೀಡಿದ ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ, ಮಹಾಸಭಾದ ಪದಾಧಿಕಾರಿಗಳಿಗೆ ಸೇರಿದಂತೆ ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅವರು ಧನ್ಯವಾದ ಹೇಳಿದ್ದಾರೆ.

## ಜಿಲ್ಲಾ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರ ಹಿರಿಯ ಉಪಾಧ್ಯಕ್ಷರಾಗಿ ಪುರುಷೋತ್ತಮ್



ಜಗಳೂರು, ಡಿ. 26 - ತಾಲ್ಲೂಕಿನ ಕೊಡದಗುಡ್ಡ ಕೆ.ಜಿ. ಪುರುಷೋತ್ತಮ್ ನಾಯ್ಕ್ ಅವರನ್ನು ಜಿಲ್ಲಾ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರ ಹಿರಿಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಎಂ.ಪಿ. ಕೃಷ್ಣಮೂರ್ತಿ ಪವಾರ್ ಮತ್ತು ಪ್ರಧಾನ ಕಾರ್ಯದರ್ಶಿ ಹೆಚ್.ಎಸ್ ಲಿಂಗರಾಜು ತಿಳಿಸಿದ್ದಾರೆ.

# ಒಬ್ಬ ವಿಜ್ಞಾನಿ ಸೃಷ್ಟಿಯಲ್ಲಿ ಸಮಾಜ, ಪೋಷಕರ, ಶಿಕ್ಷಕರ ಪಾತ್ರ ಅಪಾರ

### ಸೇಂಟ್ ಜಾನ್ಸ್ ಶಾಲೆಯಲ್ಲಿ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ. ಕೊಟ್ರೇಶ್

ದಾವಣಗೆರೆ, ಡಿ. 26- ಒಬ್ಬ ವಿಜ್ಞಾನಿ ಸೃಷ್ಟಿಯಾಗಬೇಕಾದರೆ ಅವನ ಹಿಂದೆ ಸಮಾಜ, ಪೋಷಕರ ಮತ್ತು ಶಿಕ್ಷಕರ ಪಾತ್ರ ಅಪಾರವಾಗಿದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ. ಕೊಟ್ರೇಶ್ ತಿಳಿಸಿದರು.

ನಗರದ ಸೇಂಟ್ ಜಾನ್ಸ್ ಶಾಲೆಯಲ್ಲಿ ನಿನ್ನೆ ಏರ್ಪಾಡಾಗಿದ್ದ ಕಲಾ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಚಂದ್ರಯಾನ್-3 ರಲ್ಲಿ ಕಾರ್ಯ ನಿರ್ವಹಿಸಿದ ವಿಜ್ಞಾನಿ ತಿಮ್ಮಪ್ಪ ಪೂಜಾರ್ ಅವರು ತಮ್ಮ ವಿದ್ಯಾರ್ಥಿಯಾಗಿದ್ದರು ಎಂದು ಕೊಟ್ರೇಶ್ ಹೆಮ್ಮೆಯಿಂದ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ ಮಾತನಾಡಿ, ಮಕ್ಕಳ ಚಿಕ್ಕ ಚಿಕ್ಕ ಪ್ರಯತ್ನಗಳೇ ಮುಂದಿನ ದೊಡ್ಡ ಸಾಧನೆಗೆ ಅವಕಾಶ ಮಾಡಿಕೊಡುತ್ತದೆ. ವಿಜ್ಞಾನ ವಸ್ತು ಪ್ರದರ್ಶನ ಕೇವಲ ಒಂದು ದಿನದ ವಿಷಯವಾಗಿರದೇ ನಿರಂತರವಾಗಲಿ ಎಂದು ಕರೆ ನೀಡಿದರು.

ಮತ್ತೋರ್ವ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ॥ ಆರ್.ಜೆ. ಪುನೀತ್‌ಗೌಡ ಮಾತನಾಡಿ, ನನ್ನಿಂದ ಸಾಧ್ಯವಿಲ್ಲ ಎಂದು ಭಾವಿಸುವ ಬದಲು ನನ್ನಿಂದ ಎಲ್ಲವೂ ಸಾಧ್ಯ ಎಂದು ಪ್ರಯತ್ನಿಸಿದರೆ, ಎಲ್ಲರಿಗೂ ಎಲ್ಲವೂ ಸಾಧ್ಯವೆಂದು ಪ್ರತಿಪಾದಿಸಿದರು.



ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್ ಕುಮಾರ್, ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ ಮಾತನಾಡಿ, ನಿಮ್ಮಲ್ಲಿ ಅಡಗಿರುವ ಕಲೆಯನ್ನು ಹೊರಗೆಡವಲು ವಿಜ್ಞಾನ ವಸ್ತು ಪ್ರದರ್ಶನ ಒಂದು ವೇದಿಕೆ ಆದ್ದರಿಂದ ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶಾಲೆಯ ಖಜಾಂಚಿ ಪ್ರವೀಣ್ ಹುಲ್ಲುಮನೆ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳೇ ಸಿದ್ದಪಡಿಸಿದ ಡ್ರೋನ್ ಮಾದರಿಯನ್ನು ವೇದಿಕೆಯ ಮೇಲೆ ಉಡಾವಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರತಿ ವರ್ಷವೂ ಹತ್ತನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕೇಂದ್ರ ಪಠ್ಯಕ್ರಮ ವಿಭಾಗದ ಕು. ಭೂಮಿಕಾ ಎಲ್. ಹಾಗು ರಾಜ್ಯ ಪಠ್ಯಕ್ರಮ ವಿಭಾಗದ ಕು. ರುಚಿತಾ ಅವರುಗಳಿಗೆ ಹುಲ್ಲುಮನೆ ವಂಶಸ್ಥರಿಂದ ನೀಡಲಾಗುವ 'ಹುಲ್ಲುಮನೆ ರಾಮಪ್ಪ-ಭೀಮಪ್ಪ ಸ್ವರ್ಣ ಫಲಕ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲ ಆರ್. ಸಯ್ಯದ್ ಆರಿಫ್ ಹಾಗೂ ಶ್ರೀಮತಿ ಪ್ರೀತಾ. ಟಿ.ರೈ, ಉಪ ಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ ಹಾಗೂ ಇತರರು ಪಾಲ್ಗೊಂಡಿದ್ದರು.



ದಾವಣಗೆರೆ ಜಯದೇವ ವೃತ್ತದ ಬಳಿಯ ಶ್ರೀ ಗುರು ದತ್ತಾತ್ರೇಯ ಮಂದಿರದಲ್ಲಿ ವಿಶೇಷ ಪೂಜೆ ನಡೆಯಿತು.

# ನಗರದಲ್ಲಿ ದತ್ತಾತ್ರೇಯ ಜಯಂತಿ ಆಚರಣೆ

ದಾವಣಗೆರೆ, ಡಿ. 26- ನಗರ ದಲ್ಲಿ ಮಂಗಳವಾರ ದತ್ತಾತ್ರೇಯ ಜಯಂತಿ ಆಚರಣೆಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.



ಮಾರ್ಗಶಿರ ಮಾಸದಲ್ಲಿ ಬರುವ ಶುಕ್ಲಪಕ್ಷದ ಪೂರ್ಣಿಮೆಯಂದು ದತ್ತಾತ್ರೇಯ ಜಯಂತಿಯನ್ನು ಆಚರಿಸಲಾಗುತ್ತದೆ.

ಈ ದಿನದಂದು ಭಕ್ತರು ದತ್ತಾತ್ರೇಯನಿಗೆ ವಿವಿಧ ರೀತಿಯಲ್ಲಿ ಪೂಜೆ ಸಲ್ಲಿಸಿ, ಆಶೀರ್ವಾದವನ್ನು ಪಡೆಯುತ್ತಾರೆ. ಬೇರೆಲ್ಲಾ ದಿನಗಳಿಗೆ ಹೊರತುಪಡಿಸಿ, ಮುಖ್ಯವಾಗಿ ಈ ದಿನದಂದು ದತ್ತಾತ್ರೇಯನನ್ನು ಪೂಜಿಸಿದರೆ ಹೆಚ್ಚಿನ ಫಲ ದೊರೆಯುತ್ತದೆ ಎಂಬುದು ಭಕ್ತರ ನಂಬಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ದತ್ತಾತ್ರೇಯ ಮಂದಿರಗಳಲ್ಲಿ ಇಂದು ವಿಶೇಷ ಹೋಮ, ಪೂಜಾದಿ ಕಾರ್ಯಗಳು ನಡೆದವು. ಶ್ರೀ ಸ್ವಾಮಿಯನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಭಕ್ತರು ದರ್ಶನ ಪಡೆದರು. ಜಯದೇವ ವೃತ್ತದಲ್ಲಿರುವ ಶ್ರೀ ಶಿವಾನಂದ ತೀರ್ಥಗುರು ಅಧ್ಯಾತ್ಮ ಮಂದಿರದ ಶ್ರೀ ಗುರು ದತ್ತಾತ್ರೇಯ ದೇವಾಲಯದಲ್ಲಿ ಶ್ರೀ ಗುರು ದತ್ತಾತ್ರೇಯ ಸ್ವಾಮಿ ಜಯಂತಿ ಮಹೋತ್ಸವ ಆಚರಿಸಲಾಯಿತು.

ಬೆಳಿಗ್ಗೆ 6 ಗಂಟೆಗೆ ಕಾಕಡಾರತಿ, ನಂತರ ಗಣಪತಿ, ವೀರಾಂಜನೇಯ ಸ್ವಾಮಿ ಪೂಜೆ ಹಾಗೂ ದತ್ತಾತ್ರೇಯ ಮೂರ್ತಿ ಹಾಗೂ ಗುರುಗಳ ಪಾದುಕೆಗೆ ಪೂಜೆ ಕಾರ್ಯ, ರುದ್ರಾಭಿಷೇಕ ನೆರವೇರಿತು. ಮಧ್ಯಾಹ್ನ ಮಹಾಮಂಗಳಾರತಿ, ಅನ್ನಸಂತರ್ಪಣೆ ಏರ್ಪಡಿಸಲಾಗಿ ತ್ತು. ಸಂಜೆ ವಿವಿಧ ಭಜನಾ ಮಂಡಳಿಗಳಿಂದ ಭಜನೆ, ರಾತ್ರಿ ಹರಿಕಥೆ ನಂತರ ತೊಟ್ಟಿಲೋತ್ಸವ ನಡೆಯಿತು. ರಾತ್ರಿ 8 ಗಂಟೆ ನಂತರ ಕಡೇ ಕಾರ್ತೀಕ ಮಹೋತ್ಸವ ಜರುಗಿತು.

ನಿಟುವಳ್ಳಿ ಶಿವ ಚಿದಂಬರ ಸಮುದಾಯ ಭವನದ ಶ್ರೀ ಶಿವ ಚಿದಂಬರ ಕ್ಷೇತ್ರದಲ್ಲಿ ಶ್ರೀ ಗುರು ದತ್ತಾತ್ರೇಯ ಸ್ವಾಮಿ ಸೇವಾ ಟ್ರಸ್ಟ್ ವತಿಯಿಂದ 7ನೇ ವರ್ಷದ ಗುರು ದತ್ತಾತ್ರೇಯ ಸ್ವಾಮಿ ಜಯಂತಿ ಹಾಗೂ ಶ್ರೀ ಗುರು ದತ್ತಾತ್ರೇಯ ಹೋಮ ಹಮ್ಮಿಕೊಳ್ಳಲಾಗಿತ್ತು. ಬೆಳಿಗ್ಗೆ ದತ್ತಾತ್ರೇಯ ಹೋಮ, ಸನ್ಮಾನ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ನಡೆಯಿತು.

## 'ಒಕ್ಕೂಟ ಸರ್ಕಾರ' ಎಂಬ ಅರ್ಜಿ ತಳ್ಳಿ ಹಾಕಿದ ಹೈಕೋರ್ಟ್

### ಒಕ್ಕೂಟ - ಕೇಂದ್ರ ಎರಡೂ ಒಂದೇ

ನವದೆಹಲಿ, ಡಿ. 26 – ಒಕ್ಕೂಟ ವ್ಯವಸ್ಥೆಯು ದೇಶದ ಸಂವಿಧಾನದ ಮೂಲ ತತ್ವವಾಗಿದೆ. ಹೀಗಾಗಿ 'ಒಕ್ಕೂಟ ಸರ್ಕಾರ' ಎನ್ನುವ ಬದಲು 'ಕೇಂದ್ರ ಸರ್ಕಾರ' ಎಂದು ಹೇಳಿದರೂ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಅಧಿಕೃತ ದಾಖಲೆಗಳಲ್ಲಿ ಕೇಂದ್ರ ಸರ್ಕಾರ ಎಂಬ ಪದ ಬಳಸುವ ಬದಲು ಒಕ್ಕೂಟ ಇಲ್ಲವೇ ಒಕ್ಕೂಟ ಸರ್ಕಾರ ಎಂಬ ಪದ ಬಳಸಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

ಈ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ನೇತೃತ್ವದ ಪೀಠ, ಕೇಂದ್ರ ಸರ್ಕಾರ ಹಾಗೂ ಒಕ್ಕೂಟ ಸರ್ಕಾರ ಎಂಬ ಎರಡೂ ಪದಗಳನ್ನು ಪರ್ಯಾಯ ಎಂಬಂತೆ ಬಳಸಲಾಗಿದೆ. ಕೇಂದ್ರ ಸರ್ಕಾರ ಎಂಬ ಪದ ಬಳಸಿದರೆ, ರಾಜ್ಯಗಳು ಅಧೀನ ಸರ್ಕಾರಗಳು ಎಂಬ ಅರ್ಥ ಬರುತ್ತದೆ ಎಂಬ ಅರ್ಜಿದಾರರ ವಾದದಲ್ಲಿ ಹುರುಳಿಲ್ಲ ಎಂದಿದ್ದಾರೆ.

ಶಾಸನಗಳನ್ನು ರೂಪಿಸುವುದು ಶಾಸಕಾಂಗದ ವ್ಯಾಪ್ತಿಗೆ ಬರುವ ವಿಷಯ. ಇದರಲ್ಲಿ ನ್ಯಾಯಾಲಯಗಳು ಮಧ್ಯ ಪ್ರವೇಶಿಸಲಾಗದು ಎಂದು ಹೈಕೋರ್ಟ್ ಪೀಠ ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಮಿನಿ ಪುಷ್ಕರ್ಣ ಅವರೂ ಇದ್ದಾರೆ. ಹೈಕೋರ್ಟ್ ಕಳೆದ ಡಿಸೆಂಬರ್ 19ರಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತಳ್ಳಿ ಹಾಕಿತ್ತು. ವಿಸ್ತೃತವಾದ ಆದೇಶವನ್ನು ನಂತರದಲ್ಲಿ ಹೈಕೋರ್ಟ್ ವೆಬ್ ತಾಣದಲ್ಲಿ ಪ್ರಕಟಿಸಲಾಗಿದೆ.

## ಸೂಳೆಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಬೆಳೆ ಬೆಳೆಯದಂತೆ ಮನವಿ

ದಾವಣಗೆರೆ, ಡಿ. 26- ಶಾಂತಿ ಸಾಗರ (ಸೂಳೆಕೆರೆ)ದಲ್ಲಿ 2024ರ ಬೇಸಿಗೆ ಹಂಗಾಮಿಗೆ ನೀರಾವರಿ ಬೆಳೆಗಳಿಗೆ ನೀರು ಪೂರೈಸುವಷ್ಟು ನೀರಿನ ಸಂಗ್ರಹಣೆ ಇರುವುದಿಲ್ಲ. ಕಾರಣ ಅಚ್ಚುಕಟ್ಟಿಗೆ ನೀರನ್ನು ಹರಿಸುವುದಿಲ್ಲ. ರೈತರು ಯಾವುದೇ ನೀರಾವರಿ ಬೆಳೆಗಳನ್ನು ಬೆಳೆಯಬಾರದು ಎಂದು ಕರ್ನಾಟಕ ನೀರಾವರಿ ನಿಗಮ ನಿಯಮಿತದ ನಂ.3 ಭದ್ರಾ ನಾಲಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರೈತರಲ್ಲಿ ಮನವಿ ಮಾಡಿದ್ದಾರೆ. ಒಂದು ವೇಳೆ ಬೆಳೆದರೆ ಅದಕ್ಕೆ ಇಲಾಖೆ ಜವಾಬ್ದಾರಿ ಆಗುವುದಿಲ್ಲ ಎಂದೂ ಅವರು ಎಚ್ಚರಿಸಿದ್ದಾರೆ. ಶಾಂತಿಸಾಗರ ಕೆರೆಯ ಕಟ್ಟಡ, ಕಾಲುವೆ ಹಾಗೂ ಗೇಟ್‌ಗಳನ್ನು ಹಾನಿಗೊಳಪಡಿಸಿದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಅವರು ಎಚ್ಚರಿಸಿದ್ದಾರೆ.

# ನ್ಯಾಯಮೂರ್ತಿ ಸಂತೋಷ ಹೆಗಡೆ ಅವರಿಗೆ ಜೆ.ಎಂ. ಇಮಾಮ್ ಪ್ರಶಸ್ತಿ





### ಜಗಳೂರಿನಲ್ಲಿ ಇಂದು ಪ್ರಶಸ್ತಿ ಪ್ರದಾನ ಸಮಾರಂಭ

ಜಗಳೂರು, ಡಿ.26- ಮಹಮ್ಮದ್ ಇಮಾಮ್ ಸಾಹೇಬರು ಧೀಮಂತ, ವಸ್ತುನಿಷ್ಠ, ಸಂಪನ್ನ, ಅಪರೂಪದ ರಾಜಕಾರಣಿ. ಮೈಸೂರು ಮಹಾರಾಜರಿಂದ 'ಮುಶೀರ್ ಉಲ್ ಮುಲ್ಕ್' ಎಂಬ ಬಿರುದನ್ನು ಪಡೆದು ಸಚಿವರಾಗಿ, ಸ್ವಾತಂತ್ರ್ಯ ನಂತರ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ, ಲೋಕ ಸಭಾ ಸದಸ್ಯರಾಗಿ ಜನಸಾಮಾನಸದಲ್ಲಿ ಇಂದಿಗೂ ಹಸಿರಾಗಿರುವ ವ್ಯಕ್ತಿ. ಹಲವಾರು ಹಳ್ಳಿಗಳಲ್ಲಿ ಕೆರೆಗಳನ್ನು ನಿರ್ಮಿಸಿ ಅಭಿವೃದ್ಧಿಗಾಗಿ ಶ್ರಮಿಸಿದ ಜೆ.ಎಂ. ಇಮಾಮ್ ಸಾಹೇಬರ ನೆನಪಿಗಾಗಿ ಜಗಳೂರಿನ ಜೆ.ಎಂ. ಇಮಾಮ್ ಟ್ರಸ್ಟ್ ಕಳೆದ ನಾಲ್ಕು ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಗುರುತಿಸಿ ರಾಜ್ಯಮಟ್ಟದ ಇಮಾಮ್ ಸ್ಮಾರಕ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

2023 ನೇ ಸಾಲಿನ 'ಜೆ.ಎಂ. ಇಮಾಮ್ ಸ್ಮಾರಕ ಪ್ರಶಸ್ತಿಗೆ' ನಿವೃತ್ತ ನ್ಯಾಯಾಧೀಶರು, ಮಾಜಿ ಲೋಕಾಯುಕ್ತರೂ ಆದ ಎನ್. ಸಂತೋಷ್ ಹೆಗಡೆ ಯವರು ಭಾಜನರಾಗಿದ್ದಾರೆ.

ಜಗಳೂರು ಇಮಾಮ್ ಶಾಲಾ ಆವರಣದಲ್ಲಿ ನಾಳೆ ದಿನಾಂಕ 27ರ ಬುಧವಾರ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಲಿದೆ.

ಸಮಾರಂಭದ ಉದ್ಘಾಟನೆ: ಡಾ. ಎನ್. ಜಗದೀಶ್ ಕೊಪ್ಪ, ಹಿರಿಯ ಪತ್ರಕರ್ತರು, ಮೈಸೂರು, ಪ್ರಶಸ್ತಿ ಪುರಸ್ಕೃತರು ಸನ್ಮಾನ್ಯ ಎನ್. ಸಂತೋಷ್ ಹೆಗಡೆ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು, ಮಾಜಿ ಲೋಕಾಯುಕ್ತರು.

ಮುಖ್ಯ ಅತಿಥಿಗಳು : ಬಿ ದೇವೇಂದ್ರಪ್ಪ ಶಾಸಕರು, ಜಲೀಲ್ ಸಾಬ್ ರಾಜ್ಯಾಧ್ಯಕ್ಷರು ಪಿಂಜಾರ್ ಸಂಘ, ಹಾಲಮೂರ್ತಿ, ಬಿಇಓ. ಅಧ್ಯಕ್ಷತೆ : ಹಾಜಿ ಜೆ.ಕೆ. ಹುಸೇನ್ ಮಿಯಾಸಾಬ್. ಮೌರ್ಯ ಶೌರ್ಯ ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳು: ಮಹಿಮಾ ಮಾನಸಿ, ಪಾಲ್ಗುಣಿ ಹೆಗ್ಗಣ. ಪ್ರಶಸ್ತಿ ಪ್ರದಾನ ಸಮಾರಂಭ : ಸಂಜೆ 4:30 ಗಂಟೆಗೆ.





### ಶಿರಡಿ ಸಾಯಿಬಾಬಾ ಮಂದಿರದಲ್ಲಿ ವಿಶೇಷ ಪೂಜೆ

ದಾವಣಗೆರೆ, ಡಿ. 26 - ನಗರದ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಹೊಸ್ತಿಲ ಹುಣ್ಣಿಮೆ ಪ್ರಯುಕ್ತ ಶ್ರೀ ದತ್ತಾತ್ರೇಯ ಸ್ವಾಮಿ ಹಾಗೂ ಶ್ರೀ ಶಿರಡಿ ಸಾಯಿಬಾಬಾ ರವರಿಗೆ ಅಭಿಷೇಕ, ವಿಶೇಷ ಹೂವಿನ ಅಲಂಕಾರ ಸೇವೆ ಹಾಗೂ ಪ್ರಸಾದ ಸೇವೆ ಏರ್ಪಡಿಸಲಾಗಿತ್ತು.

# ಡಾ. ಬಿನಯ್ ಸಿಂಗ್ ನಾಯಕತ್ವದ ದಾವಣಗೆರೆ ಸ್ಟಾರ್ಸ್ ತಂಡಕ್ಕೆ ಲೆಜೆಂಡ್ಸ್ ಕಪ್

### ಐಎಂಎ ಕ್ರಿಕೆಟ್

ದಾವಣಗೆರೆ, ಡಿ. 26- ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಪ್ರತಿ ವರ್ಷ ನಡೆಸುವ ಕ್ರಿಕೆಟ್ ಪಂದ್ಯಾವಳಿಯು ಈ ಬಾರಿ ಬೆಂಗಳೂರಿನ ಯಲಹಂಕ ಐಎಂಎ ವತಿಯಿಂದ ಏರ್ಪಾಡಾಗಿತ್ತು.

ರಾಜ್ಯದ ವಿವಿಧ ಭಾಗಗಳಿಂದ ಒಟ್ಟು 40 ಟೀಂಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು, ನಗರದ ಕೀಲು-ಮೂಳೆ ತಜ್ಞ ಡಾ. ಬಿನಯ್ ಸಿಂಗ್ ನಾಯಕತ್ವದ ಸೀನಿಯರ್ ಟೀಂಗೆ ಲೆಜೆಂಡ್ಸ್ ಕಪ್ ಅನ್ನು ದಾವಣಗೆರೆ ಸ್ಟಾರ್ಸ್ ತಂಡ ತಮ್ಮದಾಗಿಸಿಕೊಂಡಿದೆ.



ಐಎಂಎ ವತಿಯಿಂದ ಕಳೆದ 16 ವರ್ಷಗಳಿಂದ ನಡೆಯುತ್ತಿರುವ ಈ ಪಂದ್ಯಾವಳಿಯಲ್ಲಿ ದಾವಣಗೆರೆ ತಂಡವು ಪ್ರಥಮ ಬಾರಿಗೆ ಜಯ ಸಾಧಿಸಿದೆ.

ಹಾಸನ ಟೀಂ ವಿರುದ್ಧ 31 ರನ್‌ಗಳ ಅಂತರದಿಂದ ಜಯ ಸಾಧಿಸಿ, ತಂಡದ ನಾಯಕ ಡಾ. ಬಿನಯ್ ಸಿಂಗ್ ಅವರು ಮ್ಯಾನ್‌ಆಫ್ ದಿ ಮ್ಯಾಚ್ ಪ್ರಶಸ್ತಿ ಪಡೆದಿದ್ದು, ದಾವಣಗೆರೆ ಸ್ಟಾರ್ಸ್ ತಂಡದಿಂದ ಡಾ. ಬಿನಯ್ ಸಿಂಗ್ ಅವರು ಕೇವಲ 23 ಬಾಲ್‌ಗಳಲ್ಲಿ 56 ರನ್‌ಗಳ ಬಿರುಸಿನ ಆಟ (2 ಸಿಕ್ಸರ್, 8 ಬೌಂಡರಿ)ದೊಂದಿಗೆ ತಂಡದ ರನ್ ಮೊತ್ತವನ್ನು 135 ಗಳಿಸುವಲ್ಲಿ ಯಶಸ್ವಿಯಾಗಿದೆ. ಟೂರ್ನಮೆಂಟ್‌ನಲ್ಲಿ 10 ಓವರ್‌ನಲ್ಲಿ 1 ವಿಕೆಟ್ ಪತನದೊಂದಿಗೆ 135 ರನ್ ಗಳಿಸಿ ದಾಖಲೆ ಸಾಧಿಸಿದೆ.

ಡಾ. ಪ್ರಕಾಶ್ ಮತ್ತಿಹಳ್ಳಿ, ಡಾ. ವಿಜಯ್, ಡಾ. ರಾಜೇಶ್, ಡಾ. ಮಧು, ಡಾ. ವಿಜಯ್ ಕುಮಾರ್, ಡಾ. ಸಂಜಯ್, ಡಾ. ಪ್ರಸನ್ನ, ಡಾ. ವಿನಾಯಕ್, ಡಾ. ವೆಂಕಟೇಶ್, ಡಾ. ರಾಜು, ಡಾ. ವಿನಯ್ ದಾವಣಗೆರೆ ಸ್ಟಾರ್ಸ್ ತಂಡದಲ್ಲಿದ್ದರು.

## ಡಾ. ಎಸ್. ಶಿಶುಪಾಲ ಅವರಿಗೆ ಡಾ. ಹೆಚ್.ಎನ್. ನರಸಿಂಹಯ್ಯ ಪ್ರಶಸ್ತಿ



ದಾವಣಗೆರೆ, ಡಿ. 26- ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ (ದೊಡ್ಡಬಳ್ಳಾಪುರ) ಕೊಡಮಾಡುವ ಡಾ. ಹೆಚ್. ಎನ್. ನರಸಿಂಹಯ್ಯ ಪ್ರಶಸ್ತಿಗೆ ನಗರದ ದಾವಣಗೆರೆ ವಿವಿ ಪ್ರಾಧ್ಯಾಪಕ ಡಾ. ಎಸ್. ಶಿಶುಪಾಲ ಭಾಜನರಾಗಿದ್ದಾರೆ.

ವಿಜ್ಞಾನವನ್ನು ತಮ್ಮ ಲೇಖನಗಳ ಮೂಲಕ ಜನರಿಗೆ ತಲುಪಿಸಿ ವೈಜ್ಞಾನಿಕ ಚಿಂತನೆಯನ್ನು ಹೆಚ್ಚಿಸುವಲ್ಲಿ ಸಲ್ಲಿಸುತ್ತಿರುವ ಸೇವೆಗಾಗಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಪರಿಷತ್ತಿನ ಪ್ರಕಟಣೆ ತಿಳಿಸಿದೆ. ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಇದೇ ದಿನಾಂಕ 29 ಮತ್ತು 30ರಂದು ನಡೆಯಲಿರುವ ವಿಜ್ಞಾನ ಸಮ್ಮೇಳನದಲ್ಲಿ ಡಾ. ಎಸ್. ಶಿಶುಪಾಲ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

## ಆನಂದತೀರ್ಥಚಾರ್ ದಂಪತಿಗೆ ಸನ್ಮಾನ



ದಾವಣಗೆರೆ, ಡಿ. 26- ಬೆಂಗಳೂರಿನ ಜ್ಞಾನ ಜ್ಯೋತಿ ವಿದ್ಯಾ ಸಂಸ್ಥೆಯು ಬೆಂಗಳೂರಿನಲ್ಲಿ ನಿನ್ನೆ ನಡೆಸಿದ ರಾಜ್ಯ ಮಟ್ಟದ ಮಹಿಳಾ ಜ್ಯೋತಿಷ್ಯ ಸಮ್ಮೇಳನದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ನಾಡಿನ ದಂಪತಿಗಳಿಗೆ ಕೊಡಮಾಡುವ ಜೀವಮಾನ ಸಾಧನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿಗೆ ಭಾಜನರಾಗಿರುವ ನಗರದ ಶ್ರೀಮತಿ ವೀಣಾ ಮತ್ತು ಸಿ.ಕೆ. ಆನಂದತೀರ್ಥಚಾರ್ ದಂಪತಿಗೆ ಜೀವಮಾನ ಸಾಧನ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ನಗರದಲ್ಲಿ ಇಂದು ಕುರಿ ಸಾಗಾಣಿಕೆ ತರಬೇತಿ

ಪಶು ಆಸ್ಪತ್ರೆ ಅವರಣದಲ್ಲಿರುವ ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ಮತ್ತು ನಾಳೆ ಕುರಿ ಮತ್ತು ಮೇಕೆ ಸಾಗಾಣಿಕೆ ತರಬೇತಿ ಮತ್ತು ಇದೇ ದಿನಾಂಕ 29, 30 ರಂದು ಆಧುನಿಕ ಹೈನುಗಾರಿಕೆ ತರಬೇತಿ ಶಿಬಿರವನ್ನು ಆಯೋಜಿ ಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂ 08192-233787ಗೆ ಸಂಪರ್ಕಿಸಬಹುದು.

## ಗೋವಾದಲ್ಲಿ ನೌಕಾ ದಳದ ವಿಮಾನದ ಟೈರು ಸಿಡಿತ

ಪಣಜಿ, ಡಿ. 26 – ಗೋವಾದ ಡಬೋಲಿಮ್ ವಿಮಾನ ನಿಲ್ದಾಣದ ಟ್ಯಾಕ್ಸಿವೇನಲ್ಲಿ ಭಾರತೀಯ ನೌಕಾ ದಳದ ವಿಮಾನದ ಟೈರ್ ಸಿಡಿದಿದೆ. ವಿಮಾನ ಸಾಮಾನ್ಯ ಕಸರತ್ತಿನ ಹಾರಾಟ ಆರಂಭಿಸುವ ವೇಳೆ ಈ ಘಟನೆ ನಡೆದಿದೆ.ಟೈರ್ ಸಿಡಿತದ ಕಾರಣದಿಂದಾಗಿ ಮಿಗ್ - 29ಕೆ ವಿಮಾನ ಟ್ಯಾಕ್ಸಿ ವೇನಲ್ಲೇ ಅತಂತ್ರವಾಯಿತು. ಇದರಿಂದಾಗಿ ಯಾರಿಗೂ ಗಾಯಗಳಾಗಿಲ್ಲ. ಆದರೆ, ಸಂಜೆ 4 ಗಂಟೆಯವರೆಗೆ ವಿಮಾನ ಹಾರಾಟ ನಿಲ್ಲಿಸಬೇಕಾಯಿತು. ಇದರಿಂದ ಪ್ರಯಾಣಿಕರಿಗೆ ತೊಂದರೆಯಾಯಿತು.

## ಗ್ರಾಮಸ್ಥರಿಂದ ಗಲಿಬಿಲಿಯಾಗದೇ ಗಾಂಭೀರ್ಯ ತೋರಿದ ಹುಲಿ

ಫಿಲಿಬಿಟ್ (ಉತ್ತರ ಪ್ರದೇಶ), ಡಿ. 26 – ಉತ್ತರ ಪ್ರದೇಶದ ಫಿಲಿಬಿಟ್ ಹುಲಿ ಸಂರಕ್ಷಿತ ಪ್ರದೇಶದ 4-5 ಕಿ.ಮೀ. ದೂರದ ಹಳ್ಳಿಯಲ್ಲಿ ಹೆಣ್ಣು ಹುಲಿಯೊಂದು ಕಂಡು ಬಂದಿದೆ. ನೂರಾರು ಜನರು ತನ್ನನ್ನು ನೋಡುತ್ತಿದ್ದರೂ, ಕ್ಯಾರೇ ಎನ್ನದೇ ಆರಾಮವಾಗಿದ್ದು ವಿಶೇಷವಾಗಿತ್ತು.

ಸಾಮಾನ್ಯವಾಗಿ ಹುಲಿ ಹಾಗೂ ಮನುಷ್ಯರು ಮುಖಾಮುಖಿಯಾದಾಗ ಉದ್ವಿಗ್ನತೆ ಉಂಟಾಗುತ್ತದೆ. ಆದರೆ, ಅಥ್ಕೊನಾ ಹಳ್ಳಿಗೆ ಬಂದಿದ್ದ ಮೂರು ವರ್ಷ ವಯಸ್ಸಿನ ಈ ಹೆಣ್ಣು ಹುಲಿ, ಗ್ರಾಮಸ್ಥರು ಏನೇ ಚಿತ್ರ ಹಾಗೂ ವಿಡಿಯೋ ತೆಗೆದರೂ ಜಪ್ಪೆನ್ನಲಿಲ್ಲ.

ಹುಲಿ ಆರೋಗ್ಯವಾಗಿದೆ. ಹುಲಿ ವಲಯ ಮಾನವ ವಸತಿಗೆ ಹತ್ತಿರದಲ್ಲಿದೆ. ಹೀಗಾಗಿ ಗ್ರಾಮಸ್ಥರು ಹೆಚ್ಚಾಗಿದ್ದರೂ ಹುಲಿ ಗಲಿಬಿಲಿಯಾಗಿಲ್ಲ ಎಂದು ಅರಣ್ಯಾಧಿಕಾರಿಯೊಬ್ಬರು ಹೇಳಿದ್ದಾರೆ.



ಈ ಬಗ್ಗೆ ಮಾತನಾಡಿರುವ ಫಿಲಿಬಿಟ್ ಹುಲಿ ಧಾಮದ ಉಪ ನಿರ್ದೇಶಕ ನವೀನ್ ಖಂಡೇಲ್ವಾಲ್, ಹುಲಿಯನ್ನು ಈಗ ರಕ್ಷಿಸಲಾಗಿದೆ. ಪಶು ವೈದ್ಯರು ಹುಲಿಯ ಮೇಲೆ ನಿಗಾ ವಹಿಸಿದ್ದಾರೆ. ಇದು 2-3 ವರ್ಷದ ಹೆಣ್ಣು ಹುಲಿ ಎಂದು ಹೇಳಿದ್ದಾರೆ.

ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಹುಲಿ ಗ್ರಾಮದಲ್ಲಿ ಕಾಣಿಸಿಕೊಂಡಿತ್ತು. ಹುಲಿಯನ್ನು ಮೊದಲು ಗ್ರಾಮದಲ್ಲಿ ನಿರ್ಬಂಧಿಸಲಾಯಿತು. ನಂತರ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಅರಿವಳಿಕೆ ಮದ್ದು ನೀಡಿ ವಶಕ್ಕೆ ತೆಗೆದುಕೊಳ್ಳಲಾಯಿತು ಎಂದವರು ಹೇಳಿದರು.

ಹುಲಿ ಇನ್ನೂ ಚಿಕ್ಕ ವಯಸ್ಸಿನದ್ದಾಗಿದೆ. ಜನವಸತಿ ಪ್ರದೇಶದ ಹತ್ತಿರದಲ್ಲೇ ಬೆಳೆದಿದೆ. ಹೀಗಾಗಿ ಅದು ಜನರಿಂದ ಗಲಿಬಿಲಿಗೆ ಒಳಗಾಲಿಲ್ಲ ಎಂದು ಖಂಡೇಲ್ವಾಲ್ ಹೇಳಿದ್ದಾರೆ.

ಹುಲಿ ಕಡೆ ನಾಲ್ಕು ಅರಿವಳಿಕೆ ಚುಚ್ಚುಮದ್ದು ಸಿಡಿಸಲಾಗಿತ್ತು. ಎರಡು ಗುರಿ ತಪ್ಪಿದ್ದವು. ಒಂದನ್ನು ಹುಲಿ ತಾನೇ ಕಿತ್ತುಕೊಂಡಿತು ಎಂದೂ ಅವರು ಹೇಳಿದ್ದಾರೆ.


ನಿಮಗೆ ಈ ಕೆಳಕಂಡ ಸಂಧಿವಾತದ ಲಕ್ಷಣಗಳಿವೆಯೇ ?



- ♦ ಕೈ ಕಾಲು ಗಂಟುಗಳಲ್ಲಿ ನೋವು ಮತ್ತು ಬಾವು ಇದೆಯೇ ?
- ♦ ನಿಮ್ಮ ಕೈ ಮತ್ತು ಕಾಲುಗಳ ಗಂಟುಗಳಲ್ಲಿ ವಿರೂಪ (Deformities)ಇದೆಯೇ ?
- ♦ ಬೆಳಿಗ್ಗೆ ಎದ್ದಾಗ ಸೊಂಟ ನೋವು ಮತ್ತು ಕತ್ತು ನೋವು ಇದೆಯೇ ?
- ♦ ಬೆನ್ನು ನೋವು ಮತ್ತು ಸೊಂಟ ನೋವಿನ ಜೊತೆಗೆ ಕಣ್ಣು ಕೆಂಪಾಗಿ ನೋಯುವುದೇ, ಅಥವಾ ಮಂಜಾಗಿ ಕಾಣುವುದೇ ?
- ♦ ಗಂಟು ನೋವಿನ ಖಾಯಿಲೆ ಇದನ್ನು ಪ್ರಾಥಮಿಕ ಹಂತದಲ್ಲಿಯೇ ಕಂಡು ಹಿಡಿದರೆ ನಿಯಂತ್ರಿಸಬಹುದು ವಿರೂಪ (Deformities) ಆದವರಿಗೆ ಮುಂದೆ ಆಗುವ ತೊಂದರೆಯನ್ನು ತಡೆಯಬಹುದು.

♣ RHEUMATOID ARTHRITIS
♣ ANKYLOSING SPONDYLITIS
♣ GOUT ♣ PSORATIC ARTHRITIS
♣ SLE

ಈ ಮೇಲ್ಕಂಡ ಲಕ್ಷಣಗಳ ಯಾವುದೇ ತೊಂದರೆ ಇದ್ದಲ್ಲಿ

ಡಾ. ಸೋಮಶೇಖರ್ (Rheumatologist) ಅವರು
ಜನವರಿ 2024, 3ನೇ ತಾರೀಖು (ಬುಧವಾರ), 4ನೇ ತಾರೀಖು (ಗುರುವಾರ)

ಅನುಗ್ರಹ ಹಾಸ್ಪಿಟಲ್ ಫೋ.: 08192 222292

ಎಂ.ಸಿ.ಸಿ. 'ಬಿ' ಬ್ಲಾಕ್ ದಾವಣಗೆರೆಯಲ್ಲಿ ತಪಾಸಣೆಗೆ ಲಭ್ಯವಿರುತ್ತಾರೆ.